# ಹಿಂದುಳಿದ ವರ್ಗಗಳ ಹರಿಕಾರ ಡಿ. ದೇವರಾಜ ಅರಸು

## ಶಬ್ದಪಾರಮಾರ್ಗಮಶಕ್ಯಂ

ಕರ್ನಾಟಕದ ಆಧುನಿಕ ಚರಿತ್ರೆಯಲ್ಲಿ ಕರ್ನಾಟಕ ಏಕೀಕರಣ ಒಂದು ಮಹತ್ವಪೂರ್ಣ ಐತಿಹಾಸಿಕ ಘಟನೆ. ಹಾಗೆಯೇ ಕನ್ನಡ ವಿಶ್ವವಿದ್ಯಾಲಯದ ಸ್ಥಾಪನೆಯೂ ಮತ್ತೊಂದು ಮಹತ್ವದ ಘಟನೆ. ಕನ್ನಡ-ಕನ್ನಡಿಗ-ಕರ್ನಾಟಕ ಸಂಸ್ಕೃತಿಯ ಕಲ್ಪನೆಯಡಿಯಲ್ಲಿ ಅಸ್ತಿತ್ವಕ್ಕೆ ಬಂದ ಕನ್ನಡ ವಿಶ್ವವಿದ್ಯಾಲಯದ ಹರವು ವಿಸ್ತಾರವಾದದ್ದು. ಈ ಕಾರಣದಿಂದ ಕನ್ನಡ ವಿಶ್ವವಿದ್ಯಾಲಯದ ಆಶಯ ಮತ್ತು ಗುರಿ ಇತರ ವಿಶ್ವವಿದ್ಯಾಲಯಗಳಿಗಿಂತ ಭಿನ್ನ ಹಾಗೂ ಪ್ರಗತಿಪರ. ಕನ್ನಡದ ಸಾಮರ್ಥ್ಯವನ್ನು ಎಚ್ಚರಿಸುವ ಕಾಯಕವನ್ನು ಉದ್ದಕ್ಕೂ ಅದು ನೋಂಪಿಯಿಂದ ಮಾಡಿಕೊಂಡು ಬಂದಿದೆ. ಕರ್ನಾಟಕತ್ವದ 'ವಿಕಾಸ' ಈ ವಿಶ್ವವಿದ್ಯಾಲಯದ ಮಹತ್ತರ ಆಶಯವಾಗಿದೆ.

ಕನ್ನಡ ಅಧ್ಯಯನ ಮೂಲತಃ ಶುದ್ಧ ಜ್ಞಾನದ ಕಾಲ, ದೇಶ, ಜೀವನ ತತ್ವದ ಪರವಾಗಿರುವುದರ ಜೊತೆಗೆ ಅಧ್ಯಯನವನ್ನು ಒಂದು ವಾಗ್ವಾದದ ಭೂಮಿಕೆ ಎಂದು ನಾವು ಭಾವಿಸಬೇಕಾಗಿದೆ. ಕನ್ನಡ ಬದುಕಿನ ಚಿಂತನೆಯ ಬಾಗವೆಂದೇ ಅದನ್ನು ರೂಪಿಸಿ ವಿವರಿಸಬೇಕಾಗಿದೆ. ಅಂದರೆ: ದೇಸಿ ಬೇರುಗಳ ಗುರುತಿಸುವಿಕೆ ಕನ್ನಡ ಅಧ್ಯಯನದ ಮುಖ್ಯ ಭಿತ್ತಿಯಾಗಬೇಕಾಗಿದೆ. ಕನ್ನಡ ಸಂಸ್ಕೃತಿಯು ಬಹುತ್ವದ ನೆಲೆಗಳನ್ನು ಆಧರಿಸಿ ರೂಪುಗೊಂಡಿದೆ. ಸಮಾಜಮುಖಿ ಚಿಂತನೆಗಳ ವ್ಯಾಪಕ ಅಧ್ಯಯನ ಬದುಕಿನ ಸಂಕೀರ್ಣ ಲಕ್ಷಣಗಳ ಸ್ವರೂಪವನ್ನು ಇದು ಪರಿಚಯಿಸುತ್ತದೆ. ನಾವು ಇದನ್ನು ಎಲ್ಲ ವಲಯಗಳಲ್ಲಿ ಕನ್ನಡದ ಅನುಷ್ಠಾನದ ಮೂಲಕ ಉಳಿಸಿ, ಬೆಳೆಸಬೇಕಾಗಿದೆ. ಆಗ ಕನ್ನಡ ಸಂಸ್ಕೃತಿಯು ವಿಶ್ವಪ್ರಜ್ಞೆಯಾಗಿ ರೂಪುಗೊಳ್ಳಲು ಸಾಧ್ಯವಾಗುತ್ತದೆ. 'ಕನ್ನಡದ್ದೇ ಮಾದರಿ'ಯ ಶೋಧ ಇಂದಿನ ಮತ್ತು ಬರುವ ದಿನಗಳ ತೀವ್ರ ಅಗತ್ಯವಾಗಿದೆ.

ಕನ್ನಡ ಸಂಸ್ಕೃತಿಯ ಭಾಗವಾಗಿರುವ ಕನ್ನಡ ಅಧ್ಯಯನವು ಕಾಲದಿಂದ ಕಾಲಕ್ಕೆ ಹೊಸ ತಿಳಿವಳಿಕೆಯನ್ನು ತನ್ನ ತೆಕ್ಕೆಗೆ ಜೋಡಿಸಿಕೊಳ್ಳುತ್ತ ಬಂದಿದೆ. ಹೀಗಾಗಿ ವಿದೇಶಿ ಮತ್ತು ದೇಶಿ ವಿದ್ವಾಂಸರು ತೊಡಗಿಸಿಕೊಂಡ ಈ ವಿದ್ವತ್‌ಕ್ಷೇತ್ರದಲ್ಲಿ ಮುಂದಿನ ವಿದ್ವಾಂಸರು ಕಾಲದಿಂದ ಕಾಲಕ್ಕೆ ಹೊಸಬೆಳೆಯನ್ನು ತೆಗೆಯುತ್ತ ಬಂದಿದ್ದಾರೆ. ಕನ್ನಡ ಅಧ್ಯಯನ ಪಳೆಯುಳಿಕೆಯ ಶಾಸ್ತ್ರವಾಗದೆ, ಬದಲಾಗುತ್ತಿರುವ ಕಾಲಮಾನದಲ್ಲಿ ಎದುರಾಗುತ್ತಿರುವ ಆಹ್ವಾನಕ್ಕೆ ತಕ್ಕಂತೆ ತನ್ನ ಗತಿಯನ್ನು ಬದಲಾಯಿಸಿಕೊಳ್ಳುತ್ತ ಬಂದಿರುವುದು ಗಮನಿಸತಕ್ಕ ಅಂಶ. ಸಾಂಪ್ರದಾಯಿಕ ಚಿಂತನೆಗಳು ಆಧುನೀಕರಣದ ಈ ಕಾಲಘಟ್ಟದಲ್ಲಿ ಸಕಾಲಿಕಗೊಳ್ಳುವುದು ಅನಿವಾರ್ಯವಾಗಿದೆ. ಮಾಹಿತಿ ತಂತ್ರಜ್ಞಾನದ ಮೂಲಕ ಜಗತ್ತಿನ ಜ್ಞಾನಪ್ರವಾಹವೇ ನಮ್ಮ ಅಂಗೈಯೊಳಗೆ ಚುಳುಕಾಗುವ ಈ ಸಂದರ್ಭದಲ್ಲಿ ಕನ್ನಡದ ಚಹರೆ ಮತ್ತು ಕನ್ನಡ ಭಾಷೆಯ ಚಲನಶೀಲತೆಯನ್ನು ಶೋಧಿಸಲಿಕ್ಕೆ ಭಾಷಾ ಆಧುನೀಕರಣ ಮತ್ತು ಪ್ರಮಾಣೀಕರಣದ ಪ್ರಕ್ರಿಯೆಗಳ ನೆಲೆಯಲ್ಲಿ ಅಧ್ಯಯನದ ಹೊಸ ಸಾಧ್ಯತೆಗಳನ್ನು ಅನುಲಕ್ಷಿಸಿ, ಭಾಷಾನೀತಿ, ಭಾಷಾಯೋಜನೆ ರೂಪಿಸುವುದು ಅನಿವಾರ್ಯ ಹಾಗೂ ಅವಶ್ಯವಾಗಿದೆ. ಆಗ ಅಧ್ಯಯನದ ಸ್ವರೂಪ ಹಾಗೂ ಬಳಕೆಯ ವಿಧಾನದಲ್ಲಿ ಪರಿವರ್ತನೆ ಸಾಧ್ಯವಾಗುತ್ತದೆ.

ನಮ್ಮೆದುರು ನುಗ್ಗಿ ಬರುತ್ತಿರುವ ಜಾಗತೀಕರಣಕ್ಕೆ ಪ್ರತಿರೋಧವಾಗಿ ನಮ್ಮ ದೇಶೀಯ ಜ್ಞಾನಪರಂಪರೆಯನ್ನು ಮರುಶೋಧಿಸಿ ಆ ಮೂಲಕ ಕುಸಿಯುತ್ತಿರುವ ನಮ್ಮ ಬೇರುಗಳನ್ನು ಬಲಗೊಳಿಸಿಕೊಳ್ಳಬೇಕಾಗಿದೆ. ಭಾಷೆ, ಸಾಹಿತ್ಯ, ವ್ಯಾಕರಣ, ಛಂದಸ್ಸು, ಚರಿತ್ರೆ, ಕೃಷಿ, ವೈದ್ಯ, ಪರಿಸರ ಮುಂತಾದ ಅಧ್ಯಯನ ವಿಷಯಗಳನ್ನು ಹೊಸ ಆಲೋಚನೆಯ ನೆಲೆಯಲ್ಲಿ ವಿಶ್ಲೇಷಿಸಬೇಕಾಗಿದೆ. ಆಧುನಿಕ ವಿಜ್ಞಾನ, ತಂತ್ರಜ್ಞಾನವೇ 'ಜ್ಞಾನ' ಎಂದು ರೂಪಿಸಿರುವ ಇಂದಿನ ಆಲೋಚನೆಗೆ ಪ್ರತಿಯಾಗಿ ಈ ಜ್ಞಾನಶಾಖೆಗಳಲ್ಲಿ ಹುದುಗಿರುವ ದೇಶಿ ಪರಂಪರೆಯ ಜ್ಞಾನದ ಹುಡುಕಾಟ ನಡೆಯಬೇಕಾಗಿದೆ. ಅಂತಹ ಪ್ರಯತ್ನಗಳಿಗೆ ಬೇಕಾದ ಮಾರ್ಗದರ್ಶಕ ಸೂತ್ರಗಳ ಹಾಗೂ ಆಕರ ಪರಿಕರಗಳ ನಿರ್ಮಾಣದ ನೆಲೆ ತುಂಬ ಮುಖ್ಯವಾಗಿದೆ. ಕನ್ನಡ ವಿಶ್ವವಿದ್ಯಾಲಯವು ಕಳೆದ ಹದಿನಾರು ವರ್ಷಗಳಿಂದ ಈ

ಕೆಲಸಗಳನ್ನು ಹಲವು ಯೋಜನೆಗಳ ಮೂಲಕ ರೂಪಿಸಿಕೊಂಡಿದೆ, ರೂಪಿಸಿಕೊಳ್ಳುತ್ತಿದೆ. ಇದೊಂದು ಚಲನಶೀಲ ಪ್ರಕ್ರಿಯೆಯಾಗಿದೆ. ಸಮಕಾಲೀನ ಭಾಷಿಕ, ಸಾಂಸ್ಕೃತಿಕ ಸಮಸ್ಯೆಗಳಿಗೆ ಮುಖಾಮುಖಿಯಾಗುತ್ತ ಕನ್ನಡ ನಾಡುನುಡಿಯನ್ನು ಹೊಸದಾಗಿ ಶೋಧಿಸುತ್ತಾ, ವಿವರಿಸುತ್ತಾ ಬಂದಿದೆ. ಅಂದರೆ: ಕನ್ನಡದ ಅರಿವಿನ ವಿಕೇಂದ್ರೀಕರಣವೇ ವರ್ತಮಾನದ ಹೊಸ ಬೆಳವಣಿಗೆ. ಇದು ಕನ್ನಡ ವಿಶ್ವವಿದ್ಯಾಲಯದ ಜೀವಧಾತುವಾಗಿದೆ.

ಕನ್ನಡ ವಿಶ್ವವಿದ್ಯಾಲಯವು ಕನ್ನಡದ ಹತ್ತಾರು ಕ್ಷೇತ್ರಗಳಿಗೆ ಸಂಬಂಧಿಸಿದ ಪ್ರಮುಖ ವಿಷಯಗಳನ್ನು ಕುರಿತು ಸಾಮಾನ್ಯ ಓದುಗರಿಗೆ ಅರಿವನ್ನು ನೀಡಲು ಮಂಟಪಮಾಲೆಯಲ್ಲಿ ಕಿರುಪುಸ್ತಕಗಳನ್ನು ಪ್ರಕಟಿಸುತ್ತಿದೆ. 'ಹಿಂದುಳಿದ ವರ್ಗಗಳ ಹರಿಕಾರ ಡಿ. ದೇವರಾಜ ಅರಸು' ಎಂಬ ಕಿರುಹೊತ್ತಿಗೆಯನ್ನು ಈ ಮಾಲೆಗಾಗಿ ಬರೆದುಕೊಟ್ಟಿರುವ ಡಾ. ಹಣಮಂತ್ರಾಯ ದೊಡ್ಡಮನಿ ಅವರಿಗೆ ವಿಶ್ವವಿದ್ಯಾಲಯದ ಕೃತಜ್ಞತೆಗಳು ಸಲ್ಲುತ್ತವೆ.

ಈ ಗ್ರಂಥವನ್ನು ಅಚ್ಚುಕಟ್ಟಾಗಿ ಹೊರತರುತ್ತಿರುವ ಪ್ರಸಾರಾಂಗದ ನಿರ್ದೇಶಕರಾದ ಡಾ.ಮಂಜುನಾಥ ಬೇವಿನಕಟ್ಟಿ ಮತ್ತು ಸಹಾಯಕ ನಿರ್ದೇಶಕರಾದ ಶ್ರೀ ಬಿ. ಸುಜ್ಞಾನಮೂರ್ತಿ ಮತ್ತು ಶ್ರೀ ಕೆ.ಎಲ್. ರಾಜಶೇಖರ್ ಅವರಿಗೆ ಆಭಾರಿಯಾಗಿದ್ದೇನೆ.

**ಡಾ.ಎ. ಮುರಿಗೆಪ್ಪ**
ಕುಲಪತಿ

## (೧)

ಕರ್ನಾಟಕ ಹಾಗೂ ಭಾರತದ ರಾಜಕಾರಣದ ಚರಿತ್ರೆಯಲ್ಲಿ ಡಿ. ದೇವರಾಜ ಅರಸು ಅವರಿಗೆ ವಿಶಿಷ್ಟ ಸ್ಥಾನವಿದೆ. ರಾಮಮನೋಹರ ಲೋಹಿಯಾ, ಮಹಾತ್ಮಗಾಂಧಿ, ಅಂಬೇಡ್ಕರ್ ಹಾಗೂ ಜಯಪ್ರಕಾಶ್ ನಾರಾಯಣ ಮೊದಲಾದವರು ಕಂಡಿದ್ದ ಕನಸನ್ನು ನನಸು ಮಾಡಿದ ಕೀರ್ತಿ ದೇವರಾಜ ಅರಸು ಅವರಿಗೆ ಸಲ್ಲುತ್ತದೆ. ದಲಿತ, ಹಿಂದುಳಿದ ಹಾಗೂ ಬಡವರ ಪರವಾದ ಚಿಂತನೆಯುಳ್ಳ ವ್ಯಕ್ತಿ ದೇವರಾಜ ಅರಸು. ಈ ವರ್ಗಗಳನ್ನು ರಾಜಕೀಯ ವಲಯದಲ್ಲಿ ಶಕ್ತಿವಲಯವನ್ನಾಗಿ ಸಂಘಟಿಸಿದ್ದು ಸಣ್ಣ ಸಾಧನೆಯೇನಲ್ಲ. ೧೯೫೨ರಿಂದಲೂ ಕರ್ನಾಟಕದ ರಾಜಕಾರಣದಲ್ಲಿದ್ದ ಅರಸು ಅವರು, ಮುಖ್ಯಮಂತ್ರಿಯಾದ ನಂತರ ತಮ್ಮ ಅನುಭವವನ್ನು ದಲಿತ ಹಾಗೂ ಬಡವರ ಪರವಾದ ಯೋಜನೆಗಳನ್ನು ಅನುಷ್ಠಾನಕ್ಕೆ ತರುವುದಕ್ಕಾಗಿ ಬಳಸಿಕೊಂಡರು. ಏಕೀಕರಣದ ನಂತರ ಕರ್ನಾಟಕ ರಾಜಕಾರಣದಲ್ಲಿ ಏಕಸ್ವಾಮ್ಯತೆಯನ್ನು ಸ್ಥಾಪಿಸಿಕೊಂಡಿದ್ದ ಬ್ರಾಹ್ಮಣ, ಲಿಂಗಾಯತ ಹಾಗೂ ಒಕ್ಕಲಿಗರಂಥ ದೊಡ್ಡ ಸಮುದಾಯದವರನ್ನು ದೂರವಿಟ್ಟು ರಾಜಕಾರಣ ಮಾಡಿದ ಹೆಗ್ಗಳಿಕೆ ದೇವರಾಜ ಅರಸು ಅವರದು. ದಲಿತ, ಹಿಂದುಳಿದ ವರ್ಗ ಹಾಗೂ ಪರಿಶಿಷ್ಟ ಜಾತಿ-ವರ್ಗಗಳ ಜೊತೆಗೆ ಅಲ್ಪಸಂಖ್ಯಾತ ಹಾಗೂ ಇನ್ನಿತರೆ ಜನಾಂಗಗಳ ಬಡವರನ್ನು ಒಂದುಗೂಡಿಸಿ ಕರ್ನಾಟಕ ರಾಜಕಾರಣ ಮತ್ತು ಸಮಾಜದಲ್ಲಿ ಅವರಿಗೆ ಒಂದು ಸೂಕ್ತ ಸ್ಥಾನ ಕೊಡಿಸಿದ ಹೆಗ್ಗಳಿಕೆ ಅರಸು ಅವರಿಗೆ ಸಲ್ಲುತ್ತದೆ.

**ಕೌಟುಂಬಿಕ ಹಿನ್ನೆಲೆ**

ಮೈಸೂರಿನ ಮೂರನೆಯ ಮಂಗರಸರ ಮೂಲ ವಂಶದ ಮನೆತನಕ್ಕೆ ಸೇರಿದ (ಜೈನಕ್ಷತ್ರಿಯ ಕುಟುಂಬ) ದೇವರಾಜ ಅರಸು, ಮೈಸೂರು ಜಿಲ್ಲೆಯ, ಹುಣಸೂರು ತಾಲ್ಲೂಕಿನ ಕಲ್ಲಹಳ್ಳಿ ಎಂಬ ಗ್ರಾಮದಲ್ಲಿ ೧೯೧೫ ಆಗಸ್ಟ್ ೨೦ರಂದು, ದೇವರಾಜ ಮತ್ತು ದೇವೀರಮ್ಮಣ್ಣಿ ದಂಪತಿಗಳ ಮೊದಲ ಮಗನಾಗಿ ಜನಿಸಿದರು. ಕಲ್ಲಹಳ್ಳಿ ಎಂಬುದು ಇತಿಹಾಸ ಪ್ರಸಿದ್ಧ ಮೂರನೆಯ ಮಂಗರಸರ ರಾಜಧಾನಿಯಾಗಿತ್ತು, ಕಲ್ಲಹಳ್ಳಿಯ ಮೂಲ ಹೆಸರು 'ದಾತುಪುರ' ಎಂದು. ಇದು ಚಿಲಕುಂದಿ ಹೋಬಳಿಗೆ ಸೇರಿದ ಗ್ರಾಮವಾಗಿತ್ತು. ದೇವೀರಮ್ಮಣ್ಣಿಯವರ ತಾಯಿಗೆ ಗಂಡುಮಕ್ಕಳಾಗದಿದ್ದ ಕಾರಣ ಬೆಟ್ಟದಪುರದ ದೇವರಾಜ ಅರಸು ಅವರನ್ನು ಅರಮನೆಯ ಅಳಿಯನಾಗಿ ಕಲ್ಲಹಳ್ಳಿಯಲ್ಲಿ ಬಂದು ನೆಲಸುವಂತೆ ಮಾಡಿದರು. ಇವರು ಕ್ಷತ್ರಿಯ ಕುಟುಂಬದವರಾದರೂ ವ್ಯವಸಾಯ ಇವರ

ಕುಟುಂಬದ ಮೂಲ ವೃತ್ತಿಯಾಗಿತ್ತು. ಬಾಲ್ಯದಲ್ಲೇ ತಂದೆಯನ್ನು ಕಳೆದುಕೊಂಡರು. ನಂತರ ತಾಯಿಯ ಅಕ್ಕರೆಯಲ್ಲಿ ಬೆಳೆದರು. ಚಿಕ್ಕಂದಿನಲ್ಲೆ ಗರಡಿ ಮನೆಗೆ ಹೋಗಿ ಕುಸ್ತಿ ಕಲಿತು ಪೈಲ್ವಾನ್ ಎನಿಸಿಕೊಳ್ಳುವಷ್ಟು ದೇಹದಾರ್ಢ್ಯವನ್ನು ತಾರುಣ್ಯದಲ್ಲೇ ಪಡೆದರು.

**ಶಿಕ್ಷಣ, ಪರಿಸರ ಹಾಗೂ ಪ್ರಭಾವ**

ಅರಸು ಅವರು ಪ್ರಾಥಮಿಕ ಶಿಕ್ಷಣವನ್ನು ಕಲ್ಲಹಳ್ಳಿಯಲ್ಲೇ ಮಾಡಿದರು ಮತ್ತು ಅಪ್ಪಾಜೈ ಎಂಬುವರು ಅರಸು ಅವರಿಗೆ ಮನೆಯ 'ಜಗಲಿ'ಯಲ್ಲಿ ಪಾಠವನ್ನು ಬೋಧನೆ ಮಾಡುತ್ತಿದ್ದರು. ಆದರೆ ದೇವರೀರಮ್ಮಣ್ಣಿಯವರಿಗೆ ತನ್ನ ಮಗ ಚೆನ್ನಾಗಿ ಓದಿ ದೊಡ್ಡ ಕೆಲಸ ಸಂಪಾದಿಸಬೇಕೆಂಬ ಆಸೆ. ಹೀಗಾಗಿ ಮೈಸೂರಿನ ಮಹಾರಾಜ ಚಾಮರಾಜ ಒಡೆಯರು ಸ್ಥಾಪಿಸಿದ್ದ ಅರಸು ಬೋರ್ಡಿಂಗ್ ಶಾಲೆಗೆ ಸೇರಿದರು. ಆದರೆ ಅಲ್ಲಿನ ರೀತಿ-ನೀತಿಗಳು ಸ್ವತಂತ್ರ ಪ್ರವೃತ್ತಿಯ ಅರಸು ಅವರಿಗೆ ಸರಿ ಕಾಣಲಿಲ್ಲ. ಅಲ್ಲಿ ಕೇವಲ ಆರನೆಯ ತರಗತಿಯವರೆಗೆ ಓದಿ ಹೊರ ಬಂದರು. ಮುಂದೆ ಹೈಸ್ಕೂಲ್ ಶಿಕ್ಷಣಕ್ಕೆ ಮೈಸೂರಿಗೆ ಬಂದು ಅಲ್ಲಿಯೇ ಇಂಟರ್ ಮೀಡಿಯೇಟ್ ಮುಗಿಸಿದ ನಂತರ ಬೆಂಗಳೂರಿಗೆ ಬಂದು ಸೆಂಟ್ರಲ್ ಕಾಲೇಜ್ ಸೇರಿದರು. ಆಗ ಅದೊಂದು ಹೆಸರಾಂತ ವಿದ್ಯಾಸಂಸ್ಥೆಯಾಗಿತ್ತು. ಅಲ್ಲಿ ಓದಿ ವಿಜ್ಞಾನದಲ್ಲಿ ಪದವಿಯನ್ನು ಪಡೆದರು. ಹೀಗಾಗಿ ಓದುವುದನ್ನೇ ಗೀಳಾಗಿಸಿ ಕೊಂಡ ಅವರು ತತ್ವಶಾಸ್ತ್ರದಲ್ಲಿ ಅಭಿರುಚಿ ಬೆಳೆಸಿಕೊಳ್ಳಲು ಸಾಧ್ಯವಾಯಿತು. ಅಲ್ಲದೆ ಕುವೆಂಪು, ಬೇಂದ್ರೆ, ಕಾರಂತರ ಸಾಹಿತ್ಯವನ್ನು ಓದಿ ಕನ್ನಡ ನಾಡು-ನುಡಿಯ ಬಗೆಗೆ ಒಲವು ಬೆಳೆಸಿಕೊಂಡರು. ಸಮಾಜವಾದ, ಸಾಮಾಜಿಕ ಪ್ರಜ್ಞೆ ಎಲ್ಲವೂ ಈ ಬುದ್ಧಿಜೀವಿಗಳ ಬರಹಗಳಲ್ಲೇ ಬಿಂಬಿತವಾಗಿದೆ ಎನ್ನುತ್ತಾರೆ ಅರಸು.

ಬೆಂಗಳೂರಿನಲ್ಲಿ ವಿದ್ಯಾಭ್ಯಾಸ ಮುಗಿಸಿಕೊಂಡು ಮಣ್ಣಿನ ಮಗನಾಗಲು ಮತ್ತೆ ಕಲ್ಲಹಳ್ಳಿಗೆ ಹಿಂತಿರುಗಿ ಬಂದ ಅರಸು ವ್ಯವಸಾಯದಲ್ಲಿ ತೊಡಗಿದರು. ಕಲ್ಲಹಳ್ಳಿಯ ಪರಿಸರವನ್ನು ಬಹು ಆತ್ಮೀಯವಾಗಿ ಕಂಡಿದ್ದ ಅವರು, ಅಲ್ಲಿನ ಅಭಿವೃದ್ಧಿಗಾಗಿ ಕೆಲಸ ಮಾಡಿದರು. ಹಳ್ಳಿಗರ ಮೂಲ ಬದುಕನ್ನು ರೂಪಿಸುವ ಕೃಷಿಯ ಬದುಕನ್ನು ಅವರು ಗಾಢವಾಗಿ ಪ್ರೀತಿಸಿದರು. ಸ್ವತಃ ಕೃಷಿಕರಾಗಿ, ಕಟ್ಟಿಗೆ ವ್ಯಾಪಾರಿಯಾಗಿ, ಹೋರಿ ಎತ್ತುಗಳನ್ನು ಮೇಯಿಸುವ ದನಗಾಹಿಯಾಗಿ ಹಾಗೂ ಹಾಲು ಮಾರುವವರಾಗಿ ತಮ್ಮ ಬದುಕನ್ನು ನಡೆಸಿದರು. ಇದು ಸುಲಭವಾಗಿ ಕಂಡರೂ ಅದರಲ್ಲಿನ ಕಾಯಕ ಮೌಲ್ಯ ಅನನ್ಯವಾದದ್ದು.

ನಟನೆಯಲ್ಲಿಯೂ ಅಭಿರುಚಿ ಹೊಂದಿದ್ದ ಅರಸುಗೆ ಸಹಜವಾಗಿಯೇ ಬೆಂಗಳೂರಿನಲ್ಲಿ ಚಲನಚಿತ್ರ ಗೆಳೆಯರ ಸಹವಾಸ ಲಭಿಸಿತ್ತು. ಆಗ ನಿರ್ಮಾಣದ ಹಂತದಲ್ಲಿದ್ದ 'ಭಕ್ತ ರಾಮದಾಸ' ಚಲನಚಿತ್ರದಲ್ಲಿನ ಪಾತ್ರವೊಂದನ್ನು ಅಭಿನಯಿಸಲು ಒಪ್ಪಿದ್ದ ಅರಸು, ಅದೇಕೋ ಈ ಸಿನಿಮಾ ಮಂದಿಯ ಸಹವಾಸ ಬೇಡ ಎಂದು ಚಲನಚಿತ್ರರಂಗದಿಂದ ಹೊರಬಂದರು. ಆದರೆ ರಾಜಕೀಯ ರಂಗ ಅವರನ್ನು ಕರ್ನಾಟಕದ ರಾಜಕಾರಣಕ್ಕೆ ಧುಮುಕುವಂತೆ ಪ್ರೇರೇಪಿಸಿತು.

೧೯೪೧ರಲ್ಲಿ ರಾಜಕಾರಣದ ನಂಟು ಬೆಳಸಿಕೊಂಡ ದೇವರಾಜ ಅರಸು ಅವರು, ೧೯೪೩ ರಲ್ಲಿ ವೈವಾಹಿಕ ಬದುಕಿಗೆ ಕಾಲಿರಿಸಿದರು. ಚದುರಂಗರ ಅಣ್ಣ ಮುದ್ದುರಾಜೇ ಅರಸು ಅವರು ಪಾಳೆಯಗಾರ ವಂಶಕ್ಕೆ ಸೇರಿದ ಚಿಕ್ಕಮ್ಮಣಿಯವರೊಂದಿಗೆ ದೇವರಾಜ ಅರಸರ ವಿವಾಹ ನೆರವೇರಿಸಿದರು. ಈ ದಂಪತಿಗಳಿಗೆ ಗಂಡು ಸಂತಾನವಿರಲಿಲ್ಲ. ಅವರಿಗೆ ಚಂದ್ರಪ್ರಭಾ, ನಾಗರತ್ನ ಮತ್ತು ಭಾರತಿ ಎಂಬ ಹೆಣ್ಣು ಮಕ್ಕಳು ಜನಿಸಿದರು. ನಾಗರತ್ನ ಎನ್ನುವ ಎರಡನೆಯ ಮಗಳು ತಂದೆಯವರಿಗೆ ರಾಜಕೀಯ ಗುರುವಿನಂತಿದ್ದವಳು. ಈಕೆಯೊಂದಿಗೆ ಅರಸು, ಕರ್ನಾಟಕ ರಾಜಕಾರಣ ಕುರಿತಂತೆ ಮತ್ತು ಕನ್ನಡ ಸಾಹಿತ್ಯದ ಕುರಿತಂತೆ ಗಹನ ವಿಚಾರಗಳನ್ನು ಚರ್ಚಿಸುತ್ತಿದ್ದರು.

**ರಾಜಕಾರಣದ ಪ್ರವೇಶ ಹಾಗೂ ಏಳಿಗೆ**

ದೇವರಾಜ ಅರಸರಿಗೆ ರಾಜಕೀಯ ನಂಟು ಬೆಳೆದದ್ದು ೧೯೪೧ರಿಂದ. ಆಗ ದೇಶದಲ್ಲಿ ಸ್ವಾತಂತ್ರ್ಯ ಸಂಗ್ರಾಮದ ಕಾವು ತೀವ್ರವಾಗಿತ್ತು. ಮಹಾತ್ಮ ಗಾಂಧಿಯವರು 'ಮಾಡು ಇಲ್ಲವೆ ಮಡಿ' ಎಂದು ಕರೆಕೊಟ್ಟಿದ್ದರು. ಹುಣಸೂರಿನ ಖ್ಯಾತ ವಕೀಲ ಕೃಷ್ಣಮೂರ್ತಿಯವರ ಸಂಪರ್ಕವನ್ನು ಬೆಳಸಿದ ದೇವರಾಜ ಅರಸರು ರಾಜಕಾರಣದಲ್ಲಿ ಪ್ರಥಮ ಪಾಠಗಳನ್ನು ಅವರ ಮಾರ್ಗದರ್ಶನದಲ್ಲಿ ಕಲಿತರು. ಇವರ ಜೊತೆಗೆ ಸಾಹುಕಾರ ಚೆನ್ನಯ್ಯನವರ ಪ್ರೋತ್ಸಾಹದಿಂದ ೧೯೪೧ರಲ್ಲಿ ಮೈಸೂರು ಪ್ರಜಾಪ್ರತಿನಿಧಿ ಸಭೆಗೆ ನಡೆದ ಚುನಾವಣೇಯಲ್ಲಿ ಕಾಂಗ್ರೆಸ್ ಅಭ್ಯರ್ಥಿಯಾಗಿ ಸ್ಪರ್ಧಿಸಿ ಆಯ್ಕೆಯಾದರು. ೧೯೪೨ರಲ್ಲಿ ನಡೆದ ಕ್ವಿಟ್ ಇಂಡಿಯಾ ಚಳವಳಿಯಲ್ಲಿ ಭಾಗವಹಿಸಿ ಸೆರಮನೆವಾಸವನ್ನೂ ಅನುಭವಿಸಿದರು. ೧೯೪೫ರಲ್ಲಿ ಮತ್ತೆ ಮೈಸೂರು ಪ್ರಜಾಪ್ರತಿನಿಧಿ ಸಭೆಗೆ ಆಯ್ಕೆಯಾದರು. ಆಗ ಅರಸರಿಗೆ ಕೇವಲ ೨೬ ವರ್ಷ ವಯಸ್ಸು. ಪ್ರಜಾಪ್ರತಿನಿಧಿ ಸಭೆಯ ಅತ್ಯಂತ ಕಿರಿಯ ಸದಸ್ಯರೆಂಬ ಹೆಗ್ಗಳಿಕೆಯಿಂದ ವಿಧ್ಯುಕ್ತವಾಗಿ ಅರಸು ಅವರು ಕರ್ನಾಟಕ ರಾಜಕಾರಣಕ್ಕೆ ಪ್ರವೇಶ ಮಾಡಿದರು.

ಪ್ರಜಾಪ್ರತಿನಿಧಿ ಸಭೆಯಲ್ಲೂ ಆಗ ರಾಜಕೀಯ ಗುಂಪುಗಾರಿಕೆ ಇತ್ತು. ಕಾಂಗ್ರೆಸ್ ಪಕ್ಷವೂ ಇದಕ್ಕೆ ಹೊರತಾಗಿರಲಿಲ್ಲ. ಅರಸು ಅವರು ಆಗ ಕಾಂಗ್ರೆಸ್‌ನೊಳಗೆ ಒಂದು ಗುಂಪಿನ ನಾಯಕರಾಗಿದ್ದ ಹಿರಳ್ಳಿ ದಾಸಪ್ಪನವರ ಕಟ್ಟಾ ಬೆಂಬಲಿಗರಾಗಿದ್ದರು.

೧೯೪೫ರಲ್ಲಿ ಪುನಃ ಪ್ರಜಾಪ್ರತಿನಿಧಿ ಸಭೆಗೆ ಚುನಾವಣೆ ನಡೆಯಿತು. ಆಗ ಅರಸು ಅವರ ಮನೆಯ ಆರ್ಥಿಕ ಪರಿಸ್ಥಿತಿ ಅಷ್ಟು ಚೆನ್ನಾಗಿರಲಿಲ್ಲ. ೧೫೦ ರೂಪಾಯಿ ಮೊತ್ತದ ಠೇವಣಿ ಹಣ ಕಟ್ಟುವುದೂ ಸಹ ಅರಸರಿಗೆ ಸಾಧ್ಯವಿರಲಿಲ್ಲ. ಈ ಜಂಜಾಟಗಳನ್ನು ಬಿಟ್ಟು ಊರಿನಲ್ಲಿ ಬೇಸಾಯ ಮಾಡಬೇಕೆಂದು ನಿರ್ಧರಿಸಿ ಅವರು ತಮ್ಮ ಊರಿಗೆ ಮರಳಿದರು. ತಮ್ಮ ಈ ನಿರ್ಧಾರವನ್ನು ಸಾಹುಕಾರ ಚೆನ್ನಯ್ಯನವರಿಗೂ ತಿಳಿಸಿದ್ದರು. ವಿಧಯಿಲ್ಲದೆ ಚೆನ್ನಯ್ಯನವರು ಹುಣಸೂರು ಕ್ಷೇತ್ರದಿಂದ ಬೇರೊಬ್ಬ ಅಭ್ಯರ್ಥಿಯನ್ನು ಸ್ಪರ್ಧಾಳುವಾಗಿ ಆಯ್ಕೆ ಮಾಡಿದ್ದರು. ಅರಸು ರಾಜಕೀಯದಿಂದ ದೂರವಿರಲು ತೀರ್ಮಾನಿಸಿದರೂ ರಾಜಕಾರಣ ಅವರನ್ನು ಮತ್ತೆ ಸೆಳೆದುಕೊಂಡಿತು. ಸ್ಪರ್ಧಿಸಬೇಕಿದ್ದ ಹುರಿಯಾಳು ನಾಮಪತ್ರ ಸಲ್ಲಿಸುವ ಎರಡು ದಿನದ ಮೊದಲೇ ನಾಪತ್ತೆಯಾಗಿದ್ದರು. ಆಗ ಕಾಂಗ್ರೆಸ್ ಪಕ್ಷದ ಪರವಾಗಿ ಸ್ಪರ್ಧಿಸುವುದೆಂದರೆ ಮಹಾರಾಜರ ಸರಕಾರವನ್ನು ವಿರೋಧಿಸಿದಂತೆಯೇ ಆಗಿತ್ತು. ಸರಕಾರದ ವಿರೋಧವನ್ನು ಕಟ್ಟಿಕೊಳ್ಳಲಾಗದ ದಿಗಿಲಿನಿಂದ ಆ ಹುರಿಯಾಳು ಕೊನೆಗಳಿಗೆಯಲ್ಲಿ ಕೈಕೊಟ್ಟಿದ್ದರು. ಇದರಿಂದ ವಿಚಲಿತರಾದ ಚೆನ್ನಯ್ಯನವರು ಬೇರೆ ದಾರಿಕಾಣದೆ ನೇರವಾಗಿ ಹುಣಸೂರಿಗೆ ಹೋಗಿ ಅರಸರನ್ನು ಕರೆಯಿಸಿ ಪರಿಸ್ಥಿತಿಯನ್ನು ವಿವರಿಸಿ ಮತ್ತೆ ಚುನಾವಣೆಗೆ ಸ್ಪರ್ಧಿಸುವಂತೆ ಒತ್ತಾಯಿಸಿದರು. ಅವರ ಒತ್ತಾಯಕ್ಕೆ ಮಣಿದು, ಚುನಾವಣೆಯಲ್ಲಿ ಸ್ಪರ್ಧಿಸುವುದು ಅರಸು ಅವರಿಗೆ ಅನಿವಾರ್ಯವಾಯಿತು.

ಸ್ವತಂತ್ರ ಭಾರತದ ೧೯೫೨ರಲ್ಲಿ ನಡೆದ ಚುನಾವಣೆ ಪ್ರಥಮ ಮಹಾಚುನಾವಣೆಯಾಗಿದ್ದು, ಆ ಸಂದರ್ಭದಲ್ಲಿ ರಾಜ್ಯದಲ್ಲಿ ಕೆಂಗಲ್ ಹನುಮಂತಯ್ಯನವರು ಕಾಂಗ್ರೆಸ್ ಪಕ್ಷದ ಅಧ್ಯಕ್ಷರಾಗಿದ್ದರು. ಆಗ ದೇವರಾಜ ಅರಸು ಅವರು ಹನುಮಂತಯ್ಯನವರ ಅತ್ಯಂತ ನಿಕಟವರ್ತಿಗಳಾಗಿದ್ದರು. ಅರಸು ಅವರು ಈ ಚುನಾವಣೆಯಲ್ಲಿ ಹುಣಸೂರು ಕ್ಷೇತ್ರದಿಂದ ಕಾಂಗ್ರೆಸ್ ಅಭ್ಯರ್ಥಿಯಾಗಿ ಸ್ಪರ್ಧಿಸಿ ಮೈಸೂರು ರಾಜ್ಯದ ವಿಧಾನಸಭೆಗೆ ಶಾಸಕರಾಗಿ ಆಯ್ಕೆಯಾದರು. ಆಗ ಅರಸು ಅವರಿಗೆ ಅಭಿನಂದನೆಗಳ ಮಹಾಪೂರವೆ ಹರಿದು ಬಂದಿತು. ಅದೇ ರೀತಿ ೧೯೫೭ರ ದ್ವಿತೀಯ ಚುನಾವಣೆಯ ಸಂದರ್ಭದಲ್ಲಿಯೂ ಹುಣಸೂರಿನ ಜನ ಅರಸರನ್ನು ನಿರಾಯಾಸವಾಗಿ ಆರಿಸಿ ತಂದು ಅರಸರ ಮೇಲಿದ್ದ ತಮ್ಮ ಪ್ರೀತಿಯನ್ನು ವ್ಯಕ್ತಪಡಿಸಿದರು. ಅಲ್ಲಿಂದಾಚೆಗೆ ಅವರು ಹಿಂತಿರುಗಿ ನೋಡಿದ್ದೇ ಇಲ್ಲ. ಸತತವಾಗಿ ಆರು ಬಾರಿ ಅದೇ ಕ್ಷೇತ್ರವನ್ನು ಪ್ರತಿನಿಧಿಸಿ ಆಯ್ಕೆಯಾಗುತ್ತಾ ಬಂದರು. ೧೯೮೨ರವರೆಗೆ ಮೂರು ದಶಕಗಳ ಕಾಲ ಅವರ ರಾಜಕೀಯ ಕ್ಷೇತ್ರ ವಿಸ್ತರಿಸಿಕೊಳ್ಳುತ್ತಾ ತಮ್ಮ ವ್ಯಕ್ತಿತ್ವವನ್ನು ರೂಪಿಸಿಕೊಂಡರು. ಅವರು ನಡೆದ ಈ ಹಾದಿಯಲ್ಲಿ ಅದೆಷ್ಟೋ ಮಿತ್ರರು ಶತೃಗಳಾದರು, ಶತೃಗಳು ಮಿತ್ರರಾದರು. ಹೀಗೆ ತಮ್ಮ ರಾಜಕೀಯ ಜೀವನದಲ್ಲಿ ಹಿರಿಯರ ಆಶೀರ್ವಾದದಿಂದ ಹಾಗೂ ಮಿತ್ರರ ಸಹಾಯದಿಂದ ಅವರು ರಾಜಕೀಯ ಉತ್ತುಂಗಕ್ಕೇರಿದ್ದನ್ನು ತಮ್ಮ ಕೊನೆಯ ಜೀವಿತದವರೆಗೂ ಮರೆತಿರಲಿಲ್ಲ. ರಾಜಕಾರಣದಲ್ಲಿ ತಮಗೆ ಅಡ್ಡಗಾಲು ಹಾಕಿದವರನ್ನು ಹಾಗೂ ಹಿಂದಕ್ಕೆಳೆದವರನ್ನೂ ಸಹ ಅರಸರು ತಮ್ಮ ಸ್ನೇಹಿತರೆಂದೇ

ಭಾವಿಸಿಕೊಳ್ಳುತ್ತಿದ್ದರು. ಏಕೆಂದರೆ ವಿರೋಧ ಇಲ್ಲದೆ ಹೋದರೆ, ಪೌರುಷತನ ಕಳೆಗುಂದುತ್ತಾ ಹೋಗುವುದೆಂಬ ವಾದ ಅರಸು ಅವರದಾಗಿತ್ತು.

೧೯೫೨ರಿಂದ ೧೯೬೨ರ ಮಧ್ಯಭಾಗದಲ್ಲಿ ಬಹುಶಃ ಅರಸರ ಜೀವನದಲ್ಲಿ ಸಂದಿಗ್ಧ ಸಮಯ ತಲೆದೋರಿತ್ತು ಎಂದು ಹೇಳಬಹುದು. ೧೯೫೭ರಲ್ಲಿ ಬಿ.ಡಿ.ಜತ್ತಿಯವರ ಅಧ್ಯಕ್ಷತೆಯಲ್ಲಿ ನೇಮಿಸಲ್ಪಟ್ಟ ಭೂ ಸುಧಾರಣಾ ಸಮಿತಿಯ ಸದಸ್ಯರಾಗಿ ಭೂರಹಿತ ರೈತರ ಹಿತಸಾಧಿಸಬೇಕೆಂಬ ಅಪೇಕ್ಷೆ ಅರಸು ಅವರಿಗೆ ಪ್ರಬಲವಾಗಿತ್ತಾದರೂ ಪಟ್ಟಭದ್ರ ಹಿತಾಸಕ್ತಿಗಳು ಈ ಸೆಲೆಕ್ಟ್ ಕಮಿಟಿಗೆ ಆಯ್ಕೆಗೊಳ್ಳಲು ಅವಕಾಶ ಕೊಡಲಿಲ್ಲ. ಅದರಿಂದಾಗಿ ಅವರಿಗೆ ನಿರಾಶೆಯೇನು ಆಗಲಿಲ್ಲ. ಮುಂದೆ ೧೯೬೨ರಲ್ಲೂ ಹುಣಸೂರಿನಿಂದ ಕಾಂಗ್ರೆಸ್ ಅಭ್ಯರ್ಥಿಯಾಗಿ ಅವಿರೋಧವಾಗಿ ಗೆದ್ದುಬಂದರು. ಅದೇ ಚುನಾವಣೆಯಲ್ಲಿ ಮುಖ್ಯಮಂತ್ರಿ ನಿಜಲಿಂಗಪ್ಪನವರು ಹೊಸದುರ್ಗ ಕ್ಷೇತ್ರದಿಂದ ಸ್ಪರ್ಧಿಸಿ ಅನಿರೀಕ್ಷಿತ ಪರಾಭವ ಅನುಭವಿಸಿದರು. ಕಾರಣ ಬಿ.ಡಿ.ಜತ್ತಿ ಮತ್ತು ನಿಜಲಿಂಗಪ್ಪ ಗುಂಪುಗಳ ಮಧ್ಯ ಇರುವ ಅಂತಃಕಲಹ. ಕುತೂಹಲವೆಂದರೆ ನಿಜಲಿಂಗಪ್ಪ ಅವರ ಅನುಯಾಯಿಗಳೆಲ್ಲ ಗೆದ್ದು ಬಂದಿದ್ದರು ಎಂಬುವುದು ಈ ಚುನಾವಣೆಯ ಇನ್ನೊಂದು ವಿಶೇಷ. ನಿಜಲಿಂಗಪ್ಪನವರೇ ಶಾಸಕಾಂಗ ಪಕ್ಷದ ನಾಯಕರಾಗಬೇಕು ಹಾಗೂ ಅವರೇ ಮುಖ್ಯಮಂತ್ರಿಯಾಗಬೇಕೆಂದು ಬಹುಮತವು ವ್ಯಕ್ತವಾಯಿತು. ಈ ಚುನಾವಣೆಯಲ್ಲಿ ಸೋತಿದ್ದರೂ ಗೆದ್ದಂತೆಯೇ ಎಂಬ ಅಭಿಪ್ರಾಯ ಕಾಂಗ್ರೆಸ್‌ನ ಹಲವರಲ್ಲಿ ಮೂಡಿದ್ದರಿಂದ ಬಹುಮತ ಅಭಿಪ್ರಾಯದ ಮೇಲೆ ಅವರು ಮುಖ್ಯಮಂತ್ರಿಯಾಗಲು ಸಿದ್ಧರಾದದ್ದು ರಾಜಕಾರಣದಲ್ಲಿ ಸಂದಿಗ್ಧ ಸ್ಥಿತಿಯುಂಟಾಗಲು ಕಾರಣವಾಯಿತು. ಆದರೆ "ಜನತಂತ್ರ ರಾಜ್ಯ ವ್ಯವಸ್ಥೆಯ ಚುನಾವಣೆಯಲ್ಲಿ ಸೋತವರನ್ನು ಮುಖ್ಯಮಂತ್ರಿಯನ್ನಾಗಿ ಮಾಡುವುದು ಸಲ್ಲದು. ಇಂತಹ ವರ್ತನೆಯಿಂದ ಮುಖ್ಯಮಂತ್ರಿ ಪದವಿಗೆ ಅಗತ್ಯವಾದ ನೈತಿಕ ಶಕ್ತಿ ಇರುವುದಿಲ್ಲ" ಎಂದು ದಿಟ್ಟತನದಿಂದ ನೇರವಾಗಿ ನಿಜಲಿಂಗಪ್ಪ ಅವರಂತಹ ಹಿರಿಯ ನಾಯಕರನ್ನು ತರಾಟೆಗೆ ತೆಗೆದುಕೊಂಡಿದನ್ನು ಗಮನಿಸಿದರೆ ಅರಸು ಅವರ ರಾಜಕೀಯ ದಿಟ್ಟತನಕ್ಕೆ ಒಂದು ನಿದರ್ಶನಸಿಗುವುದು. ಇದರಿಂದ ಅರಸು ಅವರು ಅಂದಿನ ಕರ್ನಾಟಕ ರಾಜಕಾರಣದ ವ್ಯವಸ್ಥೆಯಲ್ಲಾಗುವ ಅನೀತಿಯುತವಾದ ಪಲ್ಲಟಗಳನ್ನು ಖಂಡಿಸುವ ಸ್ಥೈರ್ಯವನ್ನು ಹೊಂದಿದ್ದರು ಎಂಬುದು ಸ್ಪಷ್ಟವಾಗುತ್ತದೆ.

ಅರಸು ಅವರ ಈ ಮಾತಿಗೆ ಬೆಲೆಕೊಟ್ಟಂತೆ ಕಂಡುಬಂದ ನಿಜಲಿಂಗಪ್ಪನವರು ಅಧಿಕಾರವನ್ನು ವಹಿಸಿಕೊಳ್ಳಲು ನಿರಾಕರಿಸಿದರು. ಆಗ ರಾಜ್ಯದ ಮುಖ್ಯಮಂತ್ರಿಯಾಗಿ ಎಸ್.ಆರ್. ಕಂಠಿಯವರು ತಾತ್ಕಾಲಿಕವಾಗಿ ಅಧಿಕಾರವನ್ನು ವಹಿಸಿಕೊಂಡರು. ಅಲ್ಲಿಯತನಕ ಅರಸು ಅವರನ್ನ ಕಾಂಗ್ರೆಸ್ ಗೌಣವಾಗಿಯೇ ಕಂಡಿತೆ ಹೊರತು, ಅವರು ಒಬ್ಬ ಚಿಂತನಾಶೀಲ ರಾಜಕಾರಣಿ ಎನ್ನುವುದನ್ನು ಯಾರೂ ಗ್ರಹಿಸಿಕೊಂಡಿರಲಿಲ್ಲ ಎಂಬುದು ಕಟು ವಾಸ್ತವದ ಸಂಗತಿ. ಮುಂದೆ ೧೯೬೨ ಜೂನ್ ತಿಂಗಳಲ್ಲಿ ನಡೆದ ವಿಧಾನಸಭಾ ಉಪಚುನಾವಣೆಯಲ್ಲಿ ಎಸ್ಸೆನ್ ಅವರು ಗೆದ್ದುಬಂದು ಮುಖ್ಯಮಂತ್ರಿಯಾಗಿ ಅಧಿಕಾರ ವಹಿಸಿಕೊಂಡರು. ಆಗ ನಿಜಲಿಂಗಪ್ಪನವರು ಅರಸು ಅವರಿಗೆ ತಮ್ಮ ಮಂತ್ರಿಮಂಡಲದಲ್ಲಿ ಸಚಿವ ಸ್ಥಾನವನ್ನು ನೀಡಿದರು. ಅರಸು ಅವರು ಸಾರಿಗೆ, ಪಶುಸಂಗೋಪನೆ, ವಾರ್ತಾ ಇಲಾಖೆ, ರೇಷ್ಮೆ ಖಾತೆಗಳ ಸಚಿವರಾಗಿ ದಕ್ಷತೆಯಿಂದ ಕಾರ್ಯ ನಿರ್ವಹಿಸಿದರು. ೧೯೬೭ರಲ್ಲಿ ನಡೆದ ವಿಧಾನಸಭಾ ಚುನಾವಣೆಯಲ್ಲಿ ಅರಸು ಅವರಿಗೆ ಪಕ್ಷದ ಟಿಕೆಟ್ ಸಿಗುವುದರ ಬಗೆಗೆ ಗುಮಾನಿ ಶುರುವಾಯಿತು. ಮತ್ತು ಟಿಕೇಟ್ ತಪ್ಪಿಸುವ ಎಲ್ಲಾ ಸಂಚುಗಳನ್ನು ಮಾಡಲಾಯಿತು. ಆದರೆ ದೇವರಾಜ ಅರಸು ಅವರು ಕಾಮರಾಜ್ ಅವರಿಂದಲೇ ಪಕ್ಷದ ಟಿಕೆಟ್ ಪಡೆದು ಮತ್ತೆ ಹುಣಸೂರು ಕ್ಷೇತ್ರದಿಂದ ಶಾಸಕರಾಗಿ ಆಯ್ಕೆಯಾಗುವುದರೊಂದಿಗೆ ಚರಿತ್ರೆಯನ್ನೇ ನಿರ್ಮಿಸಿದರು. ಇದೇ ಸಂದರ್ಭದಲ್ಲಿ ನಿಜಲಿಂಗಪ್ಪ ಅವರು ಅಖಿಲ ಭಾರತ ಕಾಂಗ್ರೆಸ್ ಅಧ್ಯಕ್ಷರಾಗಿ ಆಯ್ಕೆಯಾದರು. ಅನಂತರ ವೀರೇಂದ್ರ ಪಾಟೀಲ್ ಕರ್ನಾಟಕ ರಾಜ್ಯದ ಮುಖ್ಯಮಂತ್ರಿಯಾಗಿ ಆಯ್ಕೆ ಆದರು. ಆಗ ದೇವರಾಜ ಅರಸರನ್ನು ಬೇಕೆಂದೇ ಮೂಲೆಗುಂಪು ಮಾಡಲಾಯಿತು. ಬಹುಶಃ ಅರಸು ಅವರ ರಾಜಕೀಯ ಜೀವನ ಇನ್ನು ಮುಂದೆ ಮುಗಿದ ಅಧ್ಯಾಯ ಎಂದು ಪತ್ರಿಕೆಗಳು ಸುದ್ಧಿ ಮಾಧ್ಯಮದಲ್ಲಿ ಪ್ರಕಟಿಸತೊಡಗಿದವು. ಆದರೆ ಈ ಬಾರಿಯೂ ಹೊಸ ಸಚಿವ ಸಂಪುಟದಲ್ಲಿ ಅರಸು ಅವರಿಗೆ ಅಧಿಕಾರ ದೊರೆಯಿತಾದರೂ, ಅಷ್ಟೊಂದು ಮಹತ್ವವಲ್ಲದ ಕಾರ್ಮಿಕ ಖಾತೆಯನ್ನು ಅವರಿಗೆ ನೀಡಲಾಗಿತ್ತು. ಮೊದಲಿನಿಂದಲೂ ರಾಜಕೀಯ ಕ್ಷೇತ್ರದಲ್ಲಿ ಅನರ್ಹರನ್ನು ಅರ್ಹರನ್ನಾಗಿ, ಅರ್ಹರನ್ನು ಅನರ್ಹರನ್ನಾಗಿ

ಮಾಡುವಂತಹ ಶೋಚನೀಯವಾದ ರಾಜಕೀಯ ವ್ಯವಸ್ಥೆಯು ಬೆಳೆದುಕೊಂಡು ಬಂದಿರುವುದಕ್ಕೆ ಕರ್ನಾಟಕ ರಾಜಕಾರಣವೂ ಒಂದು ನಿದರ್ಶನವಾಗಿದೆ.

**ದೇವರಾಜ ಅರಸು ಅವರ ಮೇಲಾದ ಸೈದ್ಧಾಂತಿಕ ಪ್ರೇರಣೆಗಳು**

ದೇವರಾಜ ಅರಸು ಅವರು ಸೈದ್ಧಾಂತಿಕವಾಗಿ ರೂಪುಗೊಳ್ಳಲು ಪ್ರೇರಣೆ ನೀಡಿದ್ದು ಸಾಹಿತ್ಯ ಕ್ಷೇತ್ರ ಹಾಗೂ ಸಮಾಜವಾದಿ ನಾಯಕರ ಆದರ್ಶ ತತ್ವಗಳು. ಈ ಸಮಾಜವಾದಿ ಸೈದ್ಧಾಂತಿಕ ತತ್ವಗಳ ಮೇಲೆ ಹೆಚ್ಚು ನಂಬಿಕೆಯಿಟ್ಟಿದ್ದ ಅರಸು, ರಾಜ್ಯದ ರಾಜಕಾರಣದಲ್ಲಿ ಬದಲಾವಣೆ ತರಲು ಮತ್ತು ಸಮಾಜದಲ್ಲಿ ತುಳಿತಕ್ಕೊಳಗಾದ ತಳಸಮುದಾಯಗಳನ್ನು ಮೇಲೆತ್ತಲು ಈ ಸಮಾಜವಾದಿ ಆದರ್ಶಗಳನ್ನು ಅನುಷ್ಠಾನಕ್ಕೆ ತರುವುದರೊಂದಿಗೆ ಸಾಮಾಜಿಕ ಕ್ರಾಂತಿಗೆ ನಾಂದಿಹಾಡಿದರು.

ಒಬ್ಬ ವ್ಯಕ್ತಿಯನ್ನು ಇನ್ನೊಬ್ಬ ವ್ಯಕ್ತಿ ಶೋಷಣೆ ಮಾಡುವುದನ್ನು ಕೊನೆಗಾಣಿಸುವುದಕ್ಕೆ ಸಮನಾಗಿ, ಒಂದು ರಾಷ್ಟ್ರವನ್ನು ಮತ್ತೊಂದು ರಾಷ್ಟ್ರವು ಶೋಷಣೆ ಮಾಡುವುದನ್ನು ಕೊನೆಗಾಣಿಸುತ್ತದೆ. ಒಂದು ರಾಷ್ಟ್ರದೊಳಗೆ ಅಥವಾ ಒಂದು ಸಮಾಜದಲ್ಲಿ ಸಂಘರ್ಷವು ಮರೆಯಾಗುವುದಕ್ಕೆ ಅನುಗುಣವಾಗಿ ಒಂದು ರಾಷ್ಟ್ರವಾಗಿ ಮತ್ತೊಂದು ರಾಷ್ಟ್ರದ ವಿರೋಧವಾಗಿ ವರ್ತಿಸುವುದು ಕೊನೆಗಾಣುತ್ತದೆ ಎಂಬ ಸಿದ್ಧಾಂತದಲ್ಲಿ ನಂಬಿಕೆಯಿಟ್ಟಿದ್ದ ಅರಸು, ಸಾಮಾಜಿಕ ಅಸಮತೋಲನವನ್ನು ತೊಡೆದು ಹಾಕುವಲ್ಲಿ ಈ ಮೇಲಿನ ಸಿದ್ಧಾಂತದಿಂದ ಪ್ರಭಾವಿತರಾದವರು. ಈ ಮಾನವತಾವಾದದ ಹಿನ್ನೆಲೆಯಲ್ಲಿ ಕರ್ನಾಟಕದ ರೈತ, ಕೂಲಿಕಾರರ, ಹಿಂದುಳಿದವರ ಮತ್ತು ದಲಿತರ ಏಳಿಗೆಗೆ ಹಲವಾರು ಯೋಜನೆಗಳನ್ನು ರೂಪಿಸಿ ಸಮಗ್ರ ಕರ್ನಾಟಕದ ಪ್ರಗತಿಗೆ ಶ್ರಮಿಸಿದ ಧೀಮಂತ ನಾಯಕ, ನವ ಸಮಾಜದ ಹರಿಕಾರ ದೇವರಾಜ ಅರಸು. ಜೊತೆಗೆ ಅರಸು ಅವರು ತಮ್ಮ ಉನ್ನತ ವ್ಯಾಸಂಗದಲ್ಲಿನ ಸಮಯದಲ್ಲಿ ಸುಭಾಷ್ ಚಂದ್ರ ಬೋಸರನ್ನು ತಮ್ಮ ಆರಾಧ್ಯದೈವವನ್ನಾಗಿ ಸ್ವೀಕರಿಸಿದ್ದರು. ವೈಚಾರಿಕವಾಗಿ ಮಹಾತ್ಮಗಾಂಧಿ, ಅಂಬೇಡ್ಕರ್, ಆಚಾರ್ಯ ವಿನೋಭಭಾವೆ ಅವರ ಚಿಂತನೆಗಳನ್ನು ಇಷ್ಟ ಪಡುತ್ತಿದ್ದರು. ಹಾಗೆಯೇ ಕಾರ್ಲ್‌ಮಾರ್ಕ್ಸ್, ಲೆನಿನ್, ಎಂ.ಎನ್. ರಾಯ್, ಲೋಹಿಯಾ ಮತ್ತು ಜಯಪ್ರಕಾಶ ನಾರಾಯಣರಂಥ ಸಮಾಜವಾದಿ ನಾಯಕರುಗಳ ವಿಚಾರ ಮತ್ತು ಆದರ್ಶಗಳು ಅರಸು ಅವರ ಮೇಲೆ ಗಾಢವಾದ ಪ್ರಭಾವ ಬೀರಿದ್ದವು.

ಅಂಬೇಡ್ಕರ್ ಹೇಳಿದಂತೆ, ರಾಜಕೀಯ "ಸ್ವಾತಂತ್ರ್ಯವು ಆರ್ಥಿಕ, ಸಾಮಾಜಿಕ ಸಮಾನತೆಯನ್ನು ತರಲು ವಿಫಲವಾದರೆ, ಅನ್ಯಾಯಕ್ಕೆ ಒಳಗಾದ ಜನರು ಪ್ರಜಾಪ್ರಭುತ್ವವನ್ನೇ ಬುಡಮೇಲು ಮಾಡಬಹುದು" ಎನ್ನುವ ಮಾತು ದೇವರಾಜ ಅರಸು ಅವರ ಮನ ಕಲಕಿರಬೇಕು. ಅಂತೆಯೇ ಬಡವರ, ದೀನದಲಿತರ, ಹಿಂದುಳಿದವರ ಪರವಾಗಿ ಸದಾ ಎಚ್ಚರದಿಂದ ಚಿಂತಿಸುವಂತೆ ಮಾಡಿರಬೇಕು. ಈ ಹಿನ್ನೆಲೆಯಲ್ಲಿ ಕಾಳಜಿ ಎಂದರೆ ಸಮಗ್ರ ಸಾಮಾಜಿಕ ಬದಲಾವಣೆ ಎಂಬರ್ಥದಲ್ಲಿ ಅವರು ಈ ಬಡ ವರ್ಗಗಳ ಪರವಾದ ಯೋಜನೆಗಳನ್ನು ಅನುಷ್ಠಾನಕ್ಕೆ ತರಲು ಸಾಧ್ಯವಾಯಿತು.

ರಾಜಕೀಯ ಬದುಕಿನಲ್ಲಿ ಅಸಾಧಾರಣ ಏರಿಳಿತಗಳನ್ನು ಕಂಡ ಅರಸು ಅವರ ಸೋಲುವಾಗಲೂ ಗೆಲ್ಲುವ ಗಟ್ಟಿತನ ತೋರುತ್ತಿದ್ದ ಅಪರೂಪದ ರಾಜಕಾರಣಿ. ಅಧಿಕಾರದ ದೃಷ್ಟಿಯಿಂದ ದೇವರಾಜ ಅರಸರ ಮೇಲೆ ಪ್ರಭಾವ ಬೀರಿದ್ದು ಕೌಟಿಲ್ಯನ 'ಅರ್ಥಶಾಸ್ತ್ರ'ಈ ಕುರಿತಂತೆ ಅವರು-

*"ಅಧಿಕಾರವನ್ನು ಚಲಾಯಿಸಲು, ಅದನ್ನು ಉಳಿಸಿಕೊಳ್ಳಲು ಏನು ಹುಟ್ಟು*
*ಹಾಕಬೇಕು ಎಂಬುದನ್ನು ಅದರಿಂದ ಕಲಿತುಕೊಂಡೆ"*

ಎಂದು ಅವರ ಒಡನಾಡಿ ಹಾಗೂ ಖ್ಯಾತ ಲೇಖಕ ಚದುರಂಗರ ಮುಮದೆ ಸ್ವತಃ ಅರಸು ಅವರೇ ಹೇಳಿಕೊಂಡಿದ್ದರು. ಸ್ವತಃ ಚಿಂತನಾಶೀಲರಾಗಿದ್ದ ಅರಸು ಪ್ರಸ್ತುತ ಸಂದರ್ಭದಲ್ಲಿ 'ವರ್ಗಕ್ಕಿಂತ ಜಾತಿ ಮುಖ್ಯ' ಎಂಬ ತೀರ್ಮಾನಕ್ಕೆ ಆಗಲೇ ಬಂದಿದ್ದರು ಎಂದು

ಕಂಡುಬರುತ್ತದೆ. ಆದ್ದರಿಂದ ಅಧಿಕಾರದ ಅಖಾಡದಲ್ಲಿ ಉಳಿದುಕೊಳ್ಳಲು ವಿವಿಧ ತಂತ್ರಗಳನ್ನು ಬಳಸಿ, ರಾಜಕಾರಣದಲ್ಲಿ ಅಪೂರ್ವ ಮುತ್ಸದ್ದಿತನದ ಧೀಮಂತಿಕೆ ತೋರಿದವರು ಅರಸು.

**ಮುಖ್ಯಮಂತ್ರಿಯಾಗಿ ಅರಸು**

೧೯೭೨ರ ವಿಧಾನಸಭೆಗೆ ನಡೆದ ಚುನಾವಣೆಯಲ್ಲಿ ಆಡಳಿತ ಪಕ್ಷವಾದ ಕಾಂಗ್ರೆಸ್‌ಗೆ ಹೆಚ್ಚಿನ ಬಹುಮತ ದೊರೆಯಿತು. ಅರಸು ಅವರ ರಾಜಕೀಯ ನಿಪುಣತೆ, ದೂರದೃಷ್ಟಿ, ಸಂಘಟನಾ ಶಕ್ತಿಗೆ ಮತ್ತೆ ಯಶಸ್ಸು ದೊರೆಯಿತು. ಅರಸು ಕಾಂಗ್ರೆಸ್ ಪಕ್ಷದ ವಿಜಯದ ರೂವಾರಿಯಾಗಿ ವಿಧಾನಸಭೆಯನ್ನು ಪ್ರವೇಶಿಸಿದರು. ಆ ವರ್ಷದ ಮಾರ್ಚ್ ೨೦, ೧೯೭೨ ರಂದು ರಾಜ್ಯದ ಎಂಟನೆಯ ಮುಖ್ಯಮಂತ್ರಿಯಾಗಿ ಅಧಿಕಾರ ವಹಿಸಿಕೊಂಡರು. ಅದುವರೆಗೂ ಕರ್ನಾಟಕದಲ್ಲಿ ಒಕ್ಕಲಿಗ, ಲಿಂಗಾಯತ, ಬ್ರಾಹ್ಮಣ, ಸಮುದಾಯಗಳ ಮೇಲ್ಜಾತಿಯ ನಾಯಕರನ್ನು ಹೊರತುಪಡಿಸಿ ಹಿಂದುಳಿದ ವರ್ಗದ ಅರಸು ಮುಖ್ಯಮಂತ್ರಿ ಆಗ ಅಧಿಕಾರ ವಹಿಸಿಕೊಂಡಿದ್ದು ಐತಿಹಾಸಿಕ ಮಹತ್ವದ ಘಟನೆಯೆಂದು 'ಟೈಮ್ಸ್ ಆಫ್ ಇಂಡಿಯಾ' ಪತ್ರಿಕೆ ತನ್ನ ಸಂಪಾದಕೀಯದಲ್ಲಿ ಪ್ರಕಟಿಸಿದ್ದನ್ನು ಇಲ್ಲಿ ಸ್ಮರಿಸಬಹುದು. ಇಲ್ಲಿಂದಲೇ ಕರ್ನಾಟಕ ರಾಜಕಾರಣದಲ್ಲಿ ಒಂದು ಹೊಸ ಅಧ್ಯಾಯ ಆರಂಭವಾಯಿತು ಎಂದು ಹೇಳಿದರೆ ತಪ್ಪಾಗಲಾರದು.

ಅರಸು ಅವರು ರಾಜ್ಯದ ಮುಖ್ಯಮಂತ್ರಿಯಾಗಿ ಅಧಿಕಾರ ವಹಿಸಿಕೊಂಡ ನಂತರ ಪ್ರತ್ಯಕ್ಷವಾಗಿಯೂ, ಪರೋಕ್ಷವಾಗಿಯೂ ರಾಜ್ಯದ ಎಲ್ಲಾ ಅಭಿವೃದ್ಧಿಕಾರ್ಯಗಳಿಗೆ ಪ್ರಗತಿಪರ ತಿರುವು ದೊರೆಯಿತು. ಅಲ್ಲದೆ ಅವುಗಳಿಗೆ ಹೊಸ ಚೈತನ್ಯವನ್ನು ಅರಸು ತುಂಬಿದರು ಮತ್ತು ರಾಜ್ಯದ ಸಮಗ್ರ ಅಭಿವೃದ್ಧಿಯ ವ್ಯವಸ್ಥೆಯಲ್ಲಿ ಹೊಂದಿಕೊಳ್ಳುವಂತೆ ಆಡಳಿತವನ್ನು ರೂಪಿಸಿದರು. ಜೊತೆಗೆ ರಾಜ್ಯಕ್ಕೆ ಸ್ಥಿರ ರಾಜಕೀಯ ನಾಯಕತ್ವ ನೀಡಿ, ಭದ್ರ ಆರ್ಥಿಕ ತಳಹದಿ ಹಾಕಿ, ಸುರಕ್ಷಿತ ಸಾಮಾಜಿಕ ಚೌಕಟ್ಟು ನಿರ್ಮಿಸುವ ಕಾಯಕದಲ್ಲಿ ನಿರತರಾದರು.

ಕರ್ನಾಟಕ ರಾಜಕಾರಣದಲ್ಲಿ ಪಟ್ಟಭದ್ರ ಹಿತಾಸಕ್ತಿಯನ್ನು ಸಡಿಲಿಸಿ ರಾಜ್ಯದ ರಾಜಕೀಯಕ್ಕೆ ಹೊಸ ಪರಿಭಾಷೆ ಬರೆಯಲು ಆರಂಭಿಸಿದರು. ಅದಕ್ಕಾಗಿಯೇ ಅವರು ದೀನ ದಲಿತರು ಅನುಭವಿಸುತ್ತಿದ್ದ ಯಾತನೆ, ಜಾತಿ ಆಧಾರಿತ ಅಸಮಾನತೆಯನ್ನು ತೊಡೆದು ಹಾಕುವ ನಿಟ್ಟಿನಲ್ಲಿ ಯೋಜನೆಗಳನ್ನು ರೂಪಿಸಿದರು.

**ರಾಜಕಾರಣದ ಚಿಂತನೆಗಳು ಹಾಗೂ ಸಂಘರ್ಷಗಳು**

ಕರ್ನಾಟಕದ ರಾಜಕಾರಣಲ್ಲಿ ನಾಲ್ಕು ದಶಕಗಳ ಕಾಲ ತನ್ನದೇ ಆದ ಛಾಪನ್ನು ಮೂಡಿಸಿದ ವ್ಯಕ್ತಿ ಡಿ. ದೇವರಾಜ ಅರಸು. ರಾಜ್ಯದ ರಾಜಕಾರಣಕ್ಕೆ ಒಂದು ಮಹತ್ತರವಾದ ತಿರುವನ್ನು ಕೊಟ್ಟು, ಜನರ ಮನಸ್ಸಿನಲ್ಲಿ ಬಹುಕಾಲ ಉಳಿಯಬಲ್ಲ ನಾಯಕರು ಇವರಾಗಿದ್ದಾರೆ. ಸ್ವಾತಂತ್ರ್ಯ ನಂತರದಲ್ಲಿ ಎರಡೂವರೆ ದಶಕಗಳ ಕಾಲ ಅಧಿಕಾರದ ಪ್ರಾಬಲ್ಯದಲ್ಲಿ ಮೆರೆದಿದ್ದ ಮೇಲ್ವರ್ಗದವರಾದ ಒಕ್ಕಲಿಗ, ವೀರಶೈವ, ಬ್ರಾಹ್ಮಣರ ಶಕ್ತಿಯನ್ನು ಗಣನೀಯವಾಗಿ ನಿಷ್ಕ್ರಿಯಗೊಳಿಸಿದವರು ಇವರು. ಅಲ್ಲದೆ ಸಮಾಜದ ಹಿಂದುಳಿದವರಲ್ಲಿ ಜಾಗೃತಿ ಮೂಡಿಸಲು ಹಾಗೂ ಪರ್ಯಾಯ ನಾಯಕತ್ವ ಬೆಳೆಸಲು ಅವಿರತವಾಗಿ ಶ್ರಮಿಸಿದ ಶ್ರೇಯಸ್ಸು ಇವರಿಗೇ ಸಲ್ಲುತ್ತದೆ.

೧೯೬೯ರ ಪ್ರಾರಂಭದಲ್ಲೇ ರಾಷ್ಟ್ರಮಟ್ಟದ ಕಾಂಗ್ರೆಸ್ ಪಕ್ಷದಲ್ಲಿ ಭಿನ್ನಾಭಿಪ್ರಾಯಗಳು ಕಾಣಿಸಿಕೊಂಡವು. ಇದರಿಂದಾಗಿ ಆಡಳಿತರೂಢ ಕಾಂಗ್ರೆಸ್ ಪಕ್ಷದಲ್ಲಿ ಇಂದಿರಾಗಾಂಧಿಯವರ ನಾಯಕತ್ವದಲ್ಲಿ ಪುರೋಗಾಮಿ(ಯಂಗ್‌ಟರ್ಕ್) ಬಣ, ಹಾಗೆಯೇ ಎಸ್. ನಿಜಲಿಂಗಪ್ಪನವರ ನಾಯಕತ್ವದಲ್ಲಿ ಪ್ರತಿಗಾಮಿ(ಸಿಂಡಿಕೇಟ್) ಗುಂಪು ಹುಟ್ಟಿಕೊಂಡಿತು. ಅಖಿಲ ಭಾರತ ಮಟ್ಟದ ನಾಯಕರಾಗಿ ವಿಜೃಂಭಿಸಿದ್ದ ನಿಜಲಿಂಗಪ್ಪ ಅವರಿಗೆ ಮೊದಲಿನಿಂದಲೂ ನೆಹರು ಕುಟುಂಬಕ್ಕೂ ಅಷ್ಟಕಷ್ಟೆ ನಂಟು ಇದ್ದಿತು ಮತ್ತು ಮೇಲಾಗಿ ಒಳ

ಒಳಗೆ ಆಂತರಿಕ ಒಳ ಜಗಳಗಳಿದ್ದವು. ಈ ವಿರಸಗಳು ಇಂದಿರಾ ಗಾಂಧಿಯವರ ಕಾಲದಲ್ಲೂ ಮುಂದುವರಿಯಿತು. ಇದರಿಂದ ಪಕ್ಷದಲ್ಲಿ ಗುಂಪುಗಾರಿಕೆ ತಲೆದೋರಿತು. ಕೊನೆಗೆ ೧೯೬೯ರಲ್ಲಿ ಬೆಂಗಳೂರಿನ ಗಾಜಿನಮನೆಯಲ್ಲಿ ನಡೆದ ಅಖಿಲ ಭಾರತ ಕಾಂಗ್ರೆಸ್ ಅಧಿವೇಶನದಲ್ಲಿ ಈ ಭಿನ್ನಾಭಿಪ್ರಾಯಗಳು ತಾರಕಕ್ಕೇರಿ ಕಾಂಗ್ರೆಸ್ ಇಬ್ಭಾಗವಾಯಿತು. ಈ ರಾಷ್ಟ್ರೀಯ ಕಾಂಗ್ರೆಸ್ಸಿನ ವಿಭಜನೆಯ ಪರಿಣಾಮ ಕರ್ನಾಟಕದ ಮೇಲೂ ದಟ್ಟವಾದ ಪ್ರಭಾವ ಬೀರಿತು. ಸಹಜವಾಗಿ ರಾಜ್ಯದಲ್ಲಿಯೂ ಕಾಂಗ್ರೆಸ್ ಎರಡು ಭಾಗವಾಯಿತು. ಆ ಸಂದರ್ಭದಲ್ಲಿ ಬಹಳಷ್ಟು ಜನ ನಿಜಲಿಂಗಪ್ಪನವರ ನೆರಳಾಗಿ ಹಿಂಬಾಲಿಸಿದರು. ಅದರಲ್ಲಿ ದೇವೇಗೌಡರು, ವೀರೇಂದ್ರ ಪಾಟೀಲ್, ರಾಮಕೃಷ್ಣ ಹೆಗೆಡೆಯವರು ಸಹ ಇದ್ದರು. ಆಗ ದೇವರಾಜ ಅರಸು ಅವರು ಇಂದಿರಾ ಕಾಂಗ್ರೆಸ್ಸನ್ನು ಸೇರಿಕೊಂಡರು. ಇದು ಅರಸು ಅವರನ್ನು ರಾಜ್ಯ ರಾಜಕಾರಣದಲ್ಲಿ ಮೇಲೆ ಬರಲು ಭದ್ರಬುನಾದಿ ಹಾಕಿಕೊಟ್ಟಿತು ಎಂಬುದನ್ನು ನಿಸ್ಸಂದೇಹವಾಗಿ ಒಪ್ಪಿಕೊಳ್ಳಬಹುದು. ಕಾಂಗ್ರೆಸ್ ಇಬ್ಭಾಗವಾದಾಗಲೂ ವೀರೇಂದ್ರಪಾಟೀಲ್‌ರು ತಟಸ್ಥರಾಗಿ ಉಳಿದು ಅಭಿವೃದ್ಧಿ ಕಡೆಗೆ ಹೆಚ್ಚಿನ ಗಮನ ಹರಿಸಿದರಲ್ಲದೆ ೧೯೭೧ರ ವರೆಗೂ ಮುಖ್ಯಮಂತ್ರಿ ಸ್ಥಾನದಲ್ಲಿ ಮುಂದುವರಿದರು.

ಕಾಂಗ್ರೆಸ್ ವಿಭಜನೆಯು ಮೈಸೂರು ರಾಜಕೀಯ ಪರಿಸ್ಥಿತಿಗೆ ತಡೆಯುಂಟು ಮಾಡಲಿಲ್ಲವಾದರೂ ರಾಜ್ಯದ ರಾಜಕಾರಣದಲ್ಲಂತೂ ತೀವ್ರವಾದಿ ತಿರುವನ್ನುಂಟು ಮಾಡಿತು. ದೇವರಾಜ ಅರಸು ಅವರು ರಾಜ್ಯ ರಾಜಕಾರಣದಲ್ಲಿ ಮುಂಚೂಣಿಗೆ ಬರಲು ಸಾಧ್ಯವಾಯಿತು. ಬಹುಶಃ ಅವರು ಇಲ್ಲಿಂದಲೇ ಹೊಸ ರಾಜಕಾರಣದ ಶಕ್ತಿಯ ಬೆಳವಣಿಗೆಯನ್ನು ಕಾಣಲಾರಂಭಿಸಿದರು. ಈ ಶಕ್ತಿಯ ಬೆಳವಣಿಗೆಗಾಗಿ ಅವರು ಕ್ರಮ ಕೈಗೊಂಡಿದ್ದು ಅವರು ಅಧಿಕಾರದ ಗದ್ದುಗೆಗೆ ಏರಿದ ನಂತರವೆ. 'ಸಂಸ್ಥಾ ಕಾಂಗ್ರೆಸ್'ನ ಪ್ರಮುಖರಾದ ನಿಜಲಿಂಗಪ್ಪ, ವೀರೇಂದ್ರ ಪಾಟೀಲರಂಥ ಸಮರ್ಥ ನಾಯಕರ ಮಧ್ಯೆ ಇಂದಿರಾ ಕಾಂಗ್ರೆಸನ್ನು ಕಟ್ಟುವುದು ಸುಲಭವಲ್ಲದಂಥ ಸಂದರ್ಭದಲ್ಲಿ ಅರಸು ಅವರು ಇದನ್ನು ಸಾಧ್ಯವಾಗಿಸಿದರು. ರಾಜ್ಯದಲ್ಲಿ ಕಾಂಗ್ರೆಸ್ ಸಂಘಟನೆಯ ವಿಚಾರಧಾರೆ ಮತ್ತು ಕಾರ್ಯಕ್ಷಮತೆಯ ಬದಲಿಗೆ ವೈಯಕ್ತಿಕ ಅನುಸರಣೆ ನೆಲೆಯಲ್ಲಿ ಕಾಂಗ್ರೆಸ್ ಒಳಗೆ ಬೆಂಬಲ ಸೂಚಿಸಿತು. ಈ ಕಾಂಗ್ರೆಸ್ ವಿಭಜನೆ ಬಹುಸಂಖ್ಯಾತ ದಲಿತ, ಹಿಂದುಳಿದ ವರ್ಗಗಳ ಜಾತಿಗಳವರು ಒಂದು ರೀತಿಯಲ್ಲಿ ರಾಜಕೀಯವಾಗಿ ಧೃವೀಕರಣಗೊಳ್ಳಲು ಸಹಾಯಕವಾಯಿತು.

೧೯೬೯ನೇ ಇಸವಿಯಿಂದ ಕಾಂಗ್ರೆಸ್ ಪಕ್ಷದಲ್ಲಿ ಹಳಬರು, ಹಿರಿಯರಿಂದ ಕೂಡಿದ್ದ ನಿಜಲಿಂಗಪ್ಪನವರ ಗುಂಪಿಗೂ ಹೊಸಬರು, ಪ್ರಮುಖ ಉತ್ಸಾಹಿ ನಾಯಕರಿಂದ ಕೂಡಿದ್ದ ಪ್ರಧಾನಿ ಇಂದಿರಾ ಗಾಂಧಿಯವರ ಗುಂಪಿಗೂ ತಾತ್ವಿಕ ಹಾಗೂ ಸೈದ್ಧಾಂತಿಕ ಭಿನ್ನಾಭಿಪ್ರಾಯಗಳು ಮೂಡಿಬರತೊಡಗಿದವು. ಜುಲೈ ೧೦.೧೯೬೯ರಂದು ಬೆಂಗಳೂರಿನಲ್ಲಿ ನಡೆದ ಕಾಂಗ್ರೆಸ್ ಅಧಿವೇಶನದಲ್ಲಿ ಈ ಭಿನ್ನಾಭಿಪ್ರಾಯಗಳು ಪೂರ್ಣ ಪ್ರಮಾಣದಲ್ಲಿ ಗೋಚರಿಸತೊಡಗಿದವು. ಇಂಥ ಹಲವು ಭಿನ್ನಾಭಿಪ್ರಾಯಗಳೇ ರಾಷ್ಟ್ರೀಯ ಕಾಂಗ್ರೆಸ್‌ನ ವಿಭಜನೆಯನ್ನು ಮತ್ತಷ್ಟು ತೀವ್ರಗೊಳಿಸಿದವು. ಹೀಗಾಗಿ ಬೆಂಗಳೂರಿನ ಲಾಲ್‌ಬಾಗ್‌ನಲ್ಲಿ ಕಾಂಗ್ರೆಸ್ ಪಕ್ಷ ಒಡೆದು ಹೋಳಾಯಿತು. ೧೨.೧೧.೧೯೬೯ರಂದು ದೆಹಲಿಯಲ್ಲಿ ಸೇರಿದ್ದ ವಿಶೇಷ ಕಾಂಗ್ರೆಸ್ ಅಧಿವೇಶನದಲ್ಲಿ ಇಂದಿರಾ ಗಾಂಧಿಯವರು ಎಸ್.ನಿಜಲಿಂಗಪ್ಪ ಅವರನ್ನು ರಾಷ್ಟ್ರೀಯ ಕಾಂಗ್ರೆಸ್ ಪಕ್ಷದಿಂದ ಉಚ್ಚಾಟಿಸಿದರು. ಪ್ರತಿಯಾಗಿ ನಿಜಲಿಂಗಪ್ಪ ಅವರು ೨೦.೧೨.೧೯೬೯ರಂದು ಅಹಮದಾಬಾದ್‌ನಲ್ಲಿ ತಮ್ಮ ಬೆಂಬಲಿಗರನ್ನು ಸೇರಿಸಿ ಕಾಂಗ್ರೆಸ್ ಅಧಿವೇಶನ ನಡೆಸಿದರು. ಇದೇ ಮುಂದೆ "ಸಂಸ್ಥಾ ಕಾಂಗ್ರೆಸ್" ಎಂದು ಹೆಸರಾಯಿತು. ಈ ಸಭೆಯಲ್ಲಿ ಪಕ್ಷವನ್ನು ಉಳಿಸಿ ಬೆಳೆಸಲು ನಿರ್ಧರಿಸಲಾಯಿತು. ಮತ್ತೆ ನಿಜಲಿಂಗಪ್ಪನವರೇ ಪಕ್ಷದ ಅಧ್ಯಕ್ಷರಾಗಿ ಆಯ್ಕೆಯಾದರು. ಚುನಾವಣಾ ಆಯೋಗ ಈ ಪಕ್ಷವನ್ನು ಐ.ಎನ್.ಸಿ (ಒ) ಎಂದು ಗುರುತಿಸಿತು. (ಒ. ಎಂದರೆ ಆರ್ಗನೈಸೇಷನ್ ಅಥವಾ ಸಂಸ್ಥೆ) ಹೀಗೆ ನಿಜಲಿಂಗಪ್ಪನವರ ಅಧ್ಯಕ್ಷತೆಯಲ್ಲಿ ಹುಟ್ಟಿಕೊಂಡ ಈ ಪಕ್ಷಕ್ಕೆ "ಸಂಸ್ಥಾ ಕಾಂಗ್ರೆಸ್" ಎಂಬ ಹೆಸರು ರೂಢಿಗೆ ಬಂದಿತು.

ರಾಷ್ಟ್ರೀಯ ಕಾಂಗ್ರೆಸ್ ಒಡೆದು ಇಬ್ಭಾಗವಾದ ನಂತರ ದೇವರಾಜ ಅರಸು ಮತ್ತು ಅವರ ಬೆಂಬಲಿಗರು ಇಂದಿರಾ ಗಾಂಧಿಯವರನ್ನು ಬೆಂಬಲಿಸಿದರು. ಅದುವರೆಗೂ 'ಎಲೆ ಮರೆಕಾಯಿ' ನಂತಿದ್ದ ಅರಸು ಕರ್ನಾಟಕದ ಅತಿರಥ ಮಹಾರತರನ್ನು ಹಿಂದೆ ಸರಿಸಿ ಬೆಳಕಿಗೆ ಬಂದರು. ಈ ದಿಕ್ಕಿನಲ್ಲಿ ಅರಸು ಅವರಿಗೆ ಸಹಕಾರ ನೀಡಿದವರು ಎಂ.ವಿ.ಕೃಷ್ಣಪ್ಪ, ಕೆಂಗಲ್‌ಹನುಮಂತಯ್ಯ, ಕೊಲ್ಲೂರು ಮಲ್ಲಪ್ಪ,

ಕೆ.ಎಚ್. ಪಾಟೀಲ್, ಸಿದ್ದವೀರಪ್ಪನವರಂಥ ಹಿರಯನಾಯಕರು, ಮುಖ್ಯವಾಗಿ ಅರಸು ಅವರಿಗೆ ರಾಜಕೀಯ ಗುರುವಿನಂತಿದ್ದ ಚೆನ್ನಯ್ಯನವರೂ ಕೂಡ ತಮ್ಮ ಪ್ರಜಾಪಕ್ಷವನ್ನೇ ತನ್ನ ಶಿಷ್ಯನ ಪಕ್ಷದಲ್ಲಿ ವಿಲೀನಗೊಳಿಒಸಿ ಅರಸು ಅವರ ನೈತಿಕ ಶಕ್ತಿಯನ್ನು ಹೆಚ್ಚಿಸಿದರು.

ಈ ಸಂದರ್ಭದಲ್ಲಿ ಅರಸು ಅವರು ಇಂದಿರಾ ಕಾಂಗ್ರೆಸ್ (ಆರ್ ಆಡಳಿತ ಕಾಂಗ್ರೆಸ್)ನ ಮುಂದಾಳು ಹಾಗೂ ಪಕ್ಷದ ವ್ಯವಸ್ಥಾಪಕರಾಗಿ ಹಗಲಿರುಳೆನ್ನದೆ ದುಡಿದು ಜನಶಕ್ತಿಯನ್ನು ಸಂಘಟಿಸಿದ್ದು ಸಾಮಾನ್ಯ ಸಂಗತಿಯೇನಲ್ಲ. ಆಗ ಅವರಿಗೆ ಎದುರಾದ ಅಡ್ಡಿ-ಆತಂಕಗಳು ಹಾಗೂ ಸವಾಲುಗಳು ಹಲವಾರು. ಇವುಗಳನ್ನು ಅವರು ಸುಲಭವಾಗಿ ಹಾಗೂ ಶಾಂತ ಚಿತ್ರದಿಂದ ಬಗೆಹರಿಸಿದ್ದು ಅವರಲ್ಲಿದ್ದ ದೃಢತೆ ಮತ್ತು ಧಕ್ಷತೆಯನ್ನು ಸೂಚಿಸುತ್ತದೆ.

(೨)

ರಾಜ್ಯದಲ್ಲಿ ಆರ್ ಕಾಂಗ್ರೆಸ್ ಅಧ್ಯಕ್ಷ ಸ್ಥಾನಕ್ಕೆ ಯಾರನ್ನು ನೇಮಕ ಮಾಡಬೇಕು ಎನ್ನುವ ಪ್ರಶ್ನೆಗಳು ಕಾಂಗ್ರೆಸ್ ಪಾಳೆಯದಲ್ಲಿ ಕೇಳಿಬಂದವು. ಕೆಂಗಲ್ ಹನುಮಂತಯ್ಯ, ಎಚ್.ಸಿದ್ಧವೀರಪ್ಪನವರಂಥ ನಾಯಕರು ಅಧ್ಯಕ್ಷ ಸ್ಥಾನಕ್ಕೆ ಮುಂಚೂಣಿಯಲ್ಲಿದ್ದರು. ಯಾವುದೇ ಪಕ್ಷದಲ್ಲಾಗಲಿ ಅಂದು ಒಕ್ಕಲಿಗ, ಲಿಂಗಾಯತರ ಪ್ರಾಬಲ್ಯವೇ ಹೆಚ್ಚು. ಇಂಥ ಸಂದರ್ಭದಲ್ಲಿ ಮೈನಾರಿಟಿ ಕೋಮಿನವರಾದ ಅರಸು ಆರ್. ಕಾಂಗ್ರೆಸ್ ಸ್ಥಾನಕ್ಕೆ ಅಧ್ಯಕ್ಷರಾಗಿ ಆಯ್ಕೆ ಆದದ್ದು, ಆಶ್ಚರ್ಯದ ಸಂಗತಿಯೇ ಸರಿ. ಅದುವರೆಗೂ ಎರಡೂ ಪ್ರಬಲ ಕೋಮುಗಳ ಅಚಲ ಬೆಂಬಲವನ್ನೇ ನಂಬಿ ಬದುಕಿದ್ದ ಕಾಂಗ್ರೆಸ್ ಪಕ್ಷಕ್ಕೆ ಹೊಸ ಚೇತನವೊಂದು ದೊರಕಿತು. ಇಲ್ಲಿಂದಲೇ ಅರಸು ನಾಯಕತ್ವದಲ್ಲಿ ಕರ್ನಾಟಕದ ರಾಜಕಾರಣಕ್ಕೆ ಒಂದು ಹೊಸ ತಿರುವು ದೊರಕಿತು.

ಮೈಸೂರಿನಲ್ಲಿ 'ಆರ್ ಕಾಂಗ್ರೆಸ್'ನ ವಿರೋಧಿ ಬಣವಾದ 'ಸಂಸ್ಥಾ ಕಾಂಗ್ರೆಸ್'ಗೆ ನಿಷ್ಠವಾದ ವೀರೇಂದ್ರ ಪಾಟೀಲ್‌ರ ಸರಕಾರ ಅಸ್ತಿತ್ವದಲ್ಲಿತ್ತು. ಸಂಸ್ಥಾ ಕಾಂಗ್ರೆಸ್‌ನ ಅಧ್ಯಕ್ಷರಾದ ನಿಜಲಿಂಗಪ್ಪನವರು ೧೯೭೧ರ ಚುನಾವಣೆಯಲ್ಲಿ ಆಡಳಿತ ಕಾಂಗ್ರೆಸ್‌ನ್ನು ಎದುರಿಸಲು ವಿರೋಧಿ ಮೈತ್ರಿಕೂಟ ರಚನೆಗೆ ಬಹಳ ಪ್ರಾಧಾನ್ಯತೆಯನ್ನು ನೀಡಿದ್ದರು. ಆದರೆ, ಇದು ಯಾವುದೇ ಫಲ ನೀಡಲಿಲ್ಲ. ಮುಖ್ಯಮಂತ್ರಿ ವೀರೇಂದ್ರ ಪಾಟೀಲ, ರಾಮಕೃಷ್ಣ ಹೆಗಡೆ, ಕೆ.ವಿ. ಶಂಕ್ರೆಗೌಡ, ಬಿ. ರಾಚಯ್ಯ, ಪ್ರದೇಶ ಕಾಂಗ್ರೆಸ್ ಸಮಿತಿ ಅಧ್ಯಕ್ಷ ಡಾ.ನಾಗಪ್ಪ ಅವರಂಥ ನಿಷ್ಠಾವಂತ ನಾಯಕರನ್ನೊಳಗೊಂಡಿದ್ದ ಸಂಸ್ಥಾ ಕಾಂಗ್ರೆಸ್ ೪.೭. ಮಾರ್ಚ್ ೧೯೭೧ರಂದು ನಡೆದ ಲೋಕಸಭಾ ಚುನಾವಣೆಯಲ್ಲಿ ಕೇವಲ ೧೬ ಸ್ಥಾನಗಳನ್ನು ಗೆದ್ದುಕೊಂಡಿತ್ತು. ಆದರೆ ಮೈಸೂರು ರಾಜ್ಯದಲ್ಲಿ ಯಾವುದೇ ಒಂದು ಸ್ಥಾನವನ್ನು ಪಡೆದುಕೊಳ್ಳುವಲ್ಲಿ ಸಫಲವಾಗಲಿಲ್ಲ. ಏಕೆಂದರೆ, ಅರಸು ಅವರ ಸಂಘಟನಾ ಸಾಮರ್ಥ್ಯ ಹಾಗೂ ಇಂದಿರಾ ಗಾಂಧಿಯವರ ಪ್ರಭಾವ ರಾಜ್ಯದಲ್ಲಿ ಹೆಚ್ಚಾಗಿ ಕೆಲಸ ಮಾಡಿತ್ತು. ಇದರಿಂದ ಇಂದಿರಾ ಅವರ ಆಡಳಿತ ಕಾಂಗ್ರೆಸ್ ಎಷ್ಟು ಬಲವಾಗಿ ಬೇರೂರಿತ್ತು ಎಂಬುದು ತಿಳಿದು ಬರುತ್ತದೆ. ಇಲ್ಲಿ ಮುಖ್ಯವಾಗಿ ಸಂಸ್ಥಾ ಕಾಂಗ್ರೆಸ್ ಹಾಗೂ ವಿರೋಧ ಪಕ್ಷಗಳ ಹೊಂದಾಣಿಕೆ ಜನರನ್ನು ಸೆಳೆಯುವಲ್ಲಿ ವಿಫಲವಾದದ್ದು ಹಿನ್ನೆಡೆಗೆ ಕಾರಣವಾಯಿತು.

೧೯೭೨ ಮಾರ್ಚ್ ತಿಂಗಳಲ್ಲಿ ರಾಜ್ಯ ವಿಧಾನಸಭೆಗೆ ಚುನಾವಣೆಗಳು ನಡೆದವು. ಆಗ ಕರ್ನಾಟಕದಲ್ಲಿ ವಿರೇಂದ್ರ ಪಾಟೀಲರ 'ಸಂಸ್ಥಾ ಕಾಂಗ್ರೆಸ್' ನೇತೃತ್ವದ ಸರಕಾರ ವಿಸರ್ಜನೆಯಾಗಿ ರಾಷ್ಟ್ರಪತಿ ಆಡಳಿತ ಜಾರಿಯಲ್ಲಿತ್ತು. ಆಗ ಸಂಸ್ಥಾನ ಕಾಂಗ್ರೆಸ್‌ನ ಮುಖಂಡರಾದ ವೀರೇಂದ್ರ ಪಾಟೀಲ, ಡಾ. ನಾಗಪ್ಪ, ಆಳ್ವ, ರಾಮಕೃಷ್ಣ ಹೆಗಡೆ ಮೊದಲಾದ ನಾಯಕರು ಭಾಗವಹಿಸಿದ್ದರು. ಈ ಸಭೆಯಲ್ಲಿ, ಮೈಸೂರು ರಾಜ್ಯದಲ್ಲಿ ಸಂಸ್ಥಾ ಕಾಂಗ್ರೆಸ್‌ನ್ನು ಮುಂದುವರಿಸಿಕೊಂಡು ಹೋಗಲು, ಪ್ರಬಲವಾದ ರೀತಿಯಲ್ಲಿ ಸಂಘಟನೆಗೊಂಡು ಚುನಾವಣೆಗಳನ್ನು ಎದುರಿಸಲು ಸನ್ನದ್ಧರಾಗಲು ತೀರ್ಮಾನಿಸಲಾಯಿತು. ಈ ಚುನಾವಣೆಯಲ್ಲಿ ಇಂದಿರಾ ಕಾಂಗ್ರೆಸ್‌ನ್ನು ಸೋಲಿಸುವ ಇವರ ಯಾವುದೇ ಪ್ರಯತ್ನಗಳು ಫಲಿಸಲಿಲ್ಲ. ಏಕೆಂದರೆ, ಫಲಿತಾಂಶ ಪ್ರಕಟಗೊಂಡಾಗ ಸಂಸ್ಥಾ ಕಾಂಗ್ರೆಸ್ ಕೇವಲ ೨೪ ಸ್ಥಾನಗಳಲ್ಲಿ ಗೆಲುವು ಸಾಧಿಸಲು ಸಾಧ್ಯವಾದದ್ದು ಎಂಬುದನ್ನು ನೋಡಿದರೆ ಆರ್ ಕಾಂಗ್ರೆಸ್‌ನೊಂದಿಗಿನ ಸಂಸ್ಥಾ ಕಾಂಗ್ರೆಸ್‌ನ ಪೈಪೋಟಿ ಎಷ್ಟರ

ಮಟ್ಟಿಗಿತ್ತು ಎಂಬುದು ಸ್ಪಷ್ಟವಾಗುತ್ತದೆ. ಆದರೂ ಕೂಡ ಶೇಕಡಾ ೨೬.೨೨ರಷ್ಟು ಮತಗಳನ್ನು ಗಳಿಸಿದ್ದು ನಿಜಕ್ಕೂ ಒಂದು ಸಾಧನೆಯೇ ಸರಿ ಎಂದು ಹೇಳಬಹುದು. ಆದರೆ, ಇಂದಿರಾ ಕಾಂಗ್ರೆಸ್ (ಆರ್) ೧೬೫ ಸ್ಥಾನಗಳಲ್ಲಿ ಜಯಗಳಿಸಿತ್ತು. ಇದಕ್ಕೆ ಅರಸು ಅವರ ಸ್ಫೂರ್ತಿ ಹಾಗೂ ಸಂಘಟನಾ ಸಾಮರ್ಥ್ಯವೇ ಕಾರಣ. ಅವರು ಅಧ್ಯಕ್ಷರಾದ ಮೇಲಂತೂ ನಾಡಿನ ಉದ್ದಗಲಕ್ಕೂ ಸಂಚಾರ ಮಾಡಿ ಈ ಸಂಘಟನೆಗೆ ಮತ್ತಷ್ಟು ಬಲ ತುಂಬಿದ್ದರು. ಸಮಾಜದ ಮೇಲ್ವರ್ಗಗಳು ಅದುವರೆಗೂ ಕಡೆಗಣಿಸಿದ ಅಸಂಖ್ಯಾತ ಅಲ್ಪಸಂಖ್ಯಾತರು, ಹಿಂದುಳಿದ ಹಾಗೂ ದಲಿತ ವರ್ಗಗಳಲ್ಲಿ ಉತ್ಸಾಹವನ್ನು ತುಂಬಿದ್ದರು. ಇದರಿಂದಾಗಿ ಮೈತ್ರಿ ಕೂಟದ ವಿರೋಧ ಪಕ್ಷಗಳು ತತ್ತರಿಸಿ ಈ ಚುನಾವಣೆಯಲ್ಲಿ ಸಂಪೂರ್ಣ ಸೋಲನುಭವಿಸಿದವು. ಇದರೊಂದಿಗೆ ಆರ್ ಕಾಂಗ್ರೆಸ್‌ನ ಅಧ್ಯಕ್ಷರಾಗಿದ್ದ ಅರಸು ಅವರು ರಾಜ್ಯದ ಮುಖ್ಯಮಂತ್ರಿಯಾಗಿ ಅಧಿಕಾರವಹಿಸಿಕೊಂಡರು. ಇಲ್ಲಿಂದಲೇ ರಾಜ್ಯದ ರಾಜಕಾರಣದ ಇತಿಹಾಸದಲ್ಲಿ ಒಂದು ಹೊಸ ಅಧ್ಯಾಯವನ್ನು ಅರಸು ಅವರು ಆರಂಭಿಸಿದರು. ಅದುವರೆಗೆ ಆಡಳಿತದಲ್ಲಿ ಆರ್ಥಿಕ, ಸಾಮಾಜಿಕ, ಅಸಮಾನತೆ ಅಧಿಕವಾಗಿತ್ತು.

ಆದರೆ, ಅರಸು ಈ ಅಸಮಾನತೆಯನ್ನು ತೊಡೆದು ಹಾಕುವ ಸಂಕಲ್ಪವನ್ನು ತೊಟ್ಟರು. ಇದರಿಂದ ಕಡುಬಡವರಲ್ಲಿ ಕಮರಿಹೋಗಿದ್ದ ಕನಸುಗಳು ಮರು ಹುಟ್ಟು ಪಡೆದುಕೊಂಡವು. ಅವರ ಹಿಂಬಲ ಆಶೋತ್ತರ, ಕನಸುಗಳಿಗೆ ಹೊಸ ಹುಟ್ಟುಕೊಟ್ಟ ಅರಸು ಅವರು "ಸಾಮಾಜಿಕ ಪರಿವರ್ತನೆಗೆ ಹರಿಕಾರ"ರಾದರು. ಅರಸು ಅಧಿಕಾರದಲ್ಲಿ ಇದ್ದಷ್ಟು ದಿನವೂ ನಾಡಿಗೆ, ಕನ್ನಡಕ್ಕೆ ಘನತೆ ತರುವ ಕೆಲಸಗಳನ್ನು ಮಾಡಿದರು. ಮೇಲ್ಜಾತಿಯವರನ್ನು ಓಲೈಸುತ್ತಲೇ ಹಿಂದುಳಿದವರನ್ನು ಉಸಿರಿಗಿಂತಲೂ ಹೆಚ್ಚಾಗಿ ಪ್ರೀತಿಸಿದರು. ಈ ವರ್ಗಗಳ ನಾಯಕರನ್ನು ಗುರುತಿಸಿ ಅವರಲ್ಲಿ ರಾಜಕೀಯ ಪ್ರಜ್ಞೆಯನ್ನು ಬಿತ್ತಿದರು.

**ಬೂಸಾ ಪ್ರಕರಣ**

೧೯೭೨ರಲ್ಲಿ ದೇವರಾಜ ಅರಸು ಅವರು ಮುಖ್ಯಮಂತ್ರಿಯಾಗುತ್ತಿದ್ದಂತೆ ಆರಂಭದಲ್ಲಿಯೇ ಕಠಿಣವಾದ ರಾಜಕಾರಣ ಸಮಸ್ಯೆಯನ್ನು ಎದುರಿಸಬೇಕಾಯಿತು. ಬಹುಶಃ ವಿರೋಧಿಗಳು ಮನಸ್ಸು ಮಾಡಿದರೆ ಎಂಥ ಸಣ್ಣ ವಿಷಯವನ್ನಾದರೂ ಅದನ್ನು ಭೂತಾಕಾರಕ್ಕೆ ಬೆಳೆಸಬಲ್ಲರು ಎಂಬುದಕ್ಕೆ ಬೂಸಾ ಪ್ರಕರಣವೇ ಒಂದು ಉತ್ತಮ ನಿದರ್ಶನವಾಗಿದೆ. ಇದು ದೇವರಾಜ ಅರಸು ಅವರಿಗೆ ಆಗ ದೊಡ್ಡ ರಾಜಕೀಯ ಸಮಸ್ಯೆಯನ್ನು ಒಡ್ಡಿದ ಬಹಳ ಚಿಕ್ಕವಿಷಯವಾಗಿತ್ತು. ೧೯೭೩ರಲ್ಲಿ ಅರಸು ಸಂಪುಟದಲ್ಲಿ ಕಂದಾಯ ಮಂತ್ರಿಯಾಗಿದ್ದ ಬಿ. ಬಸವಲಿಂಗಪ್ಪನವರು ಆಧುನಿಕ ಕನ್ನಡ ಸಾಹಿತ್ಯದ ಕುರಿತು ಬಹಿರಂಗವಾಗಿ ವ್ಯಕ್ತಪಡಿಸಿದ ವೈಯಕ್ತಿಕ ಅಭಿಪ್ರಾಯವು ಅರಸು ಅವರ ಮುಖ್ಯಮಂತ್ರಿ ಸ್ಥಾನಕ್ಕೆ ಸಂಚಕಾರವನ್ನು ತಂದೊಡ್ಡಿತು.

ಅರಸು ಆಡಳಿತ ಕಾಲದ ಕರ್ನಾಟಕದಲ್ಲಿ ಪ್ರಕಟವಾಗುತ್ತಿದ್ದ ಸಾಮಾಜಿಕ, ರಾಜಕೀಯ ಚಿಂತನೆಗಳಲ್ಲಿ ಬಿ. ಬಸವಲಿಂಗಪ್ಪನವರ ಪಾತ್ರ ಮುಖ್ಯವಾದದ್ದು. ಇವರು ಯಾವುದೇ ಮುಲಾಜಿಲ್ಲದೆ ದಲಿತರ ಸುತ್ತ ಹೆಣೆದಿರುವ ಸುಳ್ಳುಗಳನ್ನು ಬಯಲಿಗೆಳೆದು ಅವರಲ್ಲಿ ರಾಜಕೀಯ ಮತ್ತು ಸಾಮಾಜಿಕ ಪ್ರಜ್ಞೆಯನ್ನು ಮೂಡುವಂತೆ ಮಾಡಿದರು. ಅಷ್ಟೇ ಅಲ್ಲದೆ, ಜಡ್ಡುಗಟ್ಟಿದ ಸಮಾಜದ ಬದಲಾವಣೆಯ ಕನಸುಗಾರರಾಗಿ ಬಸವಲಿಂಗಪ್ಪನವರು ಜಾರಿಗೆ ತಂದ ತಲೆಯ ಮೇಲೆ ಮಲ ಹೊರುವ ಪದ್ಧತಿಯ ರದ್ಧತಿ, ನಿವೇಶನ ಹಂಚಿಕೆಯಲ್ಲಿ ಒಂದೇ ಕಡೆ ಒಂದೇ ಜಾತಿಯ ಜನರಿರಕೂಡದೆಂದು ತಂದ ಆಜ್ಞೆ ಮತ್ತು ನಿಗದಿತ ಅವಧಿಯಲ್ಲಿ ಬೆಂಗಳೂರು ಮಹಾನಗರಕ್ಕೆ ಕಾವೇರಿ ನೀರು ಪೂರೈಕೆ ಯೋಜನೆ ಆರಂಭ, ಇವು ಅವರ ಆಗಿನ ಸಾಧನೆಗಳಲ್ಲಿ ಪ್ರಮುಖವಾದಂಥವು. ಇಂಥ ಪ್ರಗತಿಪರ ವಿಚಾರಗಳಿದ್ದ ಮಂತ್ರಿ ಬಿ. ಬಸವಲಿಂಗಪ್ಪನವರನ್ನು 'ಅಂಬೇಡ್ಕರ್ ಸ್ಕೂಲ್ ಆಫ್ ಥಾಟ್' ಸಂಸ್ಥೆಯು 'ಹೊಸ ಅಲೆ' (ನ್ಯೂವೇವ್) ಎಂಬ ವಿಷಯದ ಕುರಿತು ಭಾಷಣ ಮಾಡಲು ಆಹ್ವಾನಿಸಿತ್ತು. ಈ ಸಭೆಯಲ್ಲಿ ಬಹಳ ಸಂಖ್ಯೆಯ ದಲಿತ ವಿದ್ಯಾರ್ಥಿಗಳು, ಪ್ರಗತಿಪರ ಚಿಂತನೆಗಳಲ್ಲಿ ನಂಬಿಕೆ ಇಟ್ಟವರು ಭಾಗವಹಿಸಿದ್ದರು. ಈ ಸಂದರ್ಭದಲ್ಲಿ ಸ್ವಾಗತಭಾಷಣ ಇಂಗ್ಲಿಷ್‌ನಲ್ಲಿ ಆರಂಭವಾದೊಡನೆ ಕೆಲವರು ವಿರೋಧಿಸಿದರು. ತಮ್ಮ ಮಾತಿನ ಸರದಿ ಬಂದಾಗ ಬಸವಲಿಂಗಪ್ಪನವರು ವಿದ್ಯಾರ್ಥಿಗಳನ್ನು ಉದ್ದೇಶಿಸಿ-

*“ಈ ಸವರ್ಣೀಯರು ಬರೆದ ಕಳಪೆ ಕನ್ನಡ ಸಾಹಿತ್ಯವನ್ನೋದಿ ಕೆಟ್ಟು*
*ಹೋಗಬೇಡಿ. ಇದೆಲ್ಲ ಸಾಹಿತ್ಯ ಅಲ್ಲ. ಬರೀ ಬೂಸಾ. ಅದನ್ನೆಲ್ಲಾ ಗಟಾರಕ್ಕೆ*
*ಎಸೆಯಿರಿ. ಪುರೋಗಾಮಿ ವಿಚಾರಗಳನ್ನು ಸ್ಫುರಿಸಬಲ್ಲ ಇಂಗ್ಲಿಷ್ ಸಾಹಿತ್ಯವನ್ನೋದಿ”*

ಎಂದು ಕರೆನೀಡಿದರು. “ಕೇವಲ ಕನ್ನಡ ಪುಸ್ತಕವನ್ನೋದುವುದರಿಂದ ದೇಶಪ್ರೇಮ, ಸ್ವತಂತ್ರ ವಿಚಾರಶಕ್ತಿ, ಧೈರ್ಯ, ಸೇವಾ ಮನೋಭಾವನೆ ಬರುವುದಿಲ್ಲ. ಕನ್ನಡ ಅಭಿಮಾನ ಇರಬೇಕು, ಕನ್ನಡದಲ್ಲಿ ಮಾತನಾಡಬೇಕು, ಕನ್ನಡವನ್ನು ಬೆಳೆಸಬೇಕು. ಆದರೆ ಇಂಗ್ಲೀಷ್ ಓದುವುದರಿಂದ ವಿಚಾರ ಶಕ್ತಿ, ಸ್ವತಂತ್ರ ಮನೋಭಾವ, ದೇಶಪ್ರೇಮ ಎಲ್ಲಾ ಬರುತ್ತದೆ” ಎಂದು ಕನ್ನಡ ಕನ್ನಡ ಎಂದು ಕೂಗಾಡುತ್ತಿದ್ದವರ ಮೇಲೆ ಬಸವಲಿಂಗಪ್ಪ ಹರಿಹಾಯ್ದರು. ನಂತರ ತಮ್ಮ ಮಾತುಗಳನ್ನು ಎಂದಿನಂತೆ ಹಿಂದೂ ಧರ್ಮದ ಕಂದಾಚಾರ, ಜಾತಿ ವ್ಯವಸ್ಥೆ ಮತ್ತು ಶೋಷಣೆ ವಿರುದ್ಧ ತಿರುಗಿಸಿದರು. ಬಸವಲಿಂಗಪ್ಪನವರ ವಿಚಾರಗಳನ್ನು ಮೆಚ್ಚಿದರೂ ಸಭೆಯಲ್ಲಿದ್ದ ಸಾಹಿತಿ ಶ್ರೀಕೃಷ್ಣ ಆಲನಹಳ್ಳಿ ಅವರು, ಬಸವಲಿಂಗಪ್ಪ ಕನ್ನಡ ಸಾಹಿತ್ಯವನ್ನು ಬೂಸಾಕ್ಕೆ ಹೋಲಿಸಿದ್ದನ್ನು ಎದ್ದು ನಿಂತು ವಿರೋಧಿಸಿದರು. ಮರುದಿನ ಪತ್ರಿಕೆಗಳಲ್ಲಿ ಬಸವಲಿಂಗಪ್ಪನವರ ಹೇಳಿಕೆಗಳು ಮುಖಪುಟದಲ್ಲಿ ಪ್ರಕಟಗೊಂಡವು. ಅಂದಿನಿಂದ ‘ಹೊಸ ಅಲೆ’ಯ ಭಾಷಣ, ಹೊಸದೊಂದು ದಿಕ್ಕು ಹಿಡಿಯಿತು. ಇದೊಂದು ಅನಿರೀಕ್ಷಿತ ಬೆಳವಣಿಗೆ.

ಇದರ ಮರುದಿನವೇ ಸಾಹಿತಿಗಳು ಮತ್ತು ಕನ್ನಡ ಸಂಘ-ಸಂಸ್ಥೆಗಳಿಂದ ಬಸವಲಿಂಗಪ್ಪನವರ ಹೇಳಿಕೆಯ ಖಂಡನೆ, ಪ್ರತಿಕೃತಿ ದಹನ, ಪ್ರತಿಭಟನೆ ಮತ್ತು ಸಚಿವಸ್ಥಾನಕ್ಕೆ ರಾಜೀನಾಮೆ ನೀಡುವಂತೆ ಒತ್ತಡಗಳು ಬಂದವು. ಪ್ರತಿಯಾಗಿ ದಲಿತ ವಿದ್ಯಾರ್ಥಿಗಳು ಬಸವಲಿಂಗಪ್ಪ ಅವರ ಬೆಂಬಲಕ್ಕೆ ನಿಂತರು. ಸವರ್ಣೀಯ ವಿದ್ಯಾರ್ಥಿಗಳು ಮುಖ್ಯವಾಗಿ ಮೈಸೂರು ಮತ್ತು ಬೆಂಗಳೂರಿನಲ್ಲಿ ಕಾಲೇಜು ಬಂದ್ ಮಾಡಿಸಿ ಬೀದಿಗಿಳಿದರು. ಬೀದಿ ಬೀದಿಗಳಲ್ಲಿ ಬಸವಲಿಂಗಪ್ಪನವರ ಪರ ಮತ್ತು ವಿರುದ್ಧ ಚಳವಳಿ ನಡೆದರೆ, ಕಾಲೇಜುಗಳಲ್ಲಿ ಹಾಗೂ ವಿದ್ಯಾರ್ಥಿನಿಲಯಗಳಲ್ಲಿ ದಲಿತ ವಿದ್ಯಾರ್ಥಿಗಳನ್ನು ಗುರುತಿಸಿಕೊಂಡು ಅಟ್ಟಾಡಿಸಿಕೊಂಡು ಹೊಡೆಯುವ ಘಟನೆಗಳು ದಿನ ನಿತ್ಯವು ನಿರಾತಂಕವಾಗಿ ನಡೆದವು. ಈ ಸಂದರ್ಭದಲ್ಲಿ ಅನಂತಮೂರ್ತಿ ಅವರು “ಕನ್ನಡ ಸಾಹಿತ್ಯದ ಬಗ್ಗೆ ಟೀಕಿಸಲು ಬಸವಲಿಂಗಪ್ಪ ಅವರಿಗೆ ಎಲ್ಲಾ ಹಕ್ಕುಗಳು ಇವೆ. ಅಲ್ಲದೆ ಕನ್ನಡ ಸಾಹಿತ್ಯದ ಬಗ್ಗೆ ಅವರು ಆಡಿರುವ ಮಾತು ವಾಸ್ತವವಾಗಿದೆ” ಎಂದು ಮಡಿಕೇರಿಯ ಒಂದು ಸಭೆಯಲ್ಲಿ ಹೇಳಿದರು. ಆದರೂ ಕನ್ನಡ ಪರ ಸಂಘಟನೆಗಳ, ವಿದ್ಯಾರ್ಥಿಗಳ ಪ್ರತಿಭಟನೆಗಳು ಮುಂದುವರೆದವು. ಶಿವಮೊಗ್ಗ, ಧಾರವಾಡ, ಗುಲ್ಬರ್ಗಾ, ಬೆಳಗಾವಿ, ಮಂಡ್ಯ ಮುಂತಾದ ಕಡೆಗಳಲ್ಲಿ ಈ ಹೋರಾಟ ಉಗ್ರರೂಪ ತಾಳಿತು. ರಾಜ್ಯದ ಎಲ್ಲಾ ಕಾಲೇಜುಗಳ ವಿದ್ಯಾರ್ಥಿಗಳ ತಾತ್ಕಾಲಿಕ ಹೋರಾಟ ಕ್ರಿಯಾ ಸಮಿತಿಯೊಂದು ಮೈಸೂರಿನ ಮಹಾರಾಜ ಕಾಲೇಜಿನ ಕೆ.ಸಿ.ಶಂಕರೇಗೌಡ ನೇತೃತ್ವದಲ್ಲಿ ಅಸ್ತಿತ್ವಕ್ಕೆ ಬಂದಿತು. ಈ ಚಳವಳಿಯ ಜೊತೆಗೆ ಕನ್ನಡ ಪರ ಹೋರಾಟಗಾರರಾದ ವಾಟಾಳ್ ನಾಗರಾಜ, ಜಿ.ನಾರಾಯಣಕುಮಾರ್, ನಾಡಿಗೇರ್ ಕೃಷ್ಣರಾಯರಂಥ ಅನೇಕ ಮುಖಂಡರು ಬಸವಲಿಂಗಪ್ಪ ಅವರನ್ನು ಸಚಿವ ಸಂಪುಟದಿಂದ ವಜಾ ಮಾಡುವವರೆಗೂ ಹೋರಾಟ ಮಾಡುವುದಾಗಿ ಘೋಷಿಸಿ ಬೀದಿಗಿಳಿದರು. ಹೋರಾಟದ ಕಾವು ಏರುತ್ತಿದ್ದಂತೆ ಬಸವಲಿಂಗಪ್ಪ ಹೇಳಿಕೆಯೊಂದನ್ನು ನೀಡಿ ಚಳವಳಿ ನಿರತ ವಿದ್ಯಾರ್ಥಿಗಳನ್ನು ಸಮಾಧಾನ ಪಡಿಸಲು ಪ್ರಯತ್ನಿಸಿದ್ದು ಸಫಲವಾಯಿತು. ಚಳವಳಿ ಉಗ್ರಸ್ವರೂಪ ತಾಳಿದ್ದರಿಂದ ರಾಜ್ಯದಲ್ಲಿ ಎರಡುವಾರಗಳ ಕಾಲ ಶಾಲಾ ಕಾಲೇಜುಗಳನ್ನು ಮುಚ್ಚಲಾಯಿತು. ಅನೇಕ ಕಡೆ ಪ್ರತಿಬಂಧಕಾಜ್ಞೆಗಳು ಜಾರಿಗೆ ಬಂದವು. ಮುಖ್ಯಮಂತ್ರಿ ದೇವರಾಜ ಅರಸು ಅವರು ಎಷ್ಟೇ ಮನವಿ ಮಾಡಿದರೂ ವಿದ್ಯಾರ್ಥಿಗಳು ಚಳವಳಿ ನಿಲ್ಲಿಸಲಿಲ್ಲ. ರಾಜ್ಯದಲ್ಲಿ ಕಾನೂನು ವ್ಯವಸ್ಥೆ ಕುಸಿಯುತ್ತಿದ್ದುದನ್ನು ಕಂಡು ಅರಸು ಅವರು, ಮಾಜಿ ಮುಖ್ಯಮಂತ್ರಿ ಕಡಿದಾಳ್ ಮಂಜಪ್ಪ ನೇತೃತ್ವದಲ್ಲಿ ಶಾಂತಿ ಸಮಿತಿ ರಚಿಸಿದರು. ಬೆಂಗಳೂರು ವಿಶ್ವವಿದ್ಯಾಲಯದ ಕುಲಪತಿ ಎಚ್. ನರಸಿಂಹಯ್ಯ ಎಲ್ಲಾ ಕಾಲೇಜುಗಳ ಪ್ರಿನ್ಸಿಪಾಲರನ್ನು ಸಭೆ ಕರೆದು ಶಾಂತಿ ಕಾಪಾಡಲು ಸಮಿತಿ ರಚಿಸಿದರು. ಮುಖ್ಯಮಂತ್ರಿ ಅರಸು ಬಸವಲಿಂಗಪ್ಪ ಅವರ ರಾಜೀನಾಮೆ ನಡೆಯಲು ಮುಂದಾಗಲಿಲ್ಲ. ಸ್ವತಃ ಬಸವಲಿಂಗಪ್ಪ ಅವರೂ ಕೂಡ ರಾಜೀನಾಮೆ ನೀಡಲು ಮುಂದಾಗಲಿಲ್ಲ.

ಮುಖ್ಯಮಂತ್ರಿ ಅರಸು ಎಷ್ಟೇ ಮನವಿಮಾಡಿದರೂ ವಿದ್ಯಾರ್ಥಿಗಳು ಚಳವಳಿ ನಿಲ್ಲಸಲಿಲ್ಲ. ‘ರಾಜ್ಯದಲ್ಲಿ ಕಾನೂನು ವ್ಯವಸ್ಥೆ ಕುಸಿಯುತ್ತಿದೆ. ಬಸವಲಿಂಗಪ್ಪ ಅವರನ್ನು ಸಂಪುಟದಿಂದ ಕೈಬಿಡದೆ ಬೇರೆದಾರಿ ಇಲ್ಲ’ ಎಂದು ಅರಸು ಅವರ ಮೇಲೆ ಅವರ ಸಂಪುಟ

ಸಹೋದ್ಯೋಗಿಗಳು ಒತ್ತಡ ತಂದರು. ಆಗಿನ ಸಮಾಜವಾದಿ ಅಧ್ಯಕ್ಷ ಜೆ.ಎಚ್.ಪಟೇಲ್, 'ಈ ಕ್ರಿಯೆ, ಪ್ರತಿಕ್ರಿಯೆ ನೋಡಿದರೆ ಇದು ಕೇವಲ ಕನ್ನಡಾಭಿಮಾನಿಗಳ ಪ್ರತಿಭಟನೆಯಾಗಿ ಕಾಣುವುದಿಲ್ಲ. ಇದರಲ್ಲಿ ಭಾಷೆಗೆ ಮೀರಿದ ಅಂಶಗಳೂ ಇದ್ದಂತಿವೆ. ಕೇವಲ ಒಬ್ಬ ಮಂತ್ರಿಯ ಪ್ರತಿಕೃತಿ ದಹನಕ್ಕೆ ಬದಲು ವಿದ್ಯಾರ್ಥಿಗಳು ಕನ್ನಡ ರಾಜ್ಯ ಭಾಷೆಯು ಶಿಕ್ಷಣ ಮಾಧ್ಯಮ ಮತ್ತು ನ್ಯಾಯಾಂಗ ಭಾಷೆಯಾಗಲು ಹೋರಾಟ ನಡೆಸುವುದು ಉಚಿತ' ಎಂದರು. ಕೊನೆಗೆ ಸೆಪ್ಟೆಂಬರ್ ೫ರಂದು ಬೆಂಗಳೂರಿನಲ್ಲಿದ್ದ ಎಂ.ಮಲ್ಲಿಕಾರ್ಜುನಸ್ವಾಮಿ, ಕೆ.ಎಚ್.ರಂಗನಾಥ ಸೇರಿದಂತೆ ಹತ್ತು ಮಂದಿ ಸಂಪುಟ ದರ್ಜೆಯ ಸಚಿವರು ಬಸವಲಿಂಗಪ್ಪನವರಿಗೆ ಬೆಂಬಲವಾಗಿ ಸಾಮೂಹಿಕ ರಾಜೀನಾಮೆ ನೀಡಿದರು. ಅಂತಿಮವಾಗಿ, ಬಸವಲಿಂಗಪ್ಪ ಕೂಡ ತಮ್ಮ ರಾಜೀನಾಮೆ ಸಲ್ಲಿಸಿದರು. ಈ ಎಲ್ಲಾ ರಾಜೀನಾಮೆ ನೀಡಿದರು. ಅಂತಿಮವಾಗಿ, ಬಸವಲಿಂಗಪ್ಪ ಕೂಡ ತಮ್ಮ ರಾಜೀನಾಮೆ ಸಲ್ಲಿಸಿದರು. ಈ ಎಲ್ಲಾ ರಾಜೀನಾಮೆ ಪತ್ರಗಳನ್ನು ತೆಗೆದುಕೊಂಡು ಅರಸು ಅವರು ಇಂದಿರಾಗಾಂಧಿಯವರ ಭೇಟಿಗೆ ದೆಹಲಿಗೆ ತೆರಳಿದರು. ಮುಂದೆ ಅರಸು ರಾಜ್ಯ ರಾಜಕಾರಣದ ಪರಿಸ್ಥಿತಿಯನ್ನು ಸೂಕ್ಷ್ಮವಾಗಿ ಕಾಂಗ್ರೆಸ್ ಅಧ್ಯಕ್ಷೆ ಇಂದಿರಾಗಾಂಧಿ ಅವರಿಗೆ ವಿವರಿಸಿದರು. ಅಲ್ಲಿ ಬಸವಲಿಂಗಪ್ಪನವರನ್ನು ಸಂಪುಟದಿಂದ ಬಿಡುವ ತೀರ್ಮಾನ ಕೈಗೊಂಡು ಹೊಸದಾಗಿ ಸಚಿವ ಸಂಪುಟವನ್ನು ರಚಿಸಿದರು. ಒಟ್ಟಾರೆ ಈ ಬೂಸಾ ಪ್ರಕರಣ ರಾಜ್ಯದಲ್ಲಿ ಮುಂದೆ ಸಾಮಾಜಿಕವಾಗಿ ಮತ್ತು ಸಾಂಸ್ಕೃತಿಕವಾಗಿ ದಲಿತ ಚಳವಳಿಗೆ ಒಂದು ಹೊಸ ಆಯಾಮವನ್ನೇ ನೀಡಿದ್ದು, ಕರ್ನಾಟಕ ರಾಜಕಾರಣದಲ್ಲೊಂದು ಹೊಸ ಅಧ್ಯಾಯವನ್ನೇ ಆರಂಭಿಸಿತು ಎಂದು ಹೇಳಬಹುದು.

೧೯೭೫ರ ಜೂನ್ ೧೨ರಂದು ಭಾರತದ ಚರಿತ್ರೆಯಲ್ಲಿ ಒಂದು ಐತಿಹಾಸಿಕ ಘಟನೆ ನಡೆಯಿತು. ಅಂದು ಅಲಹಾಬಾದ್ ಹೈಕೋರ್ಟ್ ನೀಡಿದ ತೀರ್ಪು ಭಾರತದ ರಾಜಕಾರಣ ಇತಿಹಾಸದಲ್ಲಿ ಒಂದು ಹೊಸ ತಿರುವು. ಸಮಾಜವಾದಿ ಚಿಂತಕ ರಾಮಮನೋಹರ ಲೋಹಿಯಾ ಅವರ ಶಿಷ್ಯ ರಾಜನಾರಾಯಣ ಅವರು ಇಂದಿರಾಗಾಂಧಿಯವರ ಚುನಾವಣೆಯ ಆಯ್ಕೆಯ ಬಗ್ಗೆ ಅಲಹಾಬಾದ್ ಹೈಕೋರ್ಟ್‌ನಲ್ಲಿ ದಾವೆ ಹೂಡಿದ್ದರು. ಅಂದು ಹೊರಬಿದ್ದ ತೀರ್ಪಿನಲ್ಲಿ ಇಂದಿರಾಗಾಂಧಿಯವರು ಲೋಕಸಭೆಗೆ ಆಯ್ಕೆಯಾದದ್ದು ಕ್ರಮಬದ್ಧವಲ್ಲವೆಂದು ಕೋರ್ಟ್ ತೀರ್ಮಾನಿಸಿತು. ಈ ತೀರ್ಪು ದೇಶದ ರಾಜಕಾರಣದ ವಲಯದಲ್ಲಿ ತೀವ್ರ ಸಂಚಲನವನ್ನು ಉಂಟುಮಾಡಿತು. ಆಗ ಕರ್ನಾಟಕದ ಮುಖ್ಯಮಂತ್ರಿಯಾಗಿದ್ದ ದೇವರಾಜ ಅರಸು ಅವರು ತಾಳ್ಮೆಗೆಡದೆ ಇದೊಂದು ಸೂಕ್ಷ್ಮವಾದ ವಿಷಯವೆಂದು ಪರಿಗಣಿಸಿ ಪರಿಸ್ಥಿತಿಯನ್ನು ಕಾಂಗ್ರೆಸ್‌ನ ಹಿತಾಸಕ್ತಿಗೆ ತಕ್ಕಂತೆ ನಿಭಾಯಿಸಿದರು. ದೇಶದ ನಾಯಕರೆಲ್ಲರು ಇಂದಿರಾಗಾಂಧಿಯವರಿಗೆ ರಾಜೀನಾಮೆ ನೀಡಲು ಎಷ್ಟೇ ಬುದ್ಧಿವಾದ ಹೇಳಿದರೂ ಅದಕ್ಕೆ ಇಂದಿರಾಗಾಂಧಿಯವರು ಮನಗೊಡದೆ ಸರ್ವಾಧಿಕಾರಿಯಂತೆ ವರ್ತಿಸಿ ತುರ್ತುಪರಿಸ್ಥಿತಿಯನ್ನು ಘೋಷಿಸಿದರು.

ಹಿಟ್ಲರ್ ಅಧಿಕಾರಕ್ಕೆ ಬಂದಕಾಲದಲ್ಲಿ ತನ್ನ ದೇಶದ ಸಮಸ್ಯೆಗಳನ್ನು ಬಗೆಹರಿಸಿದಂತೆ ಕಂಡಹಾಗೆ ಇಂದಿರಾಗಾಂಧಿಯೂ ಬಡಜನರಲ್ಲಿ ಬಡತನ ನಿರ್ಮೂಲನ ಭ್ರಮೆಯನ್ನು ಉಂಟುಮಾಡಿದರು. ಪರಿಣಾಮವಾಗಿ ೧೯೭೫ರಲ್ಲಿ ಪ್ರಧಾನಿ ಇಂದಿರಾಗಾಂಧಿಯವರು ರಾಷ್ಟ್ರೀಯ ತುರ್ತುಪರಿಸ್ಥಿತಿ ಹೇರಿದ್ದಾಗಲೇ 'ಇಪ್ಪತ್ತು ಅಂಶ'ಗಳ ಕಾರ್ಯಕ್ರಮವನ್ನು ಸಾರಿದರು. ಈ ಪರಿಸ್ಥಿತಿಯಿಂದ ಸಿಕ್ಕ ಅಧಿಕಾರವನ್ನು ಆನೇಕ ನಾಯಕರು, ಅಧಿಕಾರಿಗಳು ಅದನ್ನು ದುರುಪಯೋಗ ಪಡಿಸಿಕೊಂಡರು. ದೇಶದ ಇತರ ಕಡೆಗಳಲ್ಲಿ ೧೯೭೭ರ ಲೋಕಸಭಾ ಚುನಾವಣೆಯಲ್ಲಿ ಕಾಂಗ್ರೆಸ್ ಸೋಲುವಂಥ ವಾತಾವರಣ ನಿರ್ಮಾಣವಾದರೂ ಕರ್ನಾಟಕದಲ್ಲಿ ಅಂಥ ದಬ್ಬಾಳಿಕೆಗೆ ಅರಸು ಅವರು ಅವಕಾಶ ಮಾಡಿಕೊಡಲಿಲ್ಲ.

೧೯೭೭ರ ಚುನಾವಣೆಯಲ್ಲಿ ಲೋಕಸಭೆಯಲ್ಲಿ ರಾಜ್ಯದ ೨೮ ಸ್ಥಾನಗಳಲ್ಲಿ ೨೬ ಇಂದಿರಾಗಾಂಧಿಯವರ ಪಕ್ಷದ ಪಾಲಾಯಿತು. ೧೯೭೭ರ ಮಹಾಚುನಾವಣೇಯಲ್ಲಿ ಇಂದಿರಾ ಹಾಗೂ ಅವರ ಪುತ್ರ ಸಂಜಯಗಾಂಧಿ ಕೂಡ ಸೋಲನುಭವಿಸಿದ್ದರು. ಕೇಂದ್ರದಲ್ಲಿನ ಜನತಾ ಸರಕಾರ ಅರಸು ಸರಕಾರವನ್ನು ಪದಚ್ಯುತಿಗೊಳಿಸಿ ರಾಷ್ಟ್ರಪತಿ ಆಡಳಿತವನ್ನು ಜಾರಿಗೊಳಿಸಿತು (೧.೧.೧೯೭೮). ಎರಡು ತಿಂಗಳ ನಂತರ ನಡೆದ ಚಿಕ್ಕಮಗಳೂರು ಕ್ಷೇತ್ರದ ಉಪಚುನಾವಣೆಯಲ್ಲಿ ಇಂದಿರಾಗಾಂಧಿ ಗೆದ್ದುಬಂದರು. ಫೆಬ್ರವರಿ ೨೦, ೧೯೭೮ರಂದು ಅರಸು ಅವರು ಎರಡನೆಯ ಬಾರಿಗೆ ಅಧಿಕಾರ ವಹಿಸಿಕೊಂಡರು. ಆದರೆ ಮುಂದೆ ಸಂಭವಿಸಿದ ರಾಜಕೀಯ

ತಿರುವಿನಲ್ಲಿ ಅರಸು ಮತ್ತು ಇಂದಿರಾಗಾಂಧಿಯವರಲ್ಲಿ ವೈಯಕ್ತಿಕ ಸಂಘರ್ಷವುಂಟಾಗಿ ೧೯೭೯ರಲ್ಲಿ ಇಂದಿರಾಗಾಂಧಿ ದೇವರಾಜ ಅರಸು ಅವರನ್ನು ಪಕ್ಷದಿಂಧ ಉಚ್ಚಾಟಿಸಿದರು.

ಜೂನ್ ೨೪, ೧೯೭೯ರಂದು ಇಂದಿರಾಗಾಂಧಿ ಕಾರ್ಯಕಾರಿ ಸಮಿತಿಯು ದೇವರಾಜ ಅರಸು ಅವರನ್ನು ಪಕ್ಷದಿಂದ ಆರು ವರ್ಷಗಳ ಕಾಲ ಉಚ್ಚಾಟಿಸಿದರು. ಅದೇ ದಿನ ಪ್ರದೇಶ ಕಾಂಗ್ರೆಸ್ ಸಮಿತಿಯ ಸಾಮಾನ್ಯ ಸಭೆ ನಡೆಯಿತು. ೨೫ರಂದು ಇಂದಿರಾ ನಿಷ್ಠರು ಹಾಗೂ ಅರಸು ಬೆಂಬಲಿಗರ ನಡುವೆ ಬಲಾಬಲದ ಪರೀಕ್ಷೆ ನಡೆಯಿತು. ಅಂದು ನಡೆದ ಬಲಪ್ರದರ್ಶನದಲ್ಲಿ ಅರಸು ಸಂಘಟನಾ ಶಕ್ತಿ ಪ್ರದರ್ಶಿತವಾಯಿತು. ಅಂದು ೨೪೦ ಪಿ.ಸಿ.ಸಿ.ಐ. ಸದಸ್ಯರ ಪೈಕಿ ೨೦೮ ಜನ ಸದಸ್ಯರು ಹಾಜರಿದ್ದರು. ೧೫೪ ವಿಧಾನಸಭಾ ಸದಸ್ಯರ ಪೈಕಿ ೧೩೧ ಜನ ಶಾಸಕರು, ೮ ಜನ ಸದಸ್ಯರು ತಂತಿಯ ಮೂಲಕ ಬೆಂಬಲ ಸೂಚಿಸಿದರು. ೧೮ ಜನ ಲೋಕಸಭಾ ಸದಸ್ಯರು ಹಾಗೂ ೨೪ ಜನ ವಿಧಾನ ಪರಿಷತ್ ಸದಸ್ಯರು ಅರಸು ಅವರಿಗೆ ಬೆಂಬಲ ವ್ಯಕ್ತಪಡಿಸಲು ಹಾಜರಿದ್ದರು. ಆಗ ಅರಸರು ತಮ್ಮದು 'ಕರ್ನಾಟಕ ಕಾಂಗ್ರೆಸ್ ಪಕ್ಷ' ಎಂದು ಘೋಷಣೆ ಮಾಡಿದರು. ಈ ರೀತಿಯಾಗಿ ಕರ್ನಾಟಕ ಕಾಂಗ್ರೆಸ್‌ಪಕ್ಷ ರಾಜ್ಯದಲ್ಲಿ ಇಂದಿರಾಗಾಂಧಿಯವರ ವಿರುದ್ಧ ಪರ್ಯಾಯ ಪಕ್ಷವಾಗಿ ಉದಯಿಸಿತು. ಬಹುಶಃ ಇಲ್ಲಿಂದಲೇ ರಾಜ್ಯರಾಜಕಾರಣದಲ್ಲಿ ರಾಜಕೀಯ ಧ್ರುವೀಕರಣ ಆರಂಭವಾಯಿತು. ಎಲ್ಲಾ ಪಕ್ಷದಲ್ಲಿರುವ ಪ್ರಗತಿಪರರು, ಬಡವರ ಪಕ್ಷಪಾತಿಗಳು, ಅನ್ಯಾಯವನ್ನು ಪ್ರತಿಭಟಿಸುವವರು ಒಂದುಗೂಡುವ ಕಾಲ ಬಂದಿದೆ ಎಂದು ಅರಸು ಪತ್ರಿಕಾಗೋಷ್ಠಿಯಲ್ಲಿ ತಿಳಿಸಿದರು. ಜುಲೈ ೪, ೧೯೭೯ ರಂದು ಬೆಂಗಳೂರಿನಲ್ಲಿ ಕಾಂಗ್ರೆಸ್ಸಿಗರ ಸಮ್ಮೇಳನ ಸಂಘಟಿತವಾಯಿತು. ಕಾಂಗ್ರೆಸ್(ಎಸ್)ಗೆ ಸೇರಿದ ಎಸ್.ಆರ್.ಬೊಮ್ಮಾಯಿ, ರಾಮಕೃಷ್ಣ ಹೆಗಡೆ ಬಹುಸಂಖ್ಯೆಯ ಪ್ರತಿನಿಧಿಗಳು ಹಾಜರಿದ್ದರು. ಮಹಾರಾಷ್ಟ್ರ, ಆಂಧ್ರ, ಬಿಹಾರ, ಕಾಶ್ಮೀರ, ಉತ್ತರಪ್ರದೇಶ, ಪಶ್ಚಿಮಬಂಗಾಳ, ಪಂಜಾಬ್ ಮತ್ತು ದೆಹಲಿಯ ಕಾಂಗ್ರೆಸ್(ಐ)ನ ಭಿನ್ನಮತೀಯರೂ ಈ ಸಮ್ಮೇಳನದಲ್ಲಿ ಹಾಜರಿದ್ದರು ಎಂಬುದು ಈ ಸಮ್ಮೇಳನದ ಇನ್ನೊಂದು ವಿಶೇಷ.

**ಅಖಿಲ ಭಾರತ ಕಾಂಗ್ರೆಸ್ ಅಧ್ಯಕ್ಷರಾಗಿ ಅರಸು**

ದೇವರಾಜ ಅರಸು ಜನತಾಪಕ್ಷಕ್ಕೆ ಪರ್ಯಾಯವಾಗಿ ೧೯೬ ೯ರ ವಿಭಜನಾ ಪೂರ್ವ ಕಾಂಗ್ರೆಸ್ ಪಕ್ಷವನ್ನು ಸಂಘಟಿಸಲು ಉದ್ದೇಶಿಸಿದ್ದರು. ಅದರ ಪರಿಣಾಮವಾಗಿ ೧೯೭೯ ಸೆಪ್ಟೆಂಬರ್ ೧೨, ೧೩ರಂದು ಬೆಂಗಳೂರಿನ ಲಾಲ್‌ಬಾಗ್ ಗಾಜಿನಮನೆಯಲ್ಲಿ ವಿಭಜಿತ ರಾಷ್ಟ್ರೀಯ (ಎಸ್) ಕಾಂಗ್ರೆಸ್‌ನ ಅಧಿವೇಶನ ನಡೆಯಿತು. ಅಂದು ಮಾಜಿ ಕೇಂದ್ರ ಸಚಿವ ಸರ್ದಾರ್ ಸ್ವರಣ್‌ಸಿಂಗ್ ಅವರು ತಮ್ಮ ಅಧ್ಯಕ್ಷ ಸ್ಥಾನವನ್ನು ದೇವರಾಜ ಅರಸು ಅವರಿಗೆ ವಹಿಸಿಕೊಟ್ಟಿದ್ದರು. ಅಂದು ಅಖಿಲ ಭಾರತ ಕಾಂಗ್ರೆಸ್ ಅಧ್ಯಕ್ಷರಾಗಿ ಅಧಿಕಾರವನ್ನು ವಹಿಸಿಕೊಂಡ ನಂತರ ಅದು 'ಅರಸು ಕಾಂಗ್ರೆಸ್' ಎಂದು ಕರೆಯಿಸಿಕೊಂಡಿತು. ಅಂದು ರಾಜ್ಯ ಕರ್ನಾಟಕ ಕಾಂಗ್ರೆಸ್ ಅಧ್ಯಕ್ಷರಾಗಿ ಗುಲ್ಬರ್ಗಾ ಲೋಕಸಭಾ ಸದಸ್ಯ ಸಿದ್ದರಾಮರೆಡ್ಡಿಯವರನ್ನು ಆಯ್ಕೆಮಾಡಲಾಯಿತು. ಮುಂದೆ ಅರಸು ಅವರು ರಾಷ್ಟ್ರೀಯ ಕಾಂಗ್ರೆಸ್ಸನ್ನು ಚೌಧರಿ, ಚರಣ್‌ಸಿಂಗರ ಲೋಕದಳ ಪಕ್ಷದೊಂದಿಗೆ ಮೈತ್ರಿ ಏರ್ಪಡಿಸಿಕೊಂಡು ಲೋಕಸಭಾ ಚುನಾವಣೆಗಳನ್ನು ಎದುರಿಸಬೇಕೆಂದು ಈ ಸಮ್ಮೇಳನದಲ್ಲಿ ತೀಮಾನಿಸಲಾಯಿತು. ಅರಸು ಈ ಸಂದರ್ಭದಲ್ಲಿ ಮಾತನಾಡುತ್ತಾ "ಕಾಂಗ್ರೆಸ್ ಪಕ್ಷದ ಶ್ರೀಮಂತರು ಹಾಗೂ ಬಡವರನ್ನು ಸಮಾನವಾಗಿ ಓಲೈಸುವ ಸಿದ್ಧಾಂತವನ್ನು ಟೀಕಿಸುತ್ತಾ ಇದು 'ಕುರಿ ಮತ್ತು ತೋಳ' ಎರಡರ ಮೇಲೆಯೂ ಸಮಾನವಾಗಿ ಕೈಯಿಡುವ ಆಟ ಎಂದು ವಿವರಿಸಿದರು. ತಮ್ಮ ಪಕ್ಷ ಬಡಜನರು ಹಾಗೂ ದಲಿತರ ಪರವಾಗಿ ನಿಲ್ಲಬೇಕಾದ ಅಗತ್ಯವನ್ನು ಒತ್ತಿ ಹೇಳಿದರು.

ಅಕ್ಟೋಬರ್ ೧೯೭೯ರಲ್ಲಿ ರಾಜ್ಯಶಾಸನ ಸಭೆಯ ಅಧಿವೇಶನದಲ್ಲಿ ಇತ್ತೀಚಿನವರೆಗೂ ತಮ್ಮ ನಿಷ್ಠಾವಂತ ಬೆಂಬಲಿಗರಾಗಿದ್ದವರಿಂದಲೆ ಅರಸು ಸರಕಾರದ ವಿರುದ್ಧ ಅವಿಶ್ವಾಸ ನಿರ್ಣಯ ಮಂಡನೆಯಾಯಿತು. ಆ ಸಮಯದಲ್ಲಿ ಅರಸು ನಂಬಿಕೊಂಡಿದ್ದ ಶಾಸಕರಾದ ಬಂಗಾರಪ್ಪ, ಗುಂಡೂರಾವ್, ಕೆ.ಎಚ್.ಪಾಟೀಲ್ ಇಂದಿರಾ ಪಕ್ಷ (ಬಣ) ಸೇರಿಕೊಂಡರು. ತಮ್ಮ ಭದ್ರತೆಗಾಗಿ ಅರಸು ಜನತಾ ಪಕ್ಷದಿಂದ ಕೆಲವರನ್ನು ಸೆಳೆದರು. ಪಕ್ಷಾಂತರ, ಭ್ರಷ್ಟಾಚಾರ, ನಂಬಿಕೆದ್ರೋಹ ಮುಂತಾದ ಕೆಟ್ಟ

ರಾಜಕೀಯ ಪ್ರಕ್ರಿಯೆಗಳೆಲ್ಲ ಅನಾವರಣಗೊಳ್ಳತೊಡಗಿದವು. ಕೇವಲ ಕ್ರಾಂತಿಕಾರಕ ವಿಚಾರಗಳ ಕುರಿತು ಮಾತನಾಡುತ್ತಿದ್ದ ಅರಸು ಅವರು ಈಗ ತಾವಾಗಿಯೇ ಸಿಕ್ಕಿಬಿದ್ದರು ಎಂಬುದು ಒಂದು ಸೋಜಿಗದ ಸಂಗತಿ.

**ಕ್ರಾಂತಿರಂಗ ಪಕ್ಷ ಸ್ಥಾಪನೆ**

೧೯೭೯ರಲ್ಲಿ ಕೇಂದ್ರದಲ್ಲಿದ್ದ ಜನತಾ ಸರಕಾರದ ಪತನದಿಂದಾಗಿ, ೧೯೮೦ರ ಜನವರಿ ತಿಂಗಳಲ್ಲಿ ಲೋಕಸಭೆಗೆ ಚುನಾವಣೆಗಳು ನಡೆದವು. ಆಗ ದೇವರಾಜ ಅರಸು 'ಕಾಂಗ್ರೆಸ್'(ಯು) ಇಂದಿರಾ ಕಾಂಗ್ರೆಸ್‌ಗೆ ಪ್ರತಿಸ್ಪರ್ಧಿಯಾಗಿತ್ತು. ಜನರ ಒಲವೂ ಕೂಡ ಇಂದಿರಾ ಕಾಂಗ್ರೆಸ್ ಕಡೆಗೆ ಬಲವಾಗಿತ್ತು. ಅರಸು ಅವರು ಈ ಚುನಾವಣಾ ಪ್ರಚಾರದಲ್ಲಿ ಜನತೆಯನ್ನು ತನ್ನತ್ತ ಸೆಳೆದುಕೊಳ್ಳುವಲ್ಲಿ ಬಹುತೇಕ ಸಫಲವಾಗಿದ್ದರೂ ಜನತೆ ಇಂದಿರಾಗಾಂಧಿಯ ಪ್ರಭಾವಕ್ಕೆ ಸಿಕ್ಕಿ ಇಂದಿರಾ ಕಾಂಗ್ರೆಸ್‌ಗೆ ಮತ ನೀಡಿ ಅತಿ ಹೆಚ್ಚು ಬಹುಮತದಿಂದ ಆರಿಸಿ ತಂದಿದ್ದರು. ಅರಸು ಕಾಂಗ್ರೆಸ್ ಈ ಚುನಾವಣೆಯಲ್ಲಿ ಸಂಪೂರ್ಣ ಸೋಲನ್ನು ಅನುಭವಿಸಿತ್ತು. ಅರಸು ಪಕ್ಷದಿಂದ ಸ್ಪರ್ಧಿಸಿದ್ದ ಎಂ.ವಿ. ಕೃಷ್ಣಪ್ಪ, ಬಿ.ಎ.ಪೈ, ಮತ್ತು ಬಿ.ರಾಚಯ್ಯನವರಂಥ ನಾಯಕರು ತಮ್ಮ ಠೇವಣಿಯನ್ನು ಕಳೆದುಕೊಂಡಿದ್ದರು. ಈ ಚುನಾವಣೆಯಲ್ಲಿ ಇಂದಿರಾ ಕಾಂಗ್ರೆಸ್ ಒಟ್ಟು ೨೯ ಲೋಕಸಭಾ ಸ್ಥಾನಗಳ ಪೈಕಿ ೨೭ ಸ್ಥಾನಗಳಲ್ಲಿ ಜಯಗಳಿಸಿತ್ತು. ಜನತಾ ಪಕ್ಷ ಒಂದು ಸ್ಥಾನ ಮಾತ್ರ ಗೆದ್ದುಕೊಂಡಿತ್ತು. ಆದರೆ ಅರಸು ಪಕ್ಷ ಒಂದೂ ಸ್ಥಾನವನ್ನು ಗೆಲ್ಲಲಿಲ್ಲ.

ದೇವರಾಜ ಅರಸು ಅವರು ಒಬ್ಬ ದಕ್ಷನಾಯಕನಾಗಿ, ಒಳ್ಳೆಯ ಸಂಘಟಕರಾಗಿ ಎಲ್ಲಕ್ಕಿಂತ ಹೆಚ್ಚಾಗಿ ಅತ್ಯಂತ ಸಮರ್ಥ ಮುಖ್ಯಮಂತ್ರಿಯಾಗಿ ಕಾರ್ಯನಿರ್ವಹಿಸಿದ್ದರೂ ಸಹ ಅಂಥ ಅವಮಾನಕರ ಸೋಲನುಭವಿಸಿದ್ದಾದರೂ ಏಕೆ ಎಂಬ ಪ್ರಶ್ನೆ ರಾಜಕೀಯ ವಲಯದಲ್ಲಿ ಕೋಲಾಹಲವನ್ನುಂಟು ಮಾಡಿತು. ಅರಸು ಅವರ ರಾಜಕೀಯ ಬದುಕಿನಲ್ಲಲಿ ನಡೆದ ಅತ್ಯಂತ ಆಘಾತಕಾರಿಯಾದ ಈ ಸಂದರ್ಭದಲ್ಲಿಯೂ ಅವರು ನಡೆದುಕೊಂಡ ರೀತಿ ಮಾತ್ರ ಎಲ್ಲರ ಮನಸ್ಸಿನಲ್ಲಿಯೂ ಬಹುಕಾಲ ಉಳಿಯುವಂಥದ್ದು. ಚುನಾವಣಾ ಫಲಿತಾಂಶ ಪ್ರಕಟವಾದ ಕೆಲವೇ ಗಂಟೆಗಳಲ್ಲಿ ತಮ್ಮ ಮುಖ್ಯಮಂತ್ರಿ ಸ್ಥಾನಕ್ಕೆ ಜನವರಿ ೭, ೧೯೮೦ರಂದು ರಾಜೀನಾಮೆ ನೀಡಿ ಪ್ರಜಾಪ್ರಭುತ್ವದಲ್ಲಿದ ತಮ್ಮ ನಂಬಿಕೆಯನ್ನು ಸಾಬೀತು ಪಡಿಸಿದರು. ಇಂಥ ದಯನೀಯ ಪರಿಸ್ಥಿತಿಯಲ್ಲಿಯೂ ಧೃತಿಗೆಡದ ಅರಸು ಕರ್ನಾಟಕದಲ್ಲಿ ಇಂದಿರಾ ಕಾಂಗ್ರೆಸ್ ವಿರುದ್ಧ ಒಂದು ಪರ್ಯಾಯ ಪಕ್ಷವನ್ನು ಹುಟ್ಟುಹಾಕಬೇಕೆಂಬ ಯೋಚನೆಯಲ್ಲಿ ತೊಡಗಿದರು. ಅಂತೆಯೇ ವಿರೋಧ ಪಕ್ಷಗಳು ಛಿದ್ರಛಿದ್ರವಾಗಿರುವುದನ್ನು ಗಮನಿಸಿ ವಿರೋಧ ಪಕ್ಷಗಳ ನಾಯಕರುಗಳಾದ, ಚರಣ್‌ಸಿಂಗ್, ಚಂದ್ರಶೇಖರ್, ಸಮಾಜವಾದಿನಾಯಕ ಜಾರ್ಜ್ ಫರ್ನಾಂಡೀಸ್, ರಾಮಕೃಷ್ಣಹೆಗಡೆ, ಎಸ್.ಆರ್. ಬೊಮ್ಮಾಯಿ ಅವರಂಥ ರಾಜಕೀಯ ಮುಖಂಡರನ್ನು ಒಂದುಗೂಡಿಸುವ ಪ್ರಯತ್ನದಲ್ಲಿ ತೊಡಗಿದರು. ಆದ್ದರಿಂದ ಅರಸು ಕರ್ನಾಟಕ ಮಟ್ಟದಲ್ಲಿ ಒಂದು ಪ್ರಾದೇಶಿಕ ಪಕ್ಷ ಕಟ್ಟುವ ಹಂಬಲಕ್ಕೆ ಮತ್ತಷ್ಟು ಚಾಲನೆ ನೀಡತೊಡಗಿದರು. ಇದರ ಪರಿಣಾಮವೇ 'ಕ್ರಾಂತಿರಂಗ ಪಕ್ಷ' ಸ್ಥಾಪನೆ ಮಾಡಿದರು. ರಾಜ್ಯದಲ್ಲಿ ತಮಗಿದ್ದ ಜನಬೆಂಬಲದಿಂದ ಕ್ರಾಂತಿರಂಗ ಪಕ್ಷವನ್ನು ಇಂದಿರಾಗಾಂಧಿ ಪಕ್ಷಕ್ಕೆ ಪರ್ಯಾಯ ಪಕ್ಷವಾಗಿ ಕಟ್ಟುವ ಭರವಸೆಯನ್ನು ಹೊಂದಿದ್ದರು. ಸದ್ಯಕ್ಕೆ ಪ್ರಾದೇಶಿಕ ಪಕ್ಷವಾದರೂ ಮುಂದೆ ಇದನ್ನು ಚರಣ್‌ಸಿಂಗ್ ಪಕ್ಷವಾದ ಲೋಕದಳದಲ್ಲಿ ವಿಲೀನಗೊಳಿಸುವ ಮೂಲಕ ರಾಷ್ಟ್ರಮಟ್ಟದಲ್ಲೂ ಒಂದು ಪರ್ಯಾಯ ಶಕ್ತಿಯನ್ನು ಹುಟ್ಟುಹಾಕುವ ಉದ್ದೇಶ ಅರಸು ಅವರದಾಗಿತ್ತು. ಆದರೆ ಈ ನಡುವೆ ಅರಸು ಅವರ ಆರೋಗ್ಯ ಕೆಟ್ಟಿತ್ತು. ಮುಖ್ಯಮಂತ್ರಿಯಾಗಿದ್ದಾಗಲೇ ಸರ್ಪಸುತ್ತು ಆಗಿ ತೀವ್ರ ಬಳಲಿದರು. ೧೯೮೦ರ ಚುನಾವಣೆಯಲ್ಲಿ ಆದ ತೀವ್ರ ಸೋಲಿನಿಂದ ಅವರಿಗೆ ಭಾರೀ ಮಾನಸಿಕ ಆಘಾತವಾಯಿತು. ಇದೇ ಸಂದರ್ಭದಲ್ಲಿ ಅರಸರ ಮಗಳು ನಾಗರತ್ನ ತೀರಿಕೊಂಡಳು. ಆ ಕಾರಣಕ್ಕಾಗಿಯೇ ಅರಸು ಅವರ ಉದ್ದೇಶ ಸಫಲವಾಗದೆ ಹೋಯಿತು.

**ಅರಸು ಸಮಾಜಮುಖಿ ಚಿಂತನೆಗಳು**

ಭಾರತದ ಇತಿಹಾಸದಲ್ಲಿ ಜಾತಿಯೊಂದಿಗೆ ಬಂಡಾಯವು ದೊಡ್ಡ ಪ್ರಮಾಣದಲ್ಲಿ ಬೆಳೆದಿದೆ. ಬುದ್ಧ, ಬಸವಣ್ಣ, ಗಾಂಧೀಜಿ ಮತ್ತು ಅಂಬೇಡ್ಕರ್, ಲೋಹಿಯಾ ಅವರಂಥ ನಾಯಕರು ಜಾತಿವ್ಯವಸ್ಥೆಯ ವಿರುದ್ಧ ಸಮರವನ್ನೇ ಸಾರಿದವರು. ಅಲ್ಲದೆ ಈ ನಾಯಕರು ಒಂದು ವ್ಯವಸ್ಥಿತವಾದ ಜಾತಿರಹಿತ ಸಮಾಜವನ್ನು ಕಟ್ಟಲು ಮುಂದಾದವರು. ಆದರೆ ಇಂದು ಸಮಾಜ ಅದೇ ಜಾತಿಯನ್ನೇ

ಬಂಡವಾಳವನ್ನಾಗಿ ಮಾಡಿಕೊಂಡು ಅದೇ ವ್ಯವಸ್ಥೆಯಲ್ಲಿ ಬಿದ್ದು ತೊಳಲಾಡುವ ಪರಿಸ್ಥಿತಿ ನಿರ್ಮಾಣವಾಗಿದೆ. ಇಂಥ ಪಾರಂಪರಿಕ ಸಾಮಾಜಿಕ ಮೌಢ್ಯತೆಯನ್ನು ಮತ್ತು ಜಡವಾದ ಸಾಮಾಜಿಕ ಅಸಮಾನತೆಯನ್ನು ತೊಡೆದುಹಾಕಲು ದೇವರಾಜ ಅರಸು ಕಂಕಣಬದ್ಧರಾದರು. ಅಲ್ಲದೆ ಆ ಮೂಲಲಕ ದಲಿತರ ಹಾಗೂ ತುಳಿತಕ್ಕೊಳಗಾದವರನ್ನು ಮೇಲೆತ್ತಲು ಕ್ರಾಂತಿಕಾರಕ ಬದಲಾವಣೆಯನ್ನು ಜಾರಿಗೆ ತಂದರು.

ಕರ್ನಾಟಕದಲ್ಲಿ ಹಿಂದುಳಿದ ವರ್ಗಗಳ ಚಳವಳಿಯು ಮೊದಲು ಮೈಸೂರು ಸಂಸ್ಥಾನದಲ್ಲಿ ಬ್ರಾಹ್ಮಣೇತರು ನಡೆಸಿದ ಚಳವಳಿಯೊಂದಿಗೆ ಆರಂಭಗೊಂಡಿತು. ಹೀಗಾಗಿ ಮೈಸೂರು ಸಂಸ್ಥಾನದ ನಾಲ್ವಡಿ ಕೃಷ್ಣರಾಜ ಒಡೆಯರು ೨೩.೦೮.೧೯೧೮ರಂದು ಲೆಸ್ಲಿಮಿಲ್ಲರ್ ನೇತೃತ್ವದಲ್ಲಿ 'ಮಿಲ್ಲರ್ ಸಮಿತಿ'ಯನ್ನು ನೇಮಿಸಿದರು. ಹೀಗಾಗಿ ಭಾರತದಲ್ಲೇ ಮೊದಲಬಾರಿಗೆ ದಲಿತ ಹಾಗೂ ಹಿಂದುಳಿವ ವರ್ಗಳಿಗೆ ಮೀಸಲಾತಿಯನ್ನು ಕಲ್ಪಿಸಿದ ಕೀರ್ತಿಗೆ ನಾಲ್ವಡಿ ಕೃಷ್ಣರಾಜ ಒಡೆಯರು ಭಾಜನರಾದರು. ಈ ವರ್ಗಗಳು ಹೆಚ್ಚಿನ ಸಂಖ್ಯೆಯಲ್ಲಿ ಸರಕಾರಿ ಉದ್ಯೋಗವನ್ನು ಪಡೆದುಕೊಳ್ಳುವ ನಿಟ್ಟಿನಲ್ಲಿ ಪ್ರೋತ್ಸಾಹಿಸಲು ಸರಕಾರ ಏನು ಕ್ರಮಕೈಗೊಳ್ಳಬೇಕು ಎಂಬುದರ ಬಗ್ಗೆ ಪರಿಶೀಲಿಸಿ ತನ್ನ ವರದಿಯನ್ನು ನೀಡುವಂತೆ ಈ ಸಮಿತೆಗೆ ಸೂಚಿಸಲಾಯಿತು. ಪರಿಣಾಮವಾಗಿ ದಲಿತ ಹಾಗೂ ಹಿಂದುಳಿದ ವರ್ಗಳಿಗೆ ಸ್ವಲ್ಪಮಟ್ಟಿಗೆ ಶೈಕ್ಷಣಿಕ ಹಾಗೂ ಸಾಮಾಜಿಕ ನ್ಯಾಯವನ್ನು ಪಡೆದುಕೊಳ್ಳಲು ಸಾಧ್ಯವಾಯಿತು.

(೩)

**ಹಾವನೂರ ಆಯೋಗದ ನೇಮಕ**

ದೇವರಾಜ ಅರಸು ಅಧಿಕಾರಕ್ಕೆ ಬಂದಮೇಲೆ ಈ ಸಾಮಾಜಿಕ(ಹಿಂದುಳಿದ ವರ್ಗಗಳ ಮತ್ತು ದಲಿತರ) ಚಳವಳಿಗೆ ಮತ್ತಷ್ಟು ಬಲ ಬಂದಿತು. ಸಾಮಾಜಿಕವಾಗಿ ಅಸಹಾಯಕರಂತೆ ಬದುಕಿದ್ದ ಬೆಸ್ತ, ಮಡಿವಾಳ, ಉಪ್ಪಾರ, ಕುಂಬಾರ, ಕಮ್ಮಾರ, ಅಲ್ಪಸಂಖ್ಯಾತ ಮತ್ತು ದಲಿತ ವರ್ಗಳಿಗೆ ಸೆಟೆದು ನಿಲ್ಲುವಂತೆ ಮಾಡುವುದರ ಜೊತೆಗೆ, ಎಲ್ಲರಂತೆ ತಾವು ಕೂಡ ಎಲ್ಲ ಅವಕಾಶಗಳಿಗೆ ಅರ್ಹರು ಎಂಬ ಜಾಗೃತಿಯನ್ನು ಮೂಡಿಸಿದ ಹೆಗ್ಗಳಿಕೆ ಅರಸು ಅವರದು. ೧೯೭೧ರ ವರೆಗೆ ಜಾತಿ ರಾಜಕಾರಣದ ಪ್ರಾಬಲ್ಯದಲ್ಲಿ ಯಾವ ಬದಲಾವಣೆಗಳೂ ಆಗಲಲಿಲ್ಲ. ಮುಖ್ಯವಾಗಿ ಬ್ರಾಹ್ಮಣ ಮತ್ತು ಲಿಂಗಾಯತರ ರಾಜಕಾರಣದ ಮೇಲಿನ ಹಿಡಿತ ಮಾತ್ರವಲ್ಲದೆ, ಆರ್ಥಿಕ ಕ್ಷೇತ್ರಗಳ ಮೇಲಿನ ಮೇಲ್ಜಾತಿಗಳ ಪ್ರಾಬಲ್ಯವನ್ನು ತೊಡೆದು ಹಾಕುವುದು ಅರಸು ಅವರ ಪ್ರಮುಖ ಉದ್ದೇಶವಾಗಿತ್ತು. ಹೀಗಾಗಿ ದೀನ-ದಲಿತರನ್ನು ಮತ್ತು ತುಳಿತಕ್ಕೊಳಗಾದವರನ್ನು ಮೇಲಕ್ಕೆತ್ತಬೇಕೆನ್ನುವ ಅವರಲ್ಲಿದ್ದ ದೃಢ ಸಂಕಲ್ಪವೇ ಇದಕ್ಕೆ ಕಾರಣ. ಅರಸು ಅಧಿಕಾರಕ್ಕೆ ಬಂದ ಹೊಸತರಲ್ಲೇ ಹಿಂದುಳಿದ ವರ್ಗಗಳನ್ನು ನಿರ್ಧರಿಸುವಲ್ಲಿ ಹೊಸ ಮಾನದಂಡಗಳ ಬಗ್ಗೆ ಸೂಚನೆ ನೀಡಿದರು. ಅದರಂತೆ ಹಿಂದುಳಿದ ವರ್ಗಗಳ ನಿರ್ಧರಿಸುವಿಕೆಗೆ ವಕೀಲರೂ, ರಾಜಕಾರಣಿಯೂ ಮತ್ತು ಹಿಂದುಳಿದ ವರ್ಗಕ್ಕೆ ಸೇರಿದವರೂ ಆದ ಎಲ್.ಜಿ. ಹಾವನೂರ ಅಧ್ಯಕ್ಷತೆಯಲ್ಲಿ ಆಯೋಗವನ್ನು ಆಗಸ್ಟ್ ೮, ೧೯೭೨ರಲ್ಲಿ ನೇಮಕ ಮಾಡಿದರು.

ಹಿಂದುಳಿದವರಿಂದಲೇ ವಂಚನೆಗೆ ಒಳಗಾದ ಇತರ ದುರ್ಬಲ ವರ್ಗದವರನ್ನು ರಾಜಕೀಯವಾಗಿ ಒಗ್ಗೂಡಿಸುವ, ತಮ್ಮ ಬೇಡಿಕೆಗಳನ್ನು ಈಡೇರಿಸಿಕೊಳ್ಳುವ ಇಚ್ಛಾಶಕ್ತಿಯನ್ನು ಅವರಲ್ಲಿ ತುಂಬುವ ತೀರಾ ಮಹತ್ವದ ಕಾರ್ಯವನ್ನು ದೇವರಾಜ ಅರಸು ಮಾಡಿದರೆನ್ನಲಡ್ಡಿಯಿಲ್ಲ. ಅದುವರೆವಿಗೂ ಇದ್ದ ಲಿಂಗಾಯಿತ ಹಾಗೂ ಒಕ್ಕಲಿಗರ ಪ್ರಾಬಲ್ಯವನ್ನು ಮುರಿಯುವುದು ಅವರ ಉದ್ದೇಶವಾಗಿತ್ತು. ಮುಖ್ಯವಾಗಿ ಸಮಾನತೆಯಲ್ಲಿ ನಂಬಿಕೆ ಇಟ್ಟಿದ್ದ ಅವರು ಸಮಾನತೆ ಬರಬೇಕೆಂದರೆ ಜಾತಿ-ವರ್ಗ ಸಂಪೂರ್ಣ ನಾಶವಾಗಬೇಕು ಎನ್ನುವ ನಿಲುವು ಅವರದು. ಸಮಾನತೆಗೆ ಪೂರಕವಾಗಿಯೇ ಸಮಾನರಲ್ಲದವರಿಗೆ ನೆರವು ನೀಡಿ, ಕೈಹಿಡಿದು ಮೇಲೆತ್ತಿದವರು. ತುಳಿತಕ್ಕೆ ಒಳಗಾದವರಿಗೆ ಬೇಕಾದುದು ಸಹಾನುಭೂತಿಯ ಅನುಕಂಪವಲ್ಲ, ಬದಲಾಗಿ ಸಮಾನತೆ ಮತ್ತು ಸಂಪತ್ತು. ಮನುಷ್ಯರೆಂಬ ಬಾವನಾತ್ಮಕ ತಿಳಿವು. ಅರಸು ಅವರು ಮೀಸಲಾತಿ ಜಾರಿಗೆ ತರುವ ಕಲ್ಪನೆಯ ಆಶಯವೂ ಇದೇ ಆಗಿತ್ತು.

ಇದರ ಜೊತೆಗೆ ೧೯೫೬ರಿಂದ ಜಾರಿಯಲ್ಲಿದ್ದ ಮೀಸಲಾತಿ ನೀತಿಯ ಪ್ರಯೋಜನ ಕೇವಲ ಪ್ರಬಲ ಜಾತಿಯವರಿಗೆ ಮಾತ್ರ ಲಭ್ಯವಾಗಿತ್ತು ಎನ್ನುವ ಭಾವನೆಯನ್ನು ಈ ಹಿಂದುಳಿದ ವರ್ಗಗಳಲ್ಲಿ ಬೆಳೆಸುವಲ್ಲಿಯೂ ಅವರು ಸಾಕಷ್ಟು ಯಶಸ್ವಿಯಾದರು.

೧೯೭೨ರ ಆಗಸ್ಟ್‌ನಲ್ಲಿ ಆದ ಆಯೋಗದ ರಚನೆ ಹಿಂದುಳಿದವರ ಕಲ್ಯಾಣಕ್ಕಾಗಿ ನಡೆದ ಮೊದಲ ಪ್ರಾಮಾಣಿಕ ಪ್ರಯತ್ನವೆಂಬ ಸಾರ್ವತ್ರಿಕ ಮನ್ನಣೆ ಪಡೆಯಿತು. ಈ ಆಯೋಗವು ಒಟ್ಟು ಏಳು ಜನ ಸದಸ್ಯರನ್ನೊಳಗೊಂಡಂತೆ ಎಲ್. ಜಿ. ಹಾವನೂರರ ಅಧ್ಯಕ್ಷತೆಯಲ್ಲಿ ಆಯೋಗವನ್ನು ನೇಮಿಸಲಾಯಿತು.

ಈ ಆಯೋಗಕ್ಕೆ ಪರಿಶಿಷ್ಟ ಜಾತಿ/ಪಂಗಡಗಳನ್ನು ಹೊರತುಪಡಿಸಿ ಸಾಮಾಜಿಕವಾಗಿ, ಶೈಕ್ಷಣಿಕವಾಗಿ ಹಿಂದುಳಿದಿರುವ ಮತ್ತು ಹಿಂದುಳಿದ ವರ್ಗಗಳನ್ನು ನಿರ್ಧರಿಸುವ ನಿರ್ಣಾಯಕ ಅಂಶಗಳ ಬಗೆಗೆ ಸಲಹೆ ನೀಡುವುದು; ಈ ವರ್ಗಗಳ ಬಗೆಗೆ ವಿವರವಾಗಿ ಅಧ್ಯಯನ ನಡೆಸಿ ಈ ವರ್ಗಗಳ ಉನ್ನತಿಗಾಗಿ ಸರಕಾರ ಕೈಗೊಳ್ಳಬೇಕಾದ ಕ್ರಮಗಳ ಬಗೆಗೆ ಶಿಫಾರಸ್ಸು ಮಾಡುವುದು; ಈ ವರ್ಗಗಳ ಪಟ್ಟಿಯನ್ನು ತಯಾರಿಸುವುದು; ಈ ವರ್ಗಗಳಿಗೆ ಕಲ್ಪಿಸಬೇಕಾದ ಮೀಸಲಾತಿ ಪ್ರಮಾಣದ ಬಗೆಗೆ ಸಲಹೆ ನೀಡುವುದು ಇತ್ಯಾದಿಯನ್ನು ಸೂಚಿಸಿ ಸರಕಾರ ಆದೇಶ ಹೊರಡಿಸಿತು. ಸರಕಾರ ಆದೇಶ ಹೊರಡಿಸಿದ ಬೆನ್ನಲ್ಲಿಯೇ ಈ ಆಯೋಗದ ಸದಸ್ಯರು ಮತ್ತು ಅಧ್ಯಕ್ಷರು ವರದಿಯ ಸಿದ್ಧತೆಗೆ ವ್ಯವಸ್ಥಿತವಾದ ಕಾರ್ಯ ಚಟುವಟಿಕೆಯಲ್ಲಿ ತೊಡಗಿದರು. ಒಟ್ಟು ಮೂರು ವರುಷಗಳ ಕಾಲಾವಧಿಯನ್ನು ತೆಗೆದುಕೊಂಡು ಸಿದ್ಧಪಡಿಸಿದ ವರದಿಯನ್ನು ಆಯೋಗ ಅಂತಿಮವಾಗಿ ೧೯೭೫ರ ನವೆಂಬರ್ ನಲ್ಲಿ ಸರಕಾರಕ್ಕೆ ಒಪ್ಪಿಸಿತು.

ಈ ಆಯೋಗವು ಹಿಂದುಳಿದ ವರ್ಗಗಳನ್ನು ಮೂರು ಗುಂಪುಗಳನ್ನಾಗಿ ವಿಂಗಡಿಸಿತು. ೧. ಹಿಂದುಳಿದ ಸಮುದಾಯಗಳು ೨. ಹಿಂದುಳಿದ ಜಾತಿಗಳು ೩. ಹಿಂದುಳಿದ ಬುಡಕಟ್ಟುಗಳು. ರಾಜ್ಯದ ಒಟ್ಟು ಜನಸಂಖ್ಯೆಯಲ್ಲಿ ಶೇ.೧೪ ರಷ್ಟು ಪರಿಶಿಷ್ಟಜಾತಿಗಳು ಮತ್ತು ಪರಿಶಿಷ್ಟ ಬುಡಕಟ್ಟುಗಳ ಜೊತೆಗೆ ಶೇ. ೪೪.೫೨ ರಷ್ಟು ಜನಸಂಖ್ಯೆಯನ್ನು "ಇತರ ಹಿಂದುಳಿದ ವರ್ಗಗಳು ಎಂದು ನಿರ್ಧರಿಸಿತು. ಭಾರತೀಯ ಸಂವಿಧಾನದ ವಿಧಿ ೧೫(೪) ಹಾಗೂ ೧೬(೪)ರ ಪ್ರಕಾರ ಸಮುದಾಯಗಳನ್ನು ಜಾತಿಗಳನ್ನು ಮತ್ತು ಬುಡಕಟ್ಟುಗಳನ್ನು ಹಿಂದುಳಿದ ಪಂಗಡಗಳೆಂದು ಪರಿಗಣಿಸಬೇಕು ಮತ್ತು ವಿದ್ಯಾಸಂಸ್ಥೆಗಳಲ್ಲಿ ಹಾಗೂ ಸರಕಾರಿ ಹುದ್ದೆಗಳಲ್ಲಿ (ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಬುಡಕಟ್ಟುಗಳನ್ನು ಬಿಟ್ಟು) ಶೇ.೩೨ ರಷ್ಟು ಮೀಸಲಾತಿಯನ್ನು ನೀಡಬೇಕೆಂದು ಶಿಫಾರಸ್ಸು ಮಾಡಿತು.

೧೯೭೭ ಫೆಬ್ರವರಿ ೨೨ರಂದು ರಾಜ್ಯ ಸರಕಾರ ಹಾವನೂರ ಆಯೋಗದ ಎಲ್ಲಾ ಶಿಫಾರಸ್ಸುಗಳನ್ನು ಮಾನ್ಯಮಾಡಿ ಈ ಸಂಬಂಧ ಆದೇಶ ಹೊರಡಿಸಿತು. ಆದರೆ ೧೯೭೯, ಮೇ ಮತ್ತು ಜೂನ್ ತಿಂಗಳಲ್ಲಿ ಕೆಲ ತಿದ್ದುಪಡಿ ಮಾಡಿ, ಆ ಪ್ರಕಾರ ಮುಸ್ಲಿಮರನ್ನು ಮತ್ತು ಪರಿಶಿಷ್ಟಜಾತಿ/ವರ್ಗಗಳಿಂದ ಮತಾಂತರಗೊಂಡ ಕ್ರೈಸ್ತರನ್ನು ಹಿಂದುಳಿದ ಜಾತಿಗಳ ಪಟ್ಟಿಯಲ್ಲಿ ಸೇರಿಸಿ, ಈ ಸಮುದಾಯಗಳ ಮೀಸಲಾತಿ ಪ್ರಮಾಣ ಶೇ.೧೬ರಿಂದ ೨೦ಕ್ಕೆ ಹೆಚ್ಚಿಸಿತು.

**ಭೂ ಸುಧಾರಣೆ ಕುರಿತ ಚಿಂತನೆ**

ಸ್ವಾತಂತ್ರ್ಯಾ ನಂತರದ ಕರ್ನಾಟಕದಲ್ಲಿ ಭೂ ಸುಧಾರಣಾ ಪ್ರಯತ್ನಗಳು ನಡೆದದ್ದು ಅರಸು ಅವರ ಕಾಲದ ಅವಧಿಯಲ್ಲಿ. ಅದರಲ್ಲೂ ಭೂ ಸುಧಾರಣೆ ಕಾನೂನಿಗೆ ಸಂಬಂಧಿಸಿದಂತೆ ಅವರ ವಿಚಾರಗಳು ತೀರಾ ಭಿನ್ನವಾಗಿದ್ದವು. ಈ ಹಿಂದೆ ಮೈಸೂರು ಸಂಸ್ಥಾನದಲ್ಲಿ ಕಮಿಷನರ್ ಆಳ್ವಿಕೆಯ ಕಾಲದಲ್ಲಿಯೇ ಮೊದಲಬಾರಿಗೆ ಭೂಸುಧಾರಣ ಕ್ರಮಗಳು ಜಾರಿಗೆ ಬಂದಿದ್ದವು. ಆದರೆ ಇವು ಪೂರಕ ಬೆಳವಣಿಗೆಗಳಾದವೇ ವಿನಃ ರೈತಾಪಿ ವರ್ಗದ ಹೊರೆಯನ್ನು ಹಗುರಗೊಳಿಸುವ ಪ್ರಯತ್ನಗಳಾಗಿರಲಿಲ್ಲ.

ರಾಷ್ಟ್ರಮಟ್ಟದಲ್ಲಿ ಐವತ್ತು ಮತ್ತು ಅರವತ್ತರ ದಶಕದಲ್ಲಿ ನೆಹರು ನೇತೃತ್ವದಲ್ಲಿ ಕಾಂಗ್ರೆಸ್ ಸರಕಾರ ಭೂಸುಧಾರಣೆಗಳ ಪರವಾಗಿ ಕೆಲವು ಕಾನೂನುಗಳನ್ನು ಅನುಮೋದಿಸಿತ್ತಾದರೂ ಅವುಗಳನ್ನು ಜಾರಿಗೊಳಿಸಲು ಕಾಂಗ್ರೆಸ್ ಸರಕಾರ ಅಧಿಕಾರದಲ್ಲಿದ್ದ ಯಾವ

ರಾಜ್ಯವೂ ಸಹ ಅಂಥ ಗಂಭೀರ ಪ್ರಯತ್ನ ನಡೆಸಿರಲಿಲ್ಲ. ಈ ಮಾತು ಕೂಡ ಎಪ್ಪತ್ತರ ದಶಕದ ಹಿಂದಿನ ಮೈಸೂರು ರಾಜ್ಯಕ್ಕೂ ಅನ್ವಯಿಸುತ್ತದೆ ಎಂದು ಬೇರೆ ಹೇಳಬೇಕಾಗಿಲ್ಲ. ಹೀಗಾಗಿ ಕಾಂಗ್ರೆಸ್ಸಿನ ಆರ್ಥಿಕ ನೀತಿಗೆ ಸಮಾಜವಾದಿ ನೆಲೆಯನ್ನೂ ದೊರಕಿಸಿಕೊಡಲು ನೆಹರು ಅವರು ಅವಿರತವಾಗಿ ಶ್ರಮಿಸಿದರೂ, ಭೂ ಸುಧಾರಣೆಗಳಿಂದ ಸಮಾಜವಾದಿ ಕ್ರಮಗಳನ್ನು ಜಾರಿಗೊಳಿಸಿಲ್ಲದಿರುವುದು ತಿಳಿದುಬರುತ್ತದೆ. ಕಾರಣ ಅಂದು ಕಾಂಗ್ರೆಸ್ ಪಕ್ಷದಲ್ಲಿ ಭೂಮಾಲೀಕರ ವರ್ಗವೇ ತನ್ನ ಪ್ರಾಬಲ್ಯತೆಯನ್ನು ಪಡೆದುಕೊಂಡಿತ್ತು ಎಂದು ಸ್ಪಷ್ಟವಾಗಿ ಹೇಳಬಹುದು. ಈ ವರ್ಗ ಭೂಸುಧಾರಣೆ ಕಾಯಿದೆ ಜಾರಿಗೆ ಎಂದೂ ಸಕಾರಾತ್ಮಕವಾಗಿ ಸಹಕರಿಸಲಿಲ್ಲ ಎಂದು ನಿಸ್ಸಂದೇಹವಾಗಿ ಹೇಳಬಹುದು.

ಕರ್ನಾಟಕದಲ್ಲಿ ಎಸ್. ನಿಜಲಿಂಗಪ್ಪನವರು ರಾಜ್ಯದ ಮುಖ್ಯಮಂತ್ರಿಯಾಗಿದ್ದಾಗ ೧೦.೦೬.೧೯೫೭ರಲ್ಲಿ ಬಿ.ಡಿ.ಜತ್ತಿಯವರ ನೇತೃತ್ವದಲ್ಲಿ ಭೂಸುಧಾರಣಾ ಕಮಿಟಿಯನ್ನು ರಚಿಸಲಾಯಿತು. ೧೦.೦೯.೧೯೫೭ರಲ್ಲಿ ಈ ಕಮಿಟಿ ತಾನು ಅಧ್ಯಯನ ನಡೆಸಿ ತಯಾರಿಸಿದ ಸಲಹೆಗಳನ್ನು ಸರಕಾರದ ಮುಂದೆ ಇಟ್ಟಿತು. ಈ ಸಮಿತಿ ಸಲಹೆಗಳ ಆಧಾರದ ಮೇಲೆ ಸರಕಾರದ ಬಿಲ್ಲೊಂದನ್ನು ರಚಿಸಿ ಶಾಸನಸಭೆಯ ಮುಂದಿಡಲು ತೀರ್ಮಾನಿಸಿತು. ಅಂತಿಮವಾಗಿ ೦೫.೦೩.೧೯೬೨ರಲ್ಲಿ ರಾಷ್ಟ್ರಪತಿಗಳ ಒಪ್ಪಿಗೆ ಪಡೆದು ಕರ್ನಾಟಕದಲ್ಲಿ ಭೂಸುಧಾರಣಾ ಶಾಸನವಾಯಿತು. ಹೀಗೆ ಭೂ ಸುಧಾರಣಾ ಕಾಯಿದೆ ಕುರಿತಂತೆ ಮಹತ್ವದ ಚರ್ಚೆಗಳು ರಾಜ್ಯ ಹಾಗೂ ರಾಷ್ಟ್ರಮಟ್ಟದಲ್ಲಿ ನಡೆದಿರುವುದು ತಿಳಿದುಬರುತ್ತದೆ.

ಸಮಾಜವು ಆರ್ಥಿಕ ರಚನೆಯ ಮೇಲೆ ನಿಂತಿದ್ದು ಅದರ ಮೇಲೆ ಸಾಮಾಜಿಕ ರಚನೆ ಆಗಿದೆ. ಅದರ ಮೇಲೆ ರಾಜಕೀಯ ವ್ಯವಸ್ಥೆ ನಿಂತಿದೆ. ಸಾಮಾಜಿಕ ಮಟ್ಟದಲ್ಲಿ ಸುಸ್ಥಿತಿಯಲ್ಲಿರುವವರು, ಆಸ್ತಿಯನ್ನು ಹೊಂದಿರುವವರು, ರಾಜಕೀಯ ವ್ಯವಸ್ಥೆಯನ್ನು ತಮ್ಮ ಹಿಡಿತದಲ್ಲಿರಿಸಿ ಕೊಂಡಿದ್ದಾರೆ. ಹೀಗಾಗಿ ದಲಿತರನ್ನು ಒಳಗೊಂಡಂತೆ ಎಲ್ಲಾ ಜಾತಿಯ ಭೂಮಾಲೀಕರನ್ನು ಬಂಡವಾಳಶಾಹಿಗಳು, ಬಂಡವಾಳಶಾಹಿ ಹಿತಾಸಕ್ತಿ ಕಾಪಾಡುವವರು ರಾಜಕೀಯ ಅಧಿಕಾರವನ್ನು ಹಿಡಿದುಕೊಂಡಿದ್ದರಿಂದ ಅರಸು ಅವರಿಗೆ ಭೂ ಸುಧಾರಣಾ ಕಾಯಿದೆಯನ್ನು ಜಾರಿಗೊಳಿಸುವಾಗ ಅನೇಕ ತೊಡಕುಗಳನ್ನು ಎದುರಿಸಬೇಕಾಯಿತು.

ಅದರಲ್ಲಿ ಐ.ಎ.ಎಸ್. ಅಧಿಕಾರಿಗಳು ಮತ್ತು ಜಮೀನುದಾರರ ವರ್ಗಗಳ ಒಳ ಜಗಳ ಈ ಕಾಯ್ದೆ ಅನುಷ್ಠಾನಗೊಳ್ಳುವಂತೆ ಹಲವಾರು ಸಮಸ್ಯೆಗಳನ್ನು ತಂದೊಡ್ಡಿದ್ದವು. ಬಹಳಷ್ಟು ಪುರೋಗಾಮಿ ಎನಿಸಿದ್ದ ಭೂ ಸುಧಾರಣಾ ಕಾಯಿದೆಯ ನಿಯಮಗಳನ್ನು ರಚಿಸುವಾಗಲಂತೂ ಐ.ಎ.ಎಸ್ ಅಧಿಕಾರಿಗಳ ವರ್ಗ ಹೆಜ್ಜೆ ಹೆಜ್ಜೆಗೂ ಕಾನೂನಿನ ತೊಡಕುಗಳನ್ನು ಮತ್ತು ಆತಂಕಗಳನ್ನು ತಂದೊಡ್ಡಿದರಂತೆ. ಈ ಕಾನೂನಿನ ಸೆಣಸಾಟದಲ್ಲಿ ಬೇಸತ್ತ ಅರಸು ಅವರು ಈ ಕಾಯಿದೆಯ ರಚನೆಯ ಪೂರ್ಣ ಹೊಣೆಯನ್ನು ಆಗಿನ ಕಾನೂನು ಇಲಾಖೆಯ ಕಾರ್ಯದರ್ಶಿಯಾಗಿದ್ದ ವೆಂಕಟೇಶ್ ಅವರಿಗೆ ವಹಿಸಿಕೊಟ್ಟಿದ್ದರು. ಈಗ ಅರಸು ಉಸಿರು ಗಟ್ಟಿರುವ ವಾತಾವರಣದಿಂದ ಸ್ವಲ್ಪ ಮಟ್ಟಿಗೆ ಹೊರಬಂದು ನಿರುಮ್ಮಳವಾಗಿ ಉಸಿರಾಡುವಂತಾಗಿದ್ದರು. ನಿಜಲಿಂಗಪ್ಪನವರ ಕಾಲದಿಂದಲೂ ನೆನೆಗುದ್ದಿಗೆ ಬಿದ್ದಿದ್ದ ಭೂ ಸುಧಾರಣಾ ಕಾಯಿದೆಗೆ ಎಪ್ಪತ್ತರ ದಶಕದಲ್ಲಿ ಅರಸು ಅವರು ನಿರಂತರ ಪ್ರಯತ್ನದಿಂದ ರಾಜ್ಯದಲ್ಲಿ ಲಕ್ಷಾಂತರ ಗೇಣಿದಾರರಿಗೆ ಭೂಮಿ ಮೇಲಿನ ಒಡೆತನ ದೊರಕಿಸಿಕೊಡುವಲ್ಲಿ ಯಶಸ್ವಿಯಾದರು ಎಂಬುದು ಅತ್ಯಂತ ಮಹತ್ವಪೂರ್ಣವಾದದ್ದು. ಜೊತೆಗೆ ಕೃಷಿಗೆ ಸಂಬಂಧಿಸಿದಂತೆ ಅದಕ್ಕೆ ಬೇಕಾದ ಸೇವಾಸೌಲಭ್ಯಗಳನ್ನು ದೊರಕಿಸಿಕೊಡುವಲ್ಲಿ ಅವರು ದಿಟ್ಟ ಹೆಜ್ಜೆ ಶ್ಲಾಘನೀಯವಾದದ್ದು. ಅಷ್ಟೇ ಅಲ್ಲದೆ ಕಾನೂನಿನ ಆಧಾರದ ಮೇಲೆ ಪ್ರತಿ ತಾಲ್ಲೂಕಿಗೊಂದರಂತೆ ಭೂನ್ಯಾಯ ಮಂಡಳಿಯನ್ನು ಸ್ಥಳೀಯ ಜನತಾ ಪ್ರತಿನಿಧಿಗಳ ಸಮೇತ ನೇಮಿಸಿದರು. ಇಂಥ ನ್ಯಾಯಾಲಯಗಳನ್ನು 'ಜನತಾ ನ್ಯಾಯಾಲಯ 'ಗಳೆಂದು ಕರೆದರು.

ಅರಸು ಅವರ ದೃಷ್ಟಿಯಲ್ಲಿ ಈ ಕೆಳಕಂಡ ಭೂಸುಧಾರಣೆಯ ಉದ್ದೇಶಗಳು ಬಹುಮುಖ್ಯವಾಗಿದ್ದವು:

೧. ಜಮೀನ್ದಾರಿ ಪದ್ಧತಿಯನ್ನು ಹೋಗಲಾಡಿಸುವುದು.
೨. ಜೀತಪದ್ಧತಿಯನ್ನು ನಿರ್ಮೂಲನೆ ಮಾಡುವ ಉದು.

೩. ಕೃಷಿ ಉತ್ಪಾದನೆಯನ್ನು ಹೆಚ್ಚಿಸುವುದು.

೪. ಭೂಮಿ ಇಲ್ಲದವರಿಗೆ ಭೂಮಿಯನ್ನು ಹಂಚುವುದು.

೫. ಬಂಡವಾಳಶಾಹಿತ್ವವನ್ನು ತಡೆಗಟ್ಟುವುದು.

೬. ಆರ್ಥಿಕ ಸಮಾನತೆಯನ್ನು ತರುವುದು.

೭. ಉದ್ಯೋಗಗಳ ಸೃಷ್ಟಿ ಮತ್ತು ನಿರುದ್ಯೋಗ ಸಮಸ್ಯೆಯನ್ನು ನಿವಾರಿಸುವುದು.

ಒಟ್ಟಿನಲ್ಲಿ ೧೯೯೫ರ ಭೂಸುಧಾರಣಾ ಮಾರ್ಪಾಟಿನಿಂದಾಗಿ, ಗೇಣಿ ಪದ್ಧತಿ ತನ್ನದೇ ಆದ ಹೊಸರೂಪದಲ್ಲಿ ಕಾಣಿಸಿಕೊಳ್ಳುತ್ತಿದೆ. ಅಲ್ಲದೆ 'ಸಾರ್ವಜನಿಕ ಹಿತಾಸಕ್ತಿ' ಎಂಬ ತಲೆಬರಹದಲ್ಲಿ ಭೂ ಒಡೆತನವನ್ನು ಮತ್ತೆ ಬಲಿಷ್ಠರಿಗೆ ಬಿಟ್ಟುಕೊಡಲಾಗುತ್ತಿದೆ.

೧೯೭೪ರಲ್ಲಿ ಅರಸು ಜಾರಿಗೆ ತಂದ ಭೂಸುಧಾರಣಾ ಶಾಸನ ಸಾಮಾಜಿಕ ವ್ಯವಸ್ಥೆಯನ್ನೇ ಒಮ್ಮೆ ಅಲುಗಾಡಿಸಿತು ಎಂದೇ ಹೇಳಬೇಕು. ಕೇವಲ ಭೂಮಾಲೀಕರ ಆಜ್ಞಾನುವರ್ತಿಗಳಾಗಿ ಯಜಮಾನ ಸಂಸ್ಕೃತಿಗೆ ತಲೆಬಾಗಿ ಬದುಕಿ ಬಂದಿದ್ದ ಗೇಣಿದಾರ ರೈತ ಜನರು ಸೆಟೆದು ನಿಂತು ಉಳುಮೆಯ ಭೂಮಿಯ ಒಡೆತನ ಪಡೆಯಲು ಇದೊಂದು ಅವಕಾಶವನ್ನು ಒದಗಿಸಿಕೊಟ್ಟಿತು. ಇದು ಕೇವಲ ಗೇಣಿದಾರರಿಗೆ ಸ್ವತಂತ್ರ ಬದುಕಿನ ಆಸರೆಯನ್ನು ಒದಗಿಸುವ ಆರ್ಥಿಕ ಕಾರ್ಯಕ್ರಮವಾಗಿರದೆ ಸಾಮಾಜಿಕ ಬಂಧನಗಳಿಂದಲೂ ಅವರನ್ನು ಬಿಡುಗಡೆಗೊಳಿಸಿದ ಸಾಮಾಜಿಕ ಕ್ರಾಂತಿಯೂ ಆಗಿತ್ತು. ಆದರೆ ಇದರಿಂದ ಅರಸು ಅವರು ಪ್ರತಿಷ್ಠಿತರ ಕೆಂಗಣ್ಣಿಗೆ ಗುರಿಯಾಗಬೇಕಾಯಿತು. ಏಕೆಂದರೆ ಭೂ ಒಡೆತನವನ್ನು ಕಳೆದುಕೊಂಡ ಸಾವಿರಾರು ಕುಟುಂಬಗಳು ಅರಸರನ್ನು ಮನಸಾರೆ ಶಪಿಸಿದರು. ಅಲ್ಲದೆ ರಾಜಕೀಯವಾಗಿ ಪ್ರಜ್ಞಾವಂತರಾದ ಈ ಜನರು ಅರಸು ವಿರುದ್ಧ ಪ್ರಚಾರದ ಸಮರವನ್ನೇ ಸಾರಿದರು. ಆದರೂ ಅರಸು ಕೈಗೊಂಡ ಈ ಕ್ರಮದಿಂದ ಗ್ರಾಮೀಣ ಪ್ರದೇಶದ ಕಡುಬಡವರಾದ ಕೃಷಿಕಾರ್ಮಿಕರಿಗೆ ಯಾವ ಅನುಕೂಲವೂ ಆಗಲಿಲ್ಲ ಎನ್ನುವ ಒಂದು ವಾದವಿದೆ. ಏಕೆಂದರೆ ಇದರಿಂದ ಹೆಚ್ಚು ಲಾಭ ಪಡೆದುಕೊಂಡವರು ರಾಜಕಾರಣಿಗಳ ಹಿಂಬಾಲಕರು ಮತ್ತು ಪ್ರತಿಷ್ಠಿತರ ಹಿಂಬಾಲಕರು. ಇದರಿಂದಾಗಿ ಹೆಚ್ಚುವರಿ ಭೂಮಿಯನ್ನು ಕೃಷಿಕಾರ್ಮಿಕರಿಗೆ ಹಂಚುವ ಕಾರ್ಯ ಯಶಸ್ವಿಯಾಗಲಿಲ್ಲ. ಏಕೆಂದರೆ ಮೊದಲನೆಯದಾಗಿ ಹೆಚ್ಚುವರಿ ಭೂಮಿ ಅಷ್ಟೇನೂ ಹೆಚ್ಚಾಗಿ ಇರಲಿಲ್ಲ. ಪ್ರಬಲ ಕೋಮುಗಳ ಭೂಮಾಲೀಕರು ಭೂಮಿತಿ ಶಾಸನ ರಚನೆಯಾಗುವುದೆಂಬುದರ ಸುಳಿವು ತಿಳಿದು ತಮ್ಮ ಸಂಬಂಧಿಗಳಿಗೆ ಭೂಮಿಯನ್ನು ಹಂಚುವುದರಲ್ಲೂ ವಿಳಂಬ ಮಾಡಿದರು. ಹೀಗಾಗಿ ಅರಸು ಕೈಗೊಂಡ ಈ ಭೂ ಸುಧಾರಣಾ ಯೋಜನೆಯು ಸಂಪೂರ್ಣವಾಗಿ ಸಫಲವಾಗದಿದ್ದರೂ ಸಾಮಾಜಿಕ ದುರ್ಬಲರ ಬದುಕಿಗೆ ಒಂದು ಸ್ವಂತಿಕೆಯ ನೆಲೆಯನ್ನು ಒದಗಿಸುವಲ್ಲಿ ಅವರು ತೆಗೆದುಕೊಂಡ ಈ ನಿಲುವು ಅತ್ಯಂತ ಕ್ರಾಂತಿಕಾರಕವಾದದ್ದು. ಈ ಹಿನ್ನೆಲೆಯಲ್ಲಿ ಅವರನ್ನು 'ಮೌನಕ್ರಾಂತಿಯ ಹರಿಕಾರ' ಎಂದು ಕರೆದಿದ್ದರಲ್ಲಿ ಅತಿಶಯೋಕ್ತಿಯೇನಲ್ಲ. ಹೀಗಾಗಿ ಭೂ ಸುಧಾರಣೆ ಎಂಬುವುದು ಐತಿಹಾಸಿಕ ಕ್ರಮವಾಗಿದೆ ಎನ್ನಬಹುದು.

**ಜಾತಿ ಪದ್ಧತಿ ಕುರಿತ ಚಿಂತನೆ**

ಮನುಷ್ಯನ ಹುಟ್ಟು ಆಕಸ್ಮಿಕ. ಹುಟ್ಟಿನಿಂದ ಯಾರೂ ಕೀಳಲ್ಲ, ಮೇಲೂ ಅಲ್ಲ. ನಿರ್ದಿಷ್ಟ ಜಾತಿಯಲ್ಲಿ ಹುಟ್ಟಿದ ಮಾತ್ರಕ್ಕೆ ಯಾರ ಬದುಕೂ ಬರಡಾಗಬಾರದು. ಸಾಮಾಜಿಕ ಅನಿಷ್ಟಗಳಿಂದುಂಟಾದ ಸಾಮಾಜಿಕ ಪಿಡುಗು ಜಾತಿ ಪದ್ಧತಿ. ಈ ಅಮಾನುಷ ಪದ್ಧತಿಯಿಂದಾಗಿ ದೇಶ ಹಾಗೂ ತುಳಿತಕ್ಕೊಳಗಾದ ವರ್ಗಗಳ ಅಭಿವೃದ್ಧಿಗೆ ತೊಡಕು ಉಂಟಾಗಿದೆ. ದೇಶದ ಮಹಾನ್ ನಾಯಕರಾದ ಮಹಾತ್ಮ ಗಾಂಧೀಜಿ, ಬಿ.ಆರ್. ಅಂಬೇಡ್ಕರ್, ಜ್ಯೋತಿಬಾಫುಲೆ, ಬಾಬು ಜಗಜೀವನ್‌ರಾಮ್, ಜಯಪ್ರಕಾಶ್ ನಾರಾಯಣ ಮತ್ತು ಲೋಹಿಯಾ ಅವರಂಥ ಸಮಾಜ ಸುಧಾರಕರು ಈ ಅಮಾನುಷ ಜಾತಿಪದ್ಧತಿ ನಿರ್ಮೂಲನೆಗಾಗಿ ಹಲವಾರು ಕ್ರಾಂತಿಕಾರಕ ಹೋರಾಟಗಳನ್ನು ಮಾಡಿರುವುದನ್ನು ಕಾಣುತ್ತೇವೆ. ಅದಕ್ಕಾಗಿಯೇ ಅದರಂತೆ ರಾಜ್ಯದಲ್ಲಿ ದೇವರಾಜ ಅರಸು ಅವರು ತುಳಿತಕ್ಕೊಳಗಾದವರನ್ನು ಮೇಲಕ್ಕೆತ್ತಬೇಕೆಂದರೆ ಜಾತಿ ಪದ್ಧತಿ ನಿರ್ಮೂಲನೆ ಆದಾಗ ಮಾತ್ರ ಸಾಧ್ಯ ಎಂಬುದನ್ನು ಅರಿತುಕೊಂಡು ಈ ನಿಟ್ಟಿನಲ್ಲಿ ಸರ್ವ ಪ್ರಯತ್ನಗಳನ್ನು ಕೈಗೊಂಡರು. ಯಾವುದೋ ಕಾಲದಲ್ಲಿ ಯಾವುದೋ ಒಂದು ಕಾರಣಕ್ಕೆ ಜನ ಒಡೆದು

ಗುಂಪಾಗಿ,; ಜಾತಿ ಮತ್ತು ಉಪಜಾತಿಗಳಾಗಿ ಹುಟ್ಟಿಕೊಂಡಿದ್ದು ಮನುಕುಲದ ದುರಂತವೆಂಬ ಭಾವನೆ ಅವರದಾಗಿತ್ತು. ದುಡಿಯುವ ಜನರನ್ನು ಶೂದ್ರರು ಅಸ್ಪೃಶ್ಯರು ಎಂದು ಪರಿಗಣಿಸಿ, ಯಾವ ಕೆಲಸವನ್ನು ಮಾಡದೆ ಮೈಬೆಳೆಸಿ ಕುಳಿತ ಮೈಗಳ್ಳರನಕ್ಕು ಶ್ರೇಷ್ಠರೆಂದು ಭಾವಿಸಿದ್ದ ಜಾತಿಪದ್ಧತಿಯ ನಿರ್ಮೂಲನೆ ಅಗತ್ಯವಾಗಿ ಆಗಬೇಕಾದದ್ದು ಮೊದಲನೆ ಕೆಲಸ ಎಂಬುದು ಅರಸರ ದೃಢವಾದ ನಂಬಿಕೆಯಾಗಿತ್ತು. ಅದಕ್ಕಾಗಿ ದೀನದಲಿತರಿಗೆ ರಾಜಕೀಯ ಶಕ್ತಿ, ಆರ್ಥಿಕ ಶಕ್ತಿ ಮತ್ತು ಸಾಮಾಜಿಕ ಗಣ್ಯತೆಯನ್ನು ಗಳಿಸಿಕೊಡುವ ಹಂಬಲ ಅವರದಾಗಿತ್ತು. ಆ ಮೂಲಕ ಈ ತಳಸಮುದಾಯ ವರ್ಗಗಳಿಗೆ ಸಾಮಾಜಿಕವಾಗಿ, ರಾಜಕೀಯವಾಗಿ ಮತ್ತು ಶೈಕ್ಷಣಿಕವಾಗಿ ಸಮಾನತೆಯನ್ನು ಕಲ್ಪಸಿಕೊಟ್ಟರು. ಅರಸು ಅವರು, ಸ್ವತಃ ತೀರ ಅಲ್ಪಸಂಖ್ಯಾತರಾಗಿರುವ ಬಹುತೇಕ ಜಾತಿಶ್ರೇಣಿಯ ಯಾಜಮಾನ್ಯವನ್ನು ಪ್ರತಿಷ್ಠಾಪಿಸುವುದೇ ಆಗಿದೆ. ನಮ್ಮ ದೇಶದ ಬಹುಪಾಲು ಎಲ್ಲ ರಾಜಕೀಯ ಪಕ್ಷಗಳು ಇಂದು ಜಾತಿಯನ್ನು ನಿರಾಕರಿಸಿ ತಮ್ಮ ಅಸ್ತಿತ್ವವನ್ನು ಉಳಿಸಿಕೊಳ್ಳಲಾರವು. ಅದಕ್ಕಾಗಿಯೇ ಇಂದು ರಾಜಕೀಯ ಪಕ್ಷಗಳು ಅತಿ ಹೆಚ್ಚು ಮತವಿರುವ ಕೋಮಿನ ನಾಯಕರನ್ನು ಚುನಾವಣೆಗೆ ಇಳಿಸುತ್ತವೆ. ಇದು ಜಾತಿಯ ಬೇರುಗಳು ಮತ್ತಷ್ಟು ಗಟ್ಟಿಗೊಳ್ಳಲು ಅವಕಾಶವನ್ನು ಒದಗಿಸಿದೆ. ಇಂಥ ಪ್ರಕ್ಷುಬ್ಧ ಸಂದರ್ಭದಲ್ಲಿ ಅಧಿಕಾರಕ್ಕೆ ಬಂದ ಅರಸು ಅವರು, "ಜಾತೀಯತೆಯನ್ನು ರಾಜಕೀಯ ಉದ್ದೇಶಗಳಿಗಾಗಿ ಕೆರಳಿಸುವ ಜನರಿಗೆ ಇದು ಸಲ್ಲದ ಮಾರ್ಗ. ಮಾನವ ಜಾತಿ ಎಂಬುದು ಒಂದೇ. ಮಾನವರೆಲ್ಲ ಬಂಧುಗಳು, ಮಾನವನ ಹಿತಸಾಧನೆಯೇ ತನ್ನ ಕರ್ತವ್ಯ ಎಂಬ ಭಾವನೆ ತಾಳಿ ಸೇವಾಭಾವನೆಯಿಂದ ದುಡಿಯುವವರು ಎಲ್ಲಾ ಜಾತಿಯ ಜನರಿಗೂ ಬಂಧುವಿನಂತೆ ಪ್ರಿಯವಾಗುವರು" ಎಂಬ ಸ್ಪಷ್ಟ ಸಂದೇಶವನ್ನು ಸಾರಿದವರು.

**ಜೀತ ಪದ್ಧತಿ ನಿಷೇದ ಕುರಿತ ಚಿಂತನೆ**

ಭಾರತೀಯ ಸಮಾಜಕ್ಕೆ ಅಂಟಿಕೊಂಡು ಬಂದಿದ್ದ ಅನೇಕ ಸಾಮಾಜಿಕ ಜಾಡ್ಯಗಳಲ್ಲಿ ಜೀತ ಪದ್ಧತಿ ಬಹಳ ನಿಕೃಷ್ಟವಾದುದು. ಅದು ಪ್ರಾಣಿಗಳಂತೆ ಮನುಷ್ಯರ ಮಾರಾಟದಲ್ಲಿ ರೂಪಗೊಂಡಿದ್ದ ಗುಲಾಮಗಿರಿ. ಜೀತಪದ್ಧತಿ ಸಮಾಜದ ಅತ್ಯಂತ ಕಳಾಹೀನವಾದ ಪದ್ಧತಿ. ಕಡುಬಡವರಾದ ಕೃಷಿಕಾರ್ಮಿಕರು ತಮ್ಮ ಹೊಟ್ಟೆಯನ್ನು ಹೊರೆದುಕೊಳ್ಳಲು ಮತ್ತು ಕುಟುಂಬವನ್ನು ಸಾಕಲು ತಮ್ಮೂರಿನ ಸಾಹುಕಾರರ ಮನೆಯಲ್ಲಿ ೧೦೦-೨೦೦ ರೂಪಾಯಿಗಳಷ್ಟು ಸಾಲಪಡೆದು ಅದನ್ನು ತೀರಿಸಲಾಗದೆಲ, ಅದೇ ಸಾಹುಕಾರರ ಮನೆಯಲ್ಲಿ ಜೀತಮಾಡಿಕೊಂಡು ಬದುಕನ್ನು ಸಾಗಿಸುತ್ತಿದ್ದರು. ಈ ಬಡಜನರು ತಮ್ಮ ಜೀವನದುದ್ದಕ್ಕೂ ಸಂದಾಯ ಮಾಡಲಾಗದ ಸಾಲವಿದು. ಈ ಸಾಲಕ್ಕೆ ಒತ್ತೆಯಾಳಾಗಿ ದುಡಿಯಬೇಕಾದ ಪರಿಸ್ಥಿತಿಯೂ ಉಂಟು. ಸಾಲದ್ದಕ್ಕೆ ಈ ಕೆಲಸಕ್ಕೆ ವೇತನವೆಂಬುದು ಇರುತ್ತಿರಲಿಲ್ಲ. ಸಾಲವನ್ನು ತೀರಿಸಲು ಜೀವನಪರ್ಯಂತ ಅವನು ಶ್ರೀಮಂತರ ಕೊಟ್ಟಿಗೆ ಮನೆಯಲ್ಲಿಯೇ ವಾಸಮಾಡಿ ಪುಕ್ಕಟೆಯಾಗಿ ದುಡಿಯುವುದೇ ಇವನ ಜೀವನದ ದಿನನಿತ್ಯದ ಕಾಯಕ. ಈ ಸಂದರ್ಭದಲ್ಲಿ ಶ್ರೀಮಂತರು ಹಾಕಿದ ಗಂಜಿಯನ್ನೋ, ಅನ್ನವನ್ನೋ ತಿಂದು ದುಡಿಯಬೇಕಾಗಿತ್ತು. ಒಂದು ವೇಳೆ ಜೀತದಾಳು ಸತ್ತರೆ ಅವನ ಮಕ್ಕಳಲ್ಲಿ ಒಬ್ಬನನ್ನು ಜೀತಕ್ಕೆ ತೆಗೆದುಕೊಳ್ಳುವ ಅಮಾನುಷ ಸಂಪ್ರದಾಯ ಈ ಪದ್ಧತಿಯಲ್ಲಿ ಅಡಕವಾಗಿತ್ತು. ಇಂತಹ ಒಂದು ಕ್ರೂರ ಸಂಪ್ರದಾಯಕ್ಕೆ ೧೯೭೫ರಲ್ಲಿ ದೇವರಾಜು ಅರಸು ಹಾಗೂ ಅವರ ಸಚಿವ ಸಂಪುಟವು ಈ ಪದ್ಧತಿಯ ನಿರ್ಮೂಲನೆಗೆ ಕೊನೆ ಹಾಡುವ ಒಂದು ರಚನಾತ್ಮಕ ಶಾಸನ ಜಾರಿಗೊಳಿಸಿದರು. 'ಸಾಮಾಜಿಕ ನ್ಯಾಯದ ಹರಿಕಾರ' ಎಂದು ಹೆಸರು ಪಡೆದ ಅವರು ಜಾರಿಗೊಳಿಸಿದ ಕಾಯ್ದೆಗಳಲ್ಲಿ ಈ ಜೀತಪದ್ಧತಿ ನಿರ್ಮೂಲನಾ ಕಾಯ್ದೆ ಅತ್ಯಂತ ಮಹತ್ವದ್ದು. ಈ ಹಿಂದೆ ಎಸ್.ನಿಜಲಿಂಗಪ್ಪ ಸಚಿವ ಸಂಪುಟದಲ್ಲಿ ಕಾರ್ಮಿಕ ಸಚಿವರಾಗಿದ್ದಾಗ ಕಾರ್ಮಿಕರ ಕಷ್ಟಕೋಟಲೆಗಳನ್ನು ಕಣ್ಣಾರೆ ಕಂಡಿದ್ದ ಅರಸು ಅವರು ಈ ಕಾರ್ಮಿಕ ಅಭಿವೃದ್ಧಿ ಮತ್ತು ಜೀತಗಾರರ ಬದುಕಿಗೆ ಒಂದು ಹೊಸ ಆಯಾಮ ನೀಡುವ ಸಂಕಲ್ಪವನ್ನು ಆಗಲೇ ಮಾಡಿದ್ದರೆಂದು ಕಾಣುತ್ತದೆ. ಆದ್ದರಿಂದ ೧೯೭೫ರಲ್ಲಿ ಈ ಜೀತಪದ್ಧತಿ ನಿಷೇಧ ಕಾನೂನು ಜಾರಿಗೆ ತಂದ ಅರಸು, ಭೂಮಾಲೀಕರಲ್ಲಿ ಜೀತದಾಳುಗಳಾಗಿ ದುಡಿಯುತ್ತಿದ್ದ ಸಾವಿರಾರು ನತದೃಷ್ಟರ ಬಾಳಿಗೆ ಬೆಳಕು ತೋರಿದರು. ಅಲ್ಲದೆ ಅವರು ಹೊಸ ಬದುಕನ್ನು ರೂಪಿಸಿಕೊಳ್ಳಲು ರಚನಾತ್ಮಕ ಯೋಜನೆಗಳನ್ನು ಅನುಷ್ಠಾನಕ್ಕೆ ತಂದರು. ಇದರಿಂದಾಗಿ ಸುಮಾರು ಅರವತ್ತೈದು ಸಾವಿರ ಜೀತದಾರರು ಈ ಜೀತದಿಂದ ವಿಮುಕ್ತಿಯನ್ನು ಪಡೆದರು. ಇಂತಹ ಪದ್ಧತಿಯನ್ನು ಬೇರುಸಮೇತ ತೆಗೆದು ಹಾಕಲು ಜಿಲ್ಲಾ ಮತ್ತು ಉಪವಿಭಾಗ ಮಟ್ಟದಲ್ಲಿ ಜಾಗೃತಿ ಸಮಿತಿಗಳನ್ನು ರಚಿಸಿ, ಜೀತಪದ್ಧತಿಯ ನಿರ್ಮೂಲನೆ ಕಾರ್ಯದ ಮೇಲ್ವಿಚಾರಣೆಯನ್ನು ನೋಡಿಕೊಳ್ಳುವುದು ಹಾಗೂ ಜೀತದಾಳುಗಳನ್ನು ಗುರುತಿಸಿ ಅಂತಹ ಜೀತದಾಳುಗಳಿಗೆ ಪರ್ಯಾಯ

ಉದ್ಯೋಗಳನ್ನು ಒದಗಿಸುವುದಕ್ಕೆ ಸರಕಾರ ಕ್ರಮಗಳನ್ನು ಕೈಗೊಂಡಿತು. ಜೊತೆಗೆ ಜೀತದಾಳುಗಳಿಗೆ ಕನಿಷ್ಟ ವೇತನಗಳನ್ನು ನೀಡಲೂ ಸಹ ಸರಕಾರ ಯೋಚಿಸಿತ್ತು. ೧೯೭೯-೭೭ರ ಸಂದರ್ಭದಲ್ಲಿ ಬೆಂಗಳೂರಿನ ಸುತ್ತಮುತ್ತ ಕೆಲ ಪ್ರದೇಶಗಳಲ್ಲಿ ನಡೆಯುತ್ತಿದ್ದ ಜೀತಪದ್ಧತಿಯು ಜೀವಂತವಾಗಿರುವ ಸುದ್ದಿ ಪತ್ರಿಕೆಗಳಲ್ಲಿ ನೋಡಿದ ತಕ್ಷಣವೇ ಮುಖ್ಯಮಂತ್ರಿ ಅರಸು ಆ ಭಾಗಕ್ಕೆ ಖುದ್ದಾಗಿ ಭೇಟಿ ನೀಡಿ ಆ ಪದ್ಧತಿಯನ್ನು ನಡೆಸಿಕೊಂಡು ಬರುತ್ತಿದ್ದ ವ್ಯಕ್ತಿಗಳನ್ನು ಅಪರಾಧಿಗಳೆಂದು ಪರಿಗಣಿಸಿ ಕಾನೂನಿನ್ವಯ ಶಿಕ್ಷಿಸಿದರು. ಹೀಗೆ ಜೀತಪದ್ಧತಿಯನ್ನು ಸಮಾಜದಿಂದ ಬೇರುಸಮೇತ ಕಿತ್ತುಹಾಕಬೇಕೆಂದು ಅವರು ದೃಢವಾದ ನಿಲುವುಗಳನ್ನು ತಾಳಿದರೂ, ಇಂದು ಸಂಪೂರ್ಣವಾಗಿ ಈ ಅಮಾನುಷ ನೀಚಪದ್ಧತಿಯು ಇನ್ನೂ ಸಮಾಜದಿಂದ ಕಣ್ಮರೆಯಾಗಿಲ್ಲದಿರುವುದು ಬೇಸರದ ಸಂಗತಿ.

**ಋಣ ಪರಿಹಾರ ಕಾಯ್ದೆ ಕುರಿತ ಚಿಂತನೆ**

ದೀನ-ದಲಿತರ ಬಂಧ ವಿಮೋಚನೆಯ ವಿಷಯದಲ್ಲಿ ಅರಸು ಯಾವಾಗಲೂ ವಿರಮಿಸಲಿಲ್ಲ. ಸದಾ ದೀನ-ದಲಿತರ ಬಗೆಗೆ ಚಿಂತನಾಶೀಲರಾಗಿರುತ್ತಿದ್ದ ಅವರಿಗೆ, ಬೆವರು ಸುರಿಸಿ ದುಡಿಯುವ ಜನಕ್ಕೆ ಈ ಕಾನೂನುಗಳಿಂದ ಹೊಟ್ಟೆ ತುಂಬದು ಎನ್ನುವ ವಿಚಾರ ಆಗ ಹೊಳೆದಿರಬೇಕು. ಹೀಗಾಗಿ ಭೂರಹಿತ ಕೃಷಿ ಕಾರ್ಮಿಕರಿಗೆ, ಸಣ್ಣ ಹಿಡುವಳಿದಾರರಿಗೆ ಸಾಲಸೌಲಭ್ಯ ಶೀಘ್ರಗತಿಯಲ್ಲಿ ದೊರಕುವಂತೆ ಮಾಡಿದರು. ಕಮ್ಮಾರ, ಕುಂಬಾರ, ಅಗಸ, ಉಪ್ಪಾರ ಮತ್ತಿತರ ಕಸಬುದಾರ ಕುಟುಂಬಗಳು ಹಾಗೂ ಸಾಲಶೂಲದಲ್ಲಿ ಮುಳುಗಿದ ನಿರ್ಗತಿಕ ಕುಟುಂಬಗಳು ಬಿಕ್ಕಟ್ಟಿನ ಪರಿಸ್ಥಿತಿಯಲ್ಲಿ ಸಿಲುಕಿವೆ ಎಂಬ ಅರಿವೂ ಅವರಿಗಿತ್ತು. ಇಂತಹ ಬಡಜನರು ತಮ್ಮ ಬದುಕಿನ ಬಂಡಿಯನ್ನು ಸಾಗಿಸಲು ಊರಿನ ಶ್ರೀಮಂತರಿಂದ ಸಾಲ ಪಡೆದು ಇದ್ದ ಬದ್ದದ್ದನ್ನೆಲ್ಲ ಅಡವು ಇಡುತ್ತಿದ್ದರು. ತುಂಡು ಜಮೀನು ಇದ್ದರೂ ಸಹ, ಅದನ್ನು ಒತ್ತೆಯಿಡುತ್ತಿದ್ದರು. ಹೀಗೆ ಶ್ರೀಮಂತರ ಹಂಗಿನಲ್ಲಿ ಬದುಕಿಬಂದಿರುವ ಬಡಜನರ ಸಾಲದ ಹೊರೆಯನ್ನು ಒಂದೇ ಬಾರಿಗೆ ಇಳಿಸುವ ನಿರ್ಧಾರಕ್ಕೆ ಅರಸು ಬಂದರು. ಪರಿಣಾಮವಾಗಿ, ಬಡಜನರು ಶ್ರೀಮಂತರಿಂದ ಪಡೆದಿದ್ದ ಎಲ್ಲಾ ಸಾಲವನ್ನು ಮನ್ನಾಮಾಡುವ ಶಾಸನವನ್ನು ೧೯೭೫ರಲ್ಲಿ ಜಾರಿಗೆ ತಂದರು. ಇದನ್ನು 'ಋಣಪರಿಹಾರ' ಕಾಯಿದೆ ಎಂದು ಕರೆದರು. ಇದರಿಂದ ರಾಜ್ಯದ ಲಕ್ಷಾಂತರ ಜನರ ಕಣ್ಣೀರು ಒರೆಸಿದ ಶ್ರೇಯಸ್ಸು ದೇವರಾಜ ಅರಸು ಅವರದಾಯಿತು.

**ಅಸ್ಪೃಶ್ಯತೆ ನಿವಾರಣೆ ಚಿಂತನೆ**

ಅಸ್ಪೃಶ್ಯತೆಯು ಹಿಂದೂ ಸಮಾಜದ ವರ್ಣವ್ಯವಸ್ಥೆಯಲ್ಲಿನ ಒಂದು 'ಅನಿಷ್ಟ ಕೂಸು'. ಒಂದೇ ಸಮಾಜದ ಒಂದು ಜಾತಿಯು ಇನ್ನೊಂದು ಜಾತಿಯ ಮೇಲೆ ನಡೆಸಿಕೊಂಡು ಬಂದ ಸಾಮಾಜಿಕ ಅಸಹನೆ. ಅಸ್ಪೃಶ್ಯತೆ ಎಂದರೆ ಹೊಲೆ ಮೈಲಿಗೆ, ಕಳಂಕ ಎಂದರ್ಥ. ಹಿಂದು ಸಮಾಜದ ಅತ್ಯಂತ ಕೆಳಸ್ತರದವರು ಜೀವನವಿಡೀ ಅನುಭವಿಸಬೇಕಾದ ಶಿಕ್ಷೆ. ಒಂದು ಕಾಲಕ್ಕೆ ಸಾಮಾಜಿಕ ವ್ಯವಸ್ಥೆ ಎನಿಸಿಕೊಂಡಿದ್ದ ವ್ಯವಸ್ಥೇ ಇಂದು ಕೊಳತು ನಾರುತ್ತಿರುವ ದುರ್ಗಂಧ, ನಿಂತ ನೀರು. ಆದರೆ ಹುಟ್ಟಿನಿಂದಲೇ ಅಂಟಿಕೊಂಡು ಬಂದ ಈ ಜಾತಿ, ಬ್ರಾಹ್ಮಣರನ್ನು ಬ್ರಾಹ್ಮಕಣರನ್ನಾಗಿಸಿದರೆ, ಹರಿಜನರನ್ನು ಹುಟ್ಟಿನಿಂದಲೇ ಹರಿಜನರೆಂದು ದೂರವಿಡುತ್ತದೆ. ವಿಶ್ವ ಇತಿಹಾಸದಲ್ಲಿ ಈ ಕ್ರೌರ್ಯಕ್ಕೆ, ಅಸಹನೆಗೆ, ಅಸಹ್ಯ ಪದ್ಧತಿಗೆ ಸಮಾನವಾದದ್ದು ಯಾವುದೂ ಇಲ್ಲ. ಸರಕಾಧರ ಅಸ್ಪೃಶ್ಯತೆ ನಿವಾರಣೆ ಕುರಿತು ಕಾಯಿದೆ ಜಾರಿಗೆ ತಂದಿದ್ದರೂ, ಅದು, ಇಂದು ಅಲ್ಲಲ್ಲಿ ಕಂಡುಬರುತ್ತಿರುವುದು ಒಂದು ವಿಷಾದನೀಯ ಸಂಗತಿ. ಹಿಂದೂಗಳಲ್ಲದವರು ಶುಚಿ-ಅಶುಚಿಯನ್ನು ಮೈಲಿಗೆಯಾದರೆ ಅಂತಹವರನ್ನು ಶುದ್ಧೀಕರಣಗೊಳಿಸಲು ಸಾಧ್ಯ ಎಂಬುದು ಆ ಸಮಾಜಗಳ ನಿಲುವು. ಅಲ್ಲದೇ ಈ ಮೈಲಿಗೆ ತಾತ್ಕಾಲಿಕ. ಆದರೆ ಹಿಂದೂಗಳಲ್ಲಿ ಒಮ್ಮೆ ಅಶುದ್ಧನಾದವನು ಎಂದಿಗೂ ಶುದ್ಧಿಗೊಳ್ಳಲಾರ. ಅದಕ್ಕಾಗಿಯೇ 'ಊರಿಗೊಂದು ಹೊಲಗೇರಿ' ಎಂಬ ಮಾತನ್ನು ಆಡಿ, ಅಸ್ಪೃಶ್ಯರನ್ನು ಇತರ ಜನರು ವಾಸಿಸುವ ಜಾಗಗಳಿಂದ ದೂರ ಇಟ್ಟರು. ಡಾ.ಬಿ.ಆರ್. ಅಂಬೇಡ್ಕರ್ ಹೇಳುವಂತೆ "ಇಂಥ ಹಟ್ಟಿಗಳು ಮುಳ್ಳುಬೇಲಿಗಳಲ್ಲಿನ ಸೆರೆಮನೆ" ಇದ್ದಂತೆ. ಅರಸು ಅವರು ರಾಜ್ಯದಲ್ಲಿ ಹರಿಜನರಿಗೆ ಶೇ.೧ಲರಷ್ಟು ಸರಕಾರಿ ಹುದ್ದೆಗಳನ್ನು ಮೀಸಲಿಟ್ಟರು. ಪರಂಪರಾನುಗತವಾಗಿ ತಮ್ಮದೇ ಆಗಿದ್ದ ಸ್ಥಾನಮಾನಗಳೆಲ್ಲ ಹಂಚಿಹೋಗುವ ಭೀತಿ ಮೇಲ್ವರ್ಗಗಳಿಗೆ ಶುರುವಾಯಿತು. ಸರ್ಕಾರಿ ಸವಲತ್ತುಗಳಲ್ಲಿಯೂ ಸಿಂಹಪಾಲನ್ನು ಪಟ್ಟಭದ್ರ ವಿದ್ಯಾವಂತ ಪ್ರಬಲ ಕೋಮುಗಳು ಪಡೆದಿದ್ದವು. ಸುಲಿಗೆ, ಶೋಷಣೆಯ ಕಾಲಚಕ್ರಕ್ಕೆ ಸಿಕ್ಕಿ ನುಚ್ಚುನೂರಾದವರು ಎಲ್ಲಾ

ಕೋಮಿನ ಬಡವರು, ದಲಿತರು. ಈ ವಂಚಿತರ ಬಾಳು ಅಂಬಿಗನಿಲ್ಲದ ದೋಣಿ. ಈ ದೋಣಿಗೆ ಚಾಲನೆ ದೊರಕಿಸಿ ಕೊಟ್ಟವರು ದೇವರಾಜ ಅರಸು. ಅವರ ಆಡಳಿತಕ್ಕೆ ಮುಂಚೆ ಸರ್ಕಾರಿ ಸ್ಥಾನ-ಮಾನಗಳನ್ನೆಲ್ಲ ಕಬಳಿಸಿದ್ದ ಬ್ರಾಹ್ಮಣ, ಲಿಂಗಾಯತ, ಒಕ್ಕಲಿಗ ಜಾತಿಯನ್ನುಳಿದು ಸಮಾಜದಲ್ಲಿ ಉಳಿದ ಜಾತಿಯವರೂ ಇದ್ದರೆಂಬುದು ಬೆಳಕಿಗೆ ಬಂದಿರಲಿಲ್ಲ. ಅರಸು ಅವರ ಕಾಲದಲ್ಲಿ ಈ ಮುಂದುವರಿದ ಮೇಲ್ಜಾತಿಗಳನ್ನು ಬಿಟ್ಟು ಉಳಿದ ಅಲ್ಪಸಂಖ್ಯಾತ ಹಿಂದುಳಿದ ವರ್ಗಗಳ ಜಾತಿಯ ಜನರಗೆ ಶೇ.೫೦ರಷ್ಟು ಮೀಸಲು ವ್ಯವಸ್ಥೆಯನ್ನು ಜಾರಿಗೆ ತಂದರು.

**ಮಲಹೊರುವ ಅನಿಷ್ಠತೆಯ ವಿರೋಧಿ ನಿಲುವು**

ಭಾರತೀಯ ಸಾಮಾಜಿಕ ಜೀವನದಲ್ಲಿ, ಅದರಲ್ಲೂ ಹಿಂದೂ ಸಾಮಾಜಿಕ ಜೀವನದಲ್ಲಿ ಅಸ್ಪೃಶ್ಯತೆ ಬಹಳ ಹಿಂದಿನಿಂದಲೂ ಅಂಟಿಕೊಂಡೇ ಬೆಳೆದುಬಂದ ಒಂದು ಅಮಾನವೀಯ ಪದ್ಧತಿ. ಒಂದು ಸಮಾಜ ತನ್ನವರೇ ಆದ ಒಂದು ಭಾಗದ ಜನತೆಯನ್ನು ಅಸ್ಪೃಶ್ಯರೆಂದು ಘೋಷಿಸಿ, ಅವರ ನಾಗರಿಕ ಹಕ್ಕುಗಳನ್ನು ಕಸಿದುಕೊಂಡು ಜೀವಂತ ಸಲಿಕರಣೆಗಳಂತೆ ದುಡಿಸಿಕೊಂಡು ಬರುತ್ತಿರುವುದು ಒಂದು ಅಮಾನವೀಯ ಕ್ರಮ. ಈ ಅಸ್ಪೃಶ್ಯರಿಗೆ ಪರಂಪರಾನುಗತವಾಗಿ ಬಂದ ಕಾಯಕ ಎಂದರೆ "ಹೊಲಸಿರುವ ಸ್ಥಳವನ್ನು ಶುಚಿಗೊಳಿಸುವುದು. ಮತ್ತು ಮೇಲ್ಜಾತಿಯ ಜನರ ಮಲವನ್ನು ತಲೆ ಹೊರೆಯಾಗಿ ಸಾಗಿಸುವುದು". ಸಮಾಜದ ಉತ್ತಮ ಜನಾಂಗ ಈ ಅಮಾನುಷ ಕಾರ್ಯವನ್ನು ದಲಿತರು ಮಾಡಲೇಬೇಕಾದ ಕರ್ತವ್ಯ ಎಂದು ಬಗೆದಿತ್ತು. ಜಗತ್ತಿನ ಯಾವ ನಾಗರಿಕ ಸಮಾಜದಲ್ಲಿಯೂ ಆಚರಣೆಯಲ್ಲಿಲ್ಲದ ಈ ಮಲಹೊರುವ ಪದ್ಧತಿಗೆ ಧಾರ್ಮಿಕ ಆಚರಣೆಯ ಕವಚವನ್ನು ಹೊದಿಸಲಾಗಿತ್ತು. ಇಲ್ಲಿ ಪುರೋಹಿತಶಾಹಿವರ್ಗ ಮತ್ತು ಬಂಡವಾಳಶಾಹಿ ವರ್ಗಗಳು ದಲಿತವರ್ಗಗಳ ಮೇಲೆ ಸಾಕಷ್ಟು ಒತ್ತಡವನ್ನು ಹೇರಿದ್ದರು ಎನ್ನುವುದನ್ನು ಯಾರೂ ಅಲ್ಲಗಳೆಯುವಂತಿಲ್ಲ. ಅಂಬೇಡ್ಕರ್, ಗಾಂಧೀಜಿ, ಬಾಬು ಜಗಜೀವನ್‌ರಾಮ್ ಅವರಂತ ಮಹಾನ್ ಚಿಂತಕರು ಸಾಮಾಜಿಕ ನ್ಯಾಯಕ್ಕಾಗಿ ಹೋರಾಡಿದ್ದರೂ ರಾಜ್ಯದಲ್ಲಿ ಈ ಕ್ರೂರ ಪದ್ಧತಿ ಇನ್ನೂ ಮಾಯವಾಗಿರಲಿಲ್ಲ. ಇದು ನಿಷೇಧಿಸಲೇಬೇಕಾದ ಅನಿಷ್ಟ ಪದ್ಧತಿಯೆಂದು ಅಂದು ಯಾವ ರಾಜಕೀಯ ನಾಯಕರು ಚಿಂತಿಸಿರಲಿಲ್ಲ. ಆದರೆ ಕೃತಿಯಲ್ಲಿ ಇಂತಹ ಅನಿಷ್ಟ ಪದ್ಧತಿಯನ್ನು ನಿಷೇಧಿಸಿ, ೧೯೭೭ರಲ್ಲಿ ಶಾಸನ ಜಾರಿಗೆ ತಂದ ಶ್ರೇಯಸ್ಸು ಅರಸು ಮತ್ತು ಅವರ ಸಂಪುತದ್ದು. ಇದು ಅರಸು ಜಾರಿಗೊಳಿಸಿದ ಕಾಯ್ದೆಗಳಲ್ಲೇ ಅತ್ಯಂತ ದೂರಗಾಮಿ ಪರಿಣಾಮ ಬೀರಬಲ್ಲ ಕಾಯ್ದೆಯಾಗಿದೆ.

ಬಹುಶಃ ಅರಸು ಅವರ ಆಡಳಿತದ ಅವಧಿಯಲ್ಲೇ 'ತಲೆಯ ಮೇಲೆ ಮಲ ಹೊರುವ ಪದ್ಧತಿ' ಬಹುಪಾಲು ಕೊನೆಗೊಂಡಿತು. ಹಾಗೂ ಅಂಥವರನ್ನು 'ಪೌರಕಾರ್ಮಿಕ'ರನ್ನಾಗಿ ಸರಕಾರ ಖಾಯಂ ಆಗಿ ನೇಮಿಸಿಕೊಂಡಿತು..ಇದೊಂದು ಕ್ರಾಂತಿಕಾರಕ ಸಾಧನೆಯಾಗಿದೆ. ಹೀಗಾಗಿ ಕರ್ನಾಟಕದಲ್ಲಿ ಅರಸು ಆರಂಭಿಸಿದ ಸಾಮಾಜಿಕ ಪರಿವರ್ತನೆಯ ವಾತಾವರಣದಲ್ಲಿ ಈ ವಿಚಾರ ಕುರಿತು ಚಿಂತನೆ ಚಿಗುರೊಡೆಯಿತು. ಅರಸು ಸಂಪುಟದಲ್ಲಿ ಪೌರಾಡಳಿತ ಸಚಿವರಾಗಿದ್ದ ಬಿ.ಬಸವಲಿಂಗಪ್ಪನವರು ಈ ಪದ್ಧತಿಯ ಉಚ್ಚಾಟನೆಗೆ ದೃಢಸಂಕಲ್ಪ ಮಾಡಿದ್ದರು ಮತ್ತು ಅರಸು ಅವರಿಗೆ ಈ ನಿಟ್ಟಿನಲ್ಲಿ ಸಂಪೂರ್ಣ ಬೆಂಬಲವನ್ನೂ ನೀಡಿದರು.

**(೪)**

**ಬಡತನ ನಿರ್ಮೂಲನೆ ಚಿಂತನೆ**

'ಆರ್ಥಿಕ ಸಂಪತ್ತು ಮತ್ತು ಬೌದ್ಧಿಕ ಕೌಶಲ್ಯಗಳು' ಕೆಲವೇ ವರ್ಗದ ಜನರಿಗೆ ಮೀಸಲಾಗಿರುವುದರಿಂದ ಉಳಿದ ಹಿಂದುಳಿದ ವರ್ಗಗಳು ಮತ್ತು ದಲಿತರು ಈ ದೇಶದಲ್ಲಿ ನಿರ್ಗತಿಕ ಸ್ಥಿತಿಗೆ ತಲುಪಿದ್ದಾರೆ. ಬಡತನಕ್ಕೆ ಬಡವರು ಕಾರಣರಲ್ಲ ಅಥವಾ ಅದು ಬಡವರು ಇಷ್ಟಪಟ್ಟು ಅಪ್ಪಿಕೊಂಡ ಸ್ಥಿತಿಯೂ ಅಲ್ಲ. ಅದೊಂದು ಅಸಹಾಯಕ ಪರಿಸ್ಥಿತಿಯಿಂದ ಜನಿಸಿದ ಅವಮಾನದ, ಅಮಾನವೀಯ ಸ್ಥಿತಿ. ಒಡಲನ್ನು ದಹಿಸುವ ಹಸಿವು ಮೈಮನಸ್ಸುಗಳನ್ನು, ಸ್ವಾಭಿಮಾನ ಪ್ರಾಮಾಣಿಕತೆ ಮೊದಲಾದ ಮೌಲ್ಯಗಳನ್ನು ಮಾರಿಕೊಳ್ಳುವಂತೆ ಮನುಷ್ಯನನ್ನು ಪ್ರಚೋದಿಸುತ್ತದೆ. ಮನುಷ್ಯ ಮನುಷ್ಯತ್ವವನ್ನು ಬಿಡುವಂತೆ ಮಾಡುತ್ತದೆ. ಹಿಂಸೆಯನ್ನು ಹುಟ್ಟುಹಾಕುತ್ತದೆ. ಜಗತ್ತಿನ

ಇತಿಹಾಸವನ್ನು ನೋಡಿದರೆ ಬಹುತೇಕ ರಾಷ್ಟ್ರಗಳ ಆಂತರಿಕ ಯುದ್ಧಕ್ಕೆ ಈ ಬಡತನ, ದಬ್ಬಾಳಿಕೆಗೇ ಕಾರಣವಾಗಿರುವುದು ತಿಳಿದುಬರುತ್ತದೆ. ಇಂತಹ ಸಾಮಾಜಿಕ ಅಸಮಾನತೆಯಾದ ಬಡತನವನ್ನು ತೊಡೆದುಹಾಕುವುದು ಅರಸು ಅವರ ಸಂಕಲ್ಪವಾಗಿತ್ತು. ಇಂದಿರಾಗಾಂಧಿಯವರ ಅನುಯಾಯಿಯಾಗಿ ಅವರ ಮಹತ್ವಾಕಾಂಕ್ಷೆಯ 'ಇಪ್ಪತ್ತು ಅಂಶಗಳ ಸೂತ್ರದ ಪ್ರಣಾಳಿಕೆ'ಯನ್ನು ಅನುಷ್ಠಾನಕ್ಕೆ ತಂದ ಕೀರ್ತಿ ಅವರದು. ದೇಶದ ಹೆಚ್ಚಿನ ರಾಜ್ಯಗಳು ಕಾಂಗ್ರೆಸ್ ಸರಕಾರದ ಆಡಳಿತದಲ್ಲಿದ್ದರೂ, ಇಪ್ಪತ್ತು ಅಂಶಗಳ ಪ್ರಣಾಳಿಕೆಯನ್ನು ಜಾರಿಗೆ ತರುವಲ್ಲಿ ಹಿಂದೇಟು ಹಾಕಿದ್ದವು. ಹೀಗಾಗಿ ದೇಶದಲ್ಲೇ ಈ ಕೀರ್ತಿ ಕರ್ನಾಟಕ ರಾಜ್ಯ ಮತ್ತು ಆಗಿನ ಮುಖ್ಯಮಂತ್ರಿ ದೇವರಾಜ ಅರಸು ಅವರಿಗೆ ಸಲ್ಲುತ್ತದೆ. ಅರಸು ಅವರಿಂದ ದಕ್ಷ ಆಡಳಿತ, ಭೂ ಸುಧಾರಣೆ ಮತ್ತು ಬಡತನದ ಬವಣೆಯಲ್ಲಿದ್ದವರನ್ನು ಮೇಲೆತ್ತುವಂಥ ಮಾತುಗಳೇ ಕೇಳಿ ಬರುತ್ತಿದ್ದವು. ಇಂದಿರಾಗಾಂಧಿ ಪ್ರಧಾನಿಯಾಗಿದ್ದಾಗ ಅವರ ಗಮನಕ್ಕೂ ತಂದು ಈ ವಿಷಯವನ್ನು ಗಂಭೀರವಾಗಿ ಪರಿಗಣಿಸುವಂತೆ ಮಾಡಿದರು. ಆಶ್ಚರ್ಯವೆಂಬಂತೆ ೧೯೭೩ರ ನವೆಂಬರ್ ನಲ್ಲಿ ಬೆಂಗಳೂರಿನಲ್ಲಿ ನಡೆದ ದಕ್ಷಿಣಭಾರತದ ಹಿಂದುಳಿದ ವರ್ಗ ಮತ್ತು ಪರಿಶಿಷ್ಟಜಾತಿ ಪಂಗಡದ ಹಾಗೂ ಅಲ್ಪಸಂಖ್ಯಾತರ ಸಮಾವೇಶದಲ್ಲಿಯೇ, ಪ್ರಧಾನಿ ಇಂದಿರಾಗಾಂಧಿಯವರು 'ಗರೀಬಿ ಹಟಾವೋ' ಘೋಷಣೆ ಮಾಡಿದರು. ದೇವರಾಜ ಅರಸು ಅವರು ನಿಜಲಿಂಗಪ್ಪನವರ ಸಂಪುಟದಲ್ಲಿದ್ದಾಗಲೇ ಯೋಚಿಸಿದ್ದ ಹಲವಾರು ವಿಚಾರಗಳನ್ನು ತಮ್ಮ ಆಡಳಿತದ ಅವಧಿಯಲ್ಲಿ ಜಾರಿಗೆ ತಂದರು. ಅದರಲ್ಲಿ 'ಗರೀಬಿ ಹಟಾವೋ' ಆಂದೋಲನವು ಪ್ರಮುಖವಾದದ್ದು.

**ಹರಿಜನ-ಗಿರಿಜನ ಕಾರ್ಪೋರೇಷನ್ ಸ್ಥಾಪನೆ**

ಅರಸು ಚಿಂತಿಸಿದ ಮಹತ್ವದ ಯೋಜನೆಗಳಲ್ಲಿ ಪ್ರಮುಖವಾದದ್ದು ಹರಿಜನ-ಗಿರಿಜನರ ಕಾರ್ಪೋರೇಷನ್. ಅದರ ಫಲವಾಗಿ ಮೇ ೧೯, ೧೯೭೫ರಂದು 'ಹರಿಜನ-ಗಿರಿಜನರ ಕಾರ್ಪೋರೇಷನ್' ಅಧಿಕೃತವಾಗಿ ಸ್ಥಾಪನೆ ಆಯಿತು. ಬಾಬು ಜಗಜೀವನರಾವ್ ಅವರು ಇದನ್ನು ಉದ್ಘಾಟಿಸಿದ್ದು ಇನ್ನೊಂದು ವಿಶೇಷ. ಇದು ಈ ವರ್ಗಗಳ ಪಾಲಿಗೆ ಒಂದು ದೊಡ್ಡ ಮೈಲುಗಲ್ಲೆಂದರೆ ಸರಿ..ಅಂದು ಮುಂದುವರೆದ ಪ್ರಬಲ ವರ್ಗದ ಜನರು, ಹರಿಜನ-ಗಿರಿಜನರಿಗೆ ಪ್ರತ್ಯೇಕ ಕಾರ್ಪೋರೇಷನ್ ಏತಕ್ಕಾಗಿ ಸ್ಥಾಪನೆ ಮಾಡಬೇಕು ಎಂದು ಬಹಿರಂಗವಾಗಿ ಅಲ್ಲದಿದ್ದರೂ ಆಂತರಿಕವಾಗಿಯಾದರೂ ಅಂದು ಕೊಂಡಿರಬಹುದು. ಇದು ಸಹಜವೇ ಆಗಿದೆ. ಏಕೆಂದರೆ, ಪ್ರತ್ಯೇಕ ಕಾರ್ಪೋರೇಷನ್ ಮಾಡುವುದರಿಂದ ಒಂದು ವರ್ಗದ ಜನರ ಅಭಿವೃದ್ಧಿಗಾಗಿ ಸಮಾಜದ ಭಿನ್ನತೆಯನ್ನು ಉಂಟು ಮಾಡಿದಂತಲ್ಲವೆ? ಭೇದ ಹೆಚ್ಚಿಸಿದಂತಾಗುವುದಿಲ್ಲವೆ? ಈ ರೀತಿ ಅನೇಕ ಪ್ರಶ್ನೆಗಳು ಉದ್ಭವಿಸುವುದು ಸ್ವಾಭಾವಿಕವೇ ಆಗಿದೆ. ಅಂದು ೪-೫ನೇ ಪಂಚವಾರ್ಷಿಕ ಯೋಜನೆಯ ಕಾಲ ಘಟ್ಟದಲ್ಲಿದ್ದ ರಾಜ್ಯ ಆ ೨೫ ವರುಷಗಳ ಅವಧಿಯಲ್ಲಿ ಸಾವಿರಾರು ಕೋಟಿ ಹಣವನ್ನು ಅಭಿವೃದ್ಧಿ ಕಾರ್ಯಗಳಿಗಾಗಿ ಖರ್ಚು ಮಾಡಿತ್ತು. ಆದರೂ ಈ ಹರಿಜನ-ಗಿರಿಜನ ಮತ್ತು ಹಿಂದುಳಿದ ವರ್ಗಗಳಿಗೆ ದೀನ-ದಲಿತರಿಗೆ ಇದರ ಸಂಪೂರ್ಣ ಪ್ರತಿಫಲ ದೊರೆತಿಲ್ಲದಿರುವುದನ್ನು ಅಂಕಿ ಅಂಶಗಳು ಸ್ಪಷ್ಟಪಡಿಸುತ್ತವೆ.. ತಳಮಟ್ಟದ ವರ್ಗಗಳಿಗೆ ಇದರ ಫಲ ದೊರೆತಿಲ್ಲದಿರುವುದನ್ನು ಅಂಕಿ ಅಂಶಗಳು ಸ್ಪಷ್ಟಪಡಿಸುತ್ತವೆ. ತಳಮಟ್ಟದ ವರ್ಗಗಳಿಗೆ ಇದರ ಫಲ ದೊರೆತಿಲ್ಲದಿರುವುದನ್ನು ಆರ್ಥಿಕ ತಜ್ಞರು ಮತ್ತು ರಾಜಕೀಯ ಚಿಂತಕರು ಅಂದು ಸ್ಪಷ್ಟಪಡಿಸಿದ್ದರು. ಇದೆಲ್ಲ ಬಡಜನರಿಗೆ ಸೇರದೇ ಇರುವುದಕ್ಕೆ ಮಧ್ಯದಲ್ಲಿ ಅನೇಕ ಅಡಚಣೆಗಳಿದ್ದವು. ಕಾರಣ ಅನೇಕ ಪಟ್ಟಭದ್ರ ಹಿತಾಸಕ್ತಿಗಳು ತುಂಬಾ ಪರಿಣಾಮಕಾರಿಯಾಗಿ ಕೆಲಸ ಮಾಡಿದ್ದವು. ಎಲ್ಲರಿಗೂ ಸೇರಬೇಕಾದುದ್ದನ್ನು ಈ ಶಕ್ತಿಗಳು ತಾವೇ ಕೈತುಂಬ ಹಿಡಿದುಕೊಂಡಿದ್ದವು. ಅವರ ಬೆರಳ ಸಂದಿಯಲ್ಲಿ ತೊಟ್ಟಿಕ್ಕಿದ್ದು ಮಾತ್ರ ಬಡಜನರಿಗೆ ಸೇರಬಹುದು, ಇಲ್ಲವೇ ಸೇರದೇ ಇರಬಹುದು. ಈ ಅನ್ಯಾಯವನ್ನು ತೊಡೆದು ಹಾಕಲು ಅರಸು ಸಂಕಲ್ಪ ಮಾಡಿದರು. ಅನ್ಯಾಯವನ್ನು ಸರಿ ಮಾಡುವುದೇ ಸಾಮಾಜಿಕ 'ನ್ಯಾಯ' ಎಂಬ ನಂಬಿಕೆ ಅರಸು ಅವರದಾಗಿತ್ತು.

**ಆರ್ಥಿಕ ಅಭಿವೃದ್ಧಿ ಚಿಂತನೆಗಳು**

ಭಾರತ ಸ್ವತಂತ್ರ ನಂತರ ಪ್ರಾಂತ್ಯ ಸರಕಾರಗಳು ಸಂವಿಧಾನದ ಅಡಿಯಲ್ಲಿ ಕಾರ್ಯ ನಿರ್ವಹಿಸತೊಡಗಿದವು. ಮೈಸೂರು ರಾಜ್ಯ ಉದಯವಾದೊಡನೆ, ಈ ರಾಜ್ಯದ ಮೊದಲ ಮುಖ್ಯಮಂತ್ರಿ ಕೆ.ಸಿ.ರೆಡ್ಡಿ ಅವರ ಮಾರ್ಗದರ್ಶನದಲ್ಲಿ ಅನೇಕ ಆರ್ಥಿಕ ಕಾರ್ಯ

ಯೋಜನೆಗಳು ರೂಪ ತಳೆದವು.. ನಂತರ ಅಧಿಕಾರಕ್ಕೆ ಬಂದ ರಾಜ್ಯದ ಮುಖ್ಯಮಂತ್ರಿಗಳು ರಾಜ್ಯದ ಆರ್ಥಿಕ ಅಭಿವೃದ್ಧಿಯ ದೃಷ್ಟಿಯನ್ನಿಟ್ಟುಕೊಂಡು ತಮ್ಮದೇ ನೆಲೆಗಟ್ಟಿನಲ್ಲಿ ಆರ್ಥಿಕ ಯೋಜನೆಗಳನ್ನು ರೂಪಿಸಿ ಅನುಷ್ಠಾನಕ್ಕೆ ತಂದರು. ಅವರೆಲ್ಲರ ನಡುವೆಯೂ ೧೯೭೨ರಲ್ಲಿ ಅಧಿಕಾರಕ್ಕೆ ಬಂದ ದೇವರಾಜ ಅರಸು ರಾಜ್ಯದ ಆರ್ಥಿಕ ವ್ಯವಸ್ಥೆಗೆ ಒಂದು ಹೊಸ ದಿಕ್ಕನ್ನು ನೀಡಲು ಯೋಜನೆಗಳನ್ನು ರೂಪಿಸಿ ಅವುಗಳನ್ನು ಅನುಷ್ಠಾನಕ್ಕೆ ತಂದರು. ಅವುಗಳಲ್ಲಿ ಬಡತನ ನಿರ್ಮೂಲನಾ ಯೋಜನೆ, ಕಿರು ಮತ್ತು ಮಧ್ಯಮಗಾತ್ರದ ನೀರಾವರಿ ಯೋಜನೆಗಳು, ಒಣಭೂಮಿ ಬೇಸಾಯಕ್ಕೆ ಪ್ರೋತ್ಸಾಹ, ಗೃಹಕೈಗಾರಿಕೆ, ಸಣ್ಣ ಕೈಗಾರಿಕೆಗಳ ಸ್ಥಾಪನೆ, ಇಪತ್ತು ಅಂಶಗಳ ಕಾರ್ಯಕ್ರಮ ಮತ್ತು ಹಿಂದುಳಿದ ಪ್ರದೇಶಗಳ ಅಭಿವೃದ್ಧಿ ಯೋಜನೆಗಳು ಮುಖ್ಯವಾದವುಗಳಾಗಿವೆ. ಕೇವಲ ವ್ಯವಸಾಯದಿಂದಲೇ, ರಾಜ್ಯ ಹಾಗೂ ದೇಶ ಅಭಿವೃದ್ಧಿ ಹೊಂದಲು ಸಾಧ್ಯವಿಲ್ಲ ಎಂಬುದನ್ನು ಮನಗಂಡಿದ್ದ ಅರಸು, ಕೃಷಿಯ ಜೊತೆಯಲ್ಲಿ ಕೈಗಾರಿಕೆಗಳು ಬೆಳವಣಿಗೆಯಾಗಬೇಕು. ಮತ್ತು ಭೂ ಉತ್ಪಾದನೆಯಲ್ಲಿನ ಉತ್ಪಾದನೆ ಹಾಗೂ ಕೈಗಾರಿಕೆ ಇವೆರಡರ ನಡುವಿನ ಸಂಬಂಧದ ಆರ್ಥಿಕ ವ್ಯವಹಾರಗಳನ್ನು ನೋಡಿಕೊಳ್ಳಲು ದಕ್ಷತೆಯಿರುವ ಜನರು ಬೇಕು ಎನ್ನುವ ಮಾತನ್ನು ಒತ್ತಿ ಹೇಳಿದ ಅರಸರ ವಿಚಾರಧಾರೆ ಈ ನಿಟ್ಟಿನಲ್ಲಿ ಭಿನ್ನವಾಗಿತ್ತು. ಅಲ್ಲದೆ ಉತ್ಪತ್ತಿ, ದುಡಿಮೆ, ಪ್ರತಿಫಲ ಇವುಗಳ ಬಗ್ಗೆ ನಮ್ಮ ದೃಷ್ಟಿಕೋನಿ ಬದಲಾಗಬೇಕೆನ್ನುವ ಅವರು, ತುಂಬ ಪ್ರಾಯೋಗಿಕವಾಗಿ ಯೋಚನೆ ಮಾಡಿ ಪ್ರತಿಯೊಂದು ಸಮಸ್ಯೆಗೂ ಪ್ರಾಯೋಗಿಕವಾಗಿ ಪರಿಹಾಖ ಕಂಡುಹಿಡಿಯುತ್ತಿದ್ದರು. ಆ ಮೂಲಕ ನಾಡಿನ ಅಭಿವೃದ್ಧಿಯಲ್ಲಿ ಮಹತ್ವದ ಪಾತ್ರ ವಹಿಸಿದರು. ಈ ಯೋಜನೆಗಳು ಕರ್ನಾಟಕದ ಅಭಿವೃದ್ಧಿಯ ಹೆಸರಿನಲ್ಲಿ ಕೈಗಾರಿಕೆಗಳ ಉನ್ನತೀಕರಣ ಮತ್ತು ವಾಣಿಜ್ಯೋದ್ಯಮಗಳ ಬೆಳವಣಿಗೆಗಷ್ಟೇ ಸೀಮಿತವಾಗಲಿಲ್ಲ. ಇಲ್ಲಿನ ಜನಸಾಮಾನ್ಯನ ಜೀವನದ ಬದುಕನ್ನು ದೃಷ್ಟಿಯಲ್ಲಿಟ್ಟುಕೊಂಡು ರೂಪಿತವಾದ ಯೋಜನೆಗಳೆಂಬುದನ್ನು ಯಾರೂ ಮರೆಯುವಂತಿಲ್ಲ ಕರ್ನಾಟಕವು ಇಂದು ಈ ಮಟ್ಟದ ಪ್ರಗತಿಯನ್ನು ಸಾಧಿಸುವಲ್ಲಲಿ ಅವರ ಸರಕಾರದ ಕೊಡುಗೆ ಅಪಾರ. ಇದನ್ನು ಈ ಕೆಳಗಿನ ಅಂಶಗಳಿಂದ ಇನ್ನಷ್ಟು ಗಟ್ಟಿಗೊಳಿಸಬಹುದು.

**ಕೃಷಿ ಹಾಗೂ ನೀರಾವರಿ ಚಿಂತನೆ**

ರಾಜ್ಯದ ಕೃಷಿ ವಿಧಾನದ ಅಭಿವೃದ್ಧಿಯಲ್ಲಿನ ವಿಧಾನಗಳನ್ನು ಗಮನಿಸಿದಾಗ ಈ ಅಭಿವೃದ್ಧಿಗಾಗಿ ಕೆಲವು ನಿರ್ದಿಷ್ಟ ಗುರಿಯಲ್ಲಿ ನಾವು ಮುಂದುವರಿಯಬೇಕಾಗುತ್ತದೆ. ಒಟ್ಟು ಬೇಸಾಯ ಪ್ರದೇಶದಲ್ಲಿ ಶೇ ೧೦ಕ್ಕೂ ಕಡಿಮೆ ಪ್ರದೇಶಕ್ಕೆ ಮಾತ್ರ ನೀರಾವರಿ ಸೌಕರ್ಯವಿದೆ. ಶೇ ೧೦ ರಷ್ಟು ಪ್ರದೇಶಕ್ಕೆ ಸಾಕಷ್ಟು ಮಳೆಯಾಗುತ್ತದೆ. ಉಳಿದ ಒಣಭೂಮಿ ಪ್ರದೇಶ ಅನಿರ್ದಿಷ್ಟ ಮಳೆಯ ಆಶ್ರಯದಲ್ಲಿದೆ. ಇಂಥಹ ಪರಿಸ್ಥಿತಿ ಇದ್ದರೂ ಆಧುನಿಕ ಬೇಸಾಯ ಕ್ರಮಗಳ ಅನುಸರಣಿಯಿಂದ ಕೃಷಿ ಉತ್ಪನ್ನ ಹೆಚ್ಚಿಸುವುದರಲ್ಲಿ ಗಣನೀಯ ಪ್ರಗತಿಯನ್ನು ಸಾಧಿಸಲು ಒಣಭೂಮಿ ಬೇಸಾಯಕ್ಕೆ ಪ್ರೋತ್ಸಾಹ ನೀಡಲು ಅರಸು ಮುಂದಾದರು. ಒಣ ಭೂಮಿಯನ್ನು ಕೃಷಿಗೆ ಯೋಗ್ಯ ಭೂಮಿಯನ್ನಾಗಿ ಮಾಡಿ, ಸಾಗುವಳಿ ಮಾಡಲು ಸುಮಾರು ಹೆಕ್ಟೇರ್ ಪಾಳುಬಿದ್ದ ಭೂಮಿಯನ್ನು ಜಲ ಅಭಿವೃದ್ಧಿ ಯೋಜನೆ ಕಾಯಿದೆಯನ್ನು ಜಾರಿಗೆ ತರುವ ಮುಖಾಂತರ ಕೆರೆ, ಕಾಲುವೆ, ಭಾವಿಯನ್ನು ನಿರ್ಮಿಸಿದರು. ಇದರಿಂದ ರೈತರು ಕೃಷಿ ಚಟುವಟಿಕೆಯಲ್ಲಿ ತೊಡಗಲು ಸಾಧ್ಯವಾಯಿತು. ಅದುವರೆವಿಗೂ ಈ ಪಾಳುಬಿದ್ದ ಭೂಮಿಯನ್ನು ಹಿಡುವಳಿಗೆ ಯೋಗ್ಯ ಭೂಮಿಯನ್ನಾಗಿ ಮಾಡಲು ಯಾವ ಸರಕಾರಗಳು ಆ ತಂಟೆಗೆ ಹೋಗಿರಲಿಲ್ಲ. ಇಂಥ ಪಾಳುಬಿದ್ದ ಭೂಮಿಗೆ ನೀರನ್ನು ಒದಗಿಸುವ ದಿಟ್ಟ ನಿರ್ಧಾರ ಕೈಗೊಂಡಿದ್ದು ಅರಸು ಅವರ ಸರಕಾರದ ಸಾಧನೆಯಾಗಿದೆ. ಅವರು ತೆಗೆದುಕೊಂಡ ಈ ನೀರಾವರಿಯೋಜನೆಯಿಂದ ಸುಮಾರು ಬಡ ರೈತ ಕುಟುಂಬಗಳು ಈವರೆಗೆ ದೂಡಿದ್ದ ನಿರಾಶದಾಯಕ ದಿನಗಳು ಈ ಯೋಜನೆಯಿಂದ ದೂರವಾದವು.

ರಾಜ್ಯದಲ್ಲಿ ಒಣಹವೆ ಮತ್ತು ಮಲೆನಾಡು ಪ್ರದೇಶಗಳಲ್ಲಿ ಒಂದಕ್ಕಿಂತ ಹೆಚ್ಚು ಬೆಳೆ ತೆಗೆಯಲು ಕೆಲವು ಸಂದರ್ಭಗಳಲ್ಲಿ ಮಳೆಯ ಕೊರತೆಯುಂಟಾಗಿ ತಲೆದೋರುವ ಬಿಕ್ಕಟ್ಟನ್ನು ಪರಿಹರಿಸಲು ಅದರಲ್ಲೂ, ಒಣ ಮತ್ತು ಅರೆಒಣ ಪ್ರದೇಶಗಳನ್ನೊಳಗೊಂಡ ಕರ್ನಾಟಕದ ಬಯಲು ನಾಡಲ್ಲಿ ಕೃಷಿ ಚಟುವಟಿಕೆಗಳು ನಿರಂತರಗೊಳ್ಳಲು ನೀರಾವರಿಯ ಅವಶ್ಯಕತೆಯಿತ್ತು ಆದ್ದರಿಂದ ಅವರು ತಮ್ಮ ಆಡಳಿತ ಅವಧಿಯಲ್ಲಿ ಈ 'ಕಿರು ಮತ್ತು ಮಧ್ಯಮ ಗಾತ್ರದ ನೀರಾವರಿ'ಗೆ ಹೆಚ್ಚಿನ ಮಹತ್ವ ನೀಡಿದ್ದು ಗಮನಾರ್ಹ.

**ಕಿರು ಮತ್ತು ಮಧ್ಯಮ ನೀರಾವರಿಯ ಉದ್ದೇಶ**

೧. ಕುಡಿಯುವ ನೀರಿಗೆ ಆಧ್ಯತೆ

೨. ಕಿರು ಮತ್ತು ಮಧ್ಯಮ ಗಾತ್ರದ ನೀರಾವರಿ ಯೋಜನೆಗಳ ಅಡಿಯಲ್ಲಿ ಮತ್ತು ಅಂತರ್ಜಲಗಳ ಬಳಕೆಯಿಂದ ನೀರಾವರಿ ಸಾಮರ್ಥ್ಯವನ್ನು ಹೆಚ್ಚಿಸುವುದು

೩. ಕೃಷಿ ಉತ್ಪಾದನೆಯನ್ನು ಹೆಚ್ಚಿಸುವುದು

೪. ಜಲ ವಿದ್ಯುತ್ ಉತ್ಪಾದನೆಯನ್ನು ಹೆಚ್ಚಿಸುವುದು

೫. ರಾಜ್ಯ ಜಲಸಂಪನ್ಮೂಲ ಮಂಡಳಿ ರಚಿಸುವುದು

ಅರಸು ಅವರ ಈ ಮೇಲಿನ ಉದ್ದೇಶಿತ ಯೋಜನೆಯಿಂದ ಆದಷ್ಟು ಬೇಗ ಹೆಚ್ಚು ಕೃಷಿ ಭೂ ಪ್ರದೇಶಕ್ಕೆ ವಿಫುಲವಾಗಿ ನೀರಾವರಿ ಸೌಲಭ್ಯವನ್ನು ಒದಗಿಸುವುದು ಅವರ ಮಹತ್ತರವಾದ ಆಶಯವಾಗಿತ್ತು. ಕೃಷಿ ಮತ್ತು ಕೈಗಾರಿಕಾ ಕ್ಷೇತ್ರಗಳು ಆರ್ಥಿಕ ಅಭಿವೃದ್ಧಿಯಲ್ಲಿ ವಹಿಸಿದ ಮಹತ್ವದ ಪಾತ್ರವನ್ನು ಮನಗಂಡು ಸರಕಾರ ಆ ವರ್ಷದಲ್ಲಿ(೧೯೭೩-೭೪) ರಾಜ್ಯದ ಆರ್ಥಿಕ ಚಟುವಟಿಕೆಗಳಿಗೆ ಮೀಸಲಿರಿಸಿದ್ದು ಒಟ್ಟು ೧೧೫ ಕೋಟಿರೂಪಾಯಿಗಳು. ಈ ಕೋಟಿ ರೂಪಾಯಿಗಳಲ್ಲಿ ಅರ್ಧಕ್ಕಿಂತಲೂ ಹೆಚ್ಚು ಹಣವನ್ನು ವಿದ್ಯುತ್ ಮತ್ತು ನೀರಾವರಿಗಾಗಿ ನಿಗದಿ ಮಾಡಿತ್ತು. ಈ ಸಂದರ್ಭದಲ್ಲಿ ಭಾರಿ ನೀರಾವರಿ ಯೋಜನೆಗಾಗಿ ೧೦೦ಕೋಟಿ ರೂಪಾಯಿಗಳಿಗೂ ಅಧಿಕ ವೆಚ್ಚ ಮಾಡಲಾಯಿತು. ಸಣ್ಣ ಮತ್ತು ಮಧ್ಯಮ ನೀರಾವರಿ ಯೋಜನೆಗೆ ೭೦ ಕೋಟಿ ರೂಪಾಯಿ ಹಾಗೂ ಬಾವಿಗಳು ಮತ್ತು ಪಂಪ್‌ಸೆಟ್‌ಗಳಿಗೆ ೨೭ ಕೋಟಿ ರೂಪಾಯಿಗಳನ್ನು ವಿನಿಯೋಗಿಸಲಾಗಿತ್ತು. ಈ ರೀತಿಯಾಗಿ ಅಪಾರವಾದ ಹಣವನ್ನು ಉಪಯೋಗಿಸಿ ಹೆಚ್ಚು ಭೂಪ್ರದೇಶಕ್ಕೆ ನೀರಿನ ಸೌಲಭ್ಯವನ್ನು ಒದಗಿಸುವುದು ಅವರ ಮೂಲ ಉದ್ದೇಶವಾಗಿತ್ತು. ಅಂತೆಯೇ ತಮ್ಮ ಅವಧಿಯಲ್ಲಿ ಕ್ರಿಷ್ಣಾ, ಘಟಪ್ರಭಾ, ಕಬಿನಿ, ಹಾರಂಗಿ, ಕಪಿಲ, ಹೇಮಾವತಿ, ಘಟಪ್ರಭಾ, ಕೃಷ್ಣಾ ಮೇಲ್ದಂಡೆ ಯೋಜನೆಗಳನ್ನು ಜಾರಿಗೊಳಿಸಿ ಅವುಗಳನ್ನು ಅನುಷ್ಠಾನಕ್ಕೆ ತಂದು ರಾಜ್ಯದ ಅಭಿವೃದ್ಧಿಗೆ ಗಮನ ನೀಡಿದರು.

**ಕೈಗಾರೀಕಾ ಅಭಿವೃದ್ಧಿ ಚಿಂತನೆ**

'ಕೈಗಾರೀಕರಣ ಇಲ್ಲವೆ ನಾಶ' ಎಂದು ಎಂ.ವಿಶ್ವೇಶ್ವರಯ್ಯನವರು ಹೇಳಿರುವ ಮಾತು ಅಕ್ಷರ ಸಹ ನಿಜ ಎಂದು ಎನಿಸುತ್ತದೆ. ಏಕೆಂದರೆ ಒಂದು ರಾಷ್ಟ್ರದ ಆರ್ಥಿಕ ಅಭಿವೃದ್ಧಿಯಲ್ಲಿ ಕೈಗಾರಿಕೀಕರಣವು ತುಂಬ ಮಹತ್ವ ಪಾತ್ರ ವಹಿಸುತ್ತದೆ. ಅಸಿದ್ಧ ವಸ್ತುಗಳನ್ನು ಸಿದ್ಧವಸ್ತುಗಳನ್ನಾಗಿ ಪರಿವರ್ತಿಸುವ ಕ್ರಿಯೆಗೆ ಕೈಗಾರಿಕೆ ಎಂದು ಕರೆಯುತ್ತೇವೆ. ಕೈಗಾರಿಕೆಯನ್ನು ಸ್ಥಾಪಿಸುವ ಮತ್ತು ಅಭಿವೃದ್ಧಿಪಡಿಸುವ ಕಾರ್ಯಕ್ಕೆ ಕೈಗಾರಿಕೀಕರಣ ಅಥವಾ ಔದ್ಯೋಗೀಕರಣ ಎಂದು ಕರೆಯುತ್ತಾರೆ. ಆದ್ದರಿಂದಲೇ ಕೈಗಾರಿಕೀಕರಣವು ಅಭಿವೃದ್ಧಿಯನ್ನು ಶೀಘ್ರವಾಗಿ ಪರಿಹರಿಸುವ ಒಂದು ವಿಭಾಗ ಎಂದು ಕರೆಯುತ್ತಾರೆ. ಕೈಗಾರಿಕೀಕರಣವೆಂದರೆ ಆರ್ಥಿಕ ಅಭಿವೃದ್ಧಿ ಎಂದು ಇದುವರೆವಿಗೂ ವ್ಯಾಖ್ಯಾನಿಸಲಾಗಿತ್ತು. ಅಂದರೆ ಇದರರ್ಥ ಕೈಗಾರಿಕಾ ಪ್ರಗತಿಯು ಆರ್ಥಿಕ ಅಭಿವೃದ್ಧಿಯ ಪ್ರಮುಖ ರೂಪವೆಂದೇ ಹೇಳಲಾಗಿತ್ತು. ಇದನ್ನು ಮನಗಂಡು ಅರಸು ಅವರು ರಾಜ್ಯವನ್ನು ಆರ್ಥಿಕವಾಗಿ ಮೇಲೆತ್ತುವ ದೃಷ್ಟಿಯಿಂದ ಹಲವಾರು ಕೈಗಾರಿಕಾ ಉದ್ಯಮಗಳ ಸ್ಥಾಪನೆಗೆ ಮುಂದಾದರು. ಅಂತೆಯೇ ಅವರ ಆಡಳಿತ ಅವಧಿಯಲ್ಲಿ ಭದ್ರಾವತಿ ಕಬ್ಬಿಣ ಕಾರ್ಖಾನೆ ಮತ್ತು ಉಕ್ಕಿನ ಕಾರ್ಖಾನೆಯನ್ನು ವಿಸ್ತರಿಸಿದರಲ್ಲದೆ ಅದನ್ನು ಲಾಭ ನೀಡುವ ಉದ್ದಿಮೆಯಾಗಿ ಮಾಡಲಾಯಿತು. ಅಲ್ಲದೆ ಮಂಡ್ಯ ಜಿಲ್ಲೆಯಲ್ಲಿ ಸ್ಕೂಟರ್ ಮತ್ತು ಟಾಯರ್ ಕಾರ್ಖಾನೆಗಳನ್ನು ಮತ್ತು ರಾಜ್ಯದಲ್ಲಿ ಸಿಮೆಂಟ್ ಹಾಗೂ ಸಕ್ಕರೆ ಕಾರ್ಖಾನೆಗಳೂ ಪ್ರಾರಂಭವಾದವು. ಇರಾನಿನ ಸಹಾಯದಿಂದ ಕುದುರೆ ಮುಖದಲ್ಲಿ ಕಬ್ಬಿಣದ ಅದಿರು ಎತ್ತುವ ಬೃಹತ್ ಉದ್ಯಮಕ್ಕೆ ಅಡಿಪಾಯವೂ ಹಾಕಿದರು. ಈ ಸಂದರ್ಭದಲ್ಲಿ ದೇಶಿ ಸಂಸ್ಕೃತಿಯ ಗೃಹ ಮತ್ತು ಗುಡಿಕೈಗಾರಿಕೆಗಳಿಗೆ ಹೆಚ್ಚು ಉತ್ತೇಜನ ನೀಡುತ್ತಾ ಅವುಗಳನ್ನು ನಶಿಸದಂತೆಯೂ ನೋಡಿಕೊಂಡರು.

ಕರ್ನಾಟಕ ರಾಜ್ಯವು ಕೈಗಾರಿಕರಣದಲ್ಲಿ ಅರಸು ಅವಧಿಯ ಸಂದರ್ಭದಲ್ಲಿ ದಿಟ್ಟ ಹೆಜ್ಜೆಯನ್ನಿಟ್ಟು ಪ್ರಗತಿ ಸಾಧಿಸಿದರೆಂಬುದನ್ನು ಮರೆಯುವಂತಿಲ್ಲ ಮತ್ತು ಭಾರತ ಸರಕಾರದ ಎಲ್ಲಾ ಕೈಗಾರಿಕ ನೀತಿಗಳೂ ಕೂಡ ಕಾಲದಿಂದ ಕಾಲಕ್ಕೆ ಕರ್ನಾಟಕದ ಮೇಲು ಗಾಢ ಪ್ರಭಾವ ಬೀರಿವೆ ಎಂಬುದು ಅಷ್ಟೇ ಪ್ರಮುಖವಾದದ್ದು.

**'ಭಾಗ್ಯಜ್ಯೋತಿ'ಯೋಜನೆ ಕುರಿತು ಚಿಂತನೆ**

ದೇಶಕ್ಕೆ ಸ್ವಾತಂತ್ರ್ಯ ಬಂದು ಆರು ದಶಕಗಳೇ ಕಳೆದರೂ ಕೂಡ ಗ್ರಾಮೀಣ ಪ್ರದೇಶಗಳಿಗೆ ವಿದ್ಯುತ್ ಗಗನ ಕುಸುಮವಾಗಿಯೇ ಉಳಿದಿದೆ ಎಂದು ಹೇಳಬಹುದು. ಇದು ದೇಶದ ವಾಸ್ತವ ಸ್ಥಿತಿ ಎಂದರೂ ತಪ್ಪಾಗಲಾರದೇನೋ. ವಿದ್ಯುತ್ತಿನ ಅಭಾವ ನಮ್ಮನ್ನು ಅಷ್ಟು ಕಾಡುತಿತ್ತು. ಇಂಥ ಸಂದರ್ಭದಲ್ಲಿ ಅರಸು ಅವರು ರಾಜ್ಯದಲ್ಲಿ ಅನೇಕ ನೀರಾವರಿ ಯೋಜನೆಗಳನ್ನು ಕೈಗೊಳ್ಳುವುದರೊಂದಿಗೆ ಕೊಂಚ ಮಟ್ಟಿಗೆ ವಿದ್ಯುತ್ತಿನ ಅಭಾವದ ಪರಿಸ್ಥಿತಿಯನ್ನು ಸುಧಾರಿಸಿದರು ಎನ್ನಲಡ್ಡಿಯಿಲ್ಲ. ಏಕೆಂದರೆ, ಎಷ್ಟೋ ಹಳ್ಳಿಜನರ ಬದುಕು ಮನೆಗೊಂದು ದೀಪವಿಲ್ಲದ ಕತ್ತಲೆಯ ಕೋಣೆಯೊಂದರಲ್ಲೇ ತಮ್ಮ ಬದುಕಿನ ಬಂಡಿಯನ್ನು ನಡೆಸಬೇಕಾಗಿತ್ತು. ಹೀಗಾಗಿ ಆ ಕತ್ತಲೆಯನ್ನು ಓಡಿಸಲು ಅರಸು ಅವರು ತಮ್ಮ ಆಡಳಿತದ ಅವಧಿಯಲ್ಲಿ ಪ್ರತಿಯೊಬ್ಬ ಬಡವನಿಗೆ ನಿವೇಶನ ಒದಗಿಸಿದಂತೆ 'ಭಾಗ್ಯಜ್ಯೋತಿ' ಯೋಜನೆ ಅಡಿಯಲ್ಲಿ ಹಣತೆ ಬುಡ್ಡಿ ದೀಪಗಳನ್ನು ಬಳಸಲು ಆರ್ಥಿಕ ಸಾಮರ್ಥ್ಯವಿಲ್ಲದ ಬಡ ಕುಟುಂಬಗಳ ಪ್ರತಿಯೊಂದು ಮನೆಗೂ ಉಚಿತ ವಿದ್ಯುತ್ ದೀಪವನ್ನು ಒದಗಿಸಿದರು. ಹೊತ್ತು ಮುಳುಗಿದ ಕೂಡಲೇ ಉಂಡು ಮಲಗುವ ಬಡವನಿಗೆ ತನ್ನ ನೋವಿನಲ್ಲಿಯೇ ಹುಟ್ಟಿಬರುವ ವೈಚಾರಿಕ ವಿನಿಮಯಕ್ಕೆ ಚಿಂತನೆಗಳಿಗೆ ಅವಕಾಶವೆಲ್ಲಿ, ಬಡವರ ಮತ್ತು ಆರ್ಥಿಕವಾಗಿ ದುಃಸ್ಥಿತಿಯಲ್ಲಿ ಇದ್ದವರ ಮಧ್ಯ ಬೆಳೆದು ಬಂದ ಅರಸು, ಅಂಥ ಬಡ ಜನರೂ ತಮ್ಮ ಮೈಮನಗಳು ಬೆಳಕು ಕಾಣಬೇಕು ಎನ್ನುವ ಆಶಯ ಅವರದಾಗಿತ್ತು. ಪರಿಣಾಮವಾಗಿ ಈ ಭಾಗ್ಯಜ್ಯೋತಿ ಯೋಜನೆಯನ್ನು ಜಾರಿಗೊಳಿಸಿದರು.

**ನಾಡು-ನುಡಿ ಚಿಂತನೆ**

ಸ್ವಾತಂತ್ರ್ಯ ಪೂರ್ವದಿಂದಲೂ ಹಲವಾರು ಚಿಂತಕರು, ಹೋರಾಟಗಾರರು ನಾಡಿನ ಸಂಸ್ಕೃತಿ ಮತ್ತು ಅಭಿವೃದ್ಧಿಗೆ ಶ್ರಮಿಸಿರುವುದನ್ನು ಕಾಣಬಹುದು. ಈ ಹೋರಾಟಕ್ಕೆ ಅವರಲ್ಲಿ ಇದ್ದಂತಹ ಸೈದ್ಧಾಂತಿಕ ವಿಚಾರಗಳೇ ಮುನ್ನುಡಿಯಾಗಿದ್ದವು. ಈ ಬಗೆಯ ಸಾಂಸ್ಕೃತಿಯ ಅಸ್ತಿತ್ವಗಳಿಗೆ ಸ್ವಾತಂತ್ರ್ಯ ಪೂರ್ವದಿಂದಲೂ ಬೇಡಿಕೆ ಮತ್ತು ಹೋರಾಟಗಳು ನಡೆದರೂ ಅದಕ್ಕೆ ಒಂದು ರೂಪ ಬಂದದ್ದು ಸ್ವಾತಂತ್ರ್ಯದ ನಂತರವಷ್ಟೆ. ಭಾರತವು ಗಣರಾಜ್ಯವಾದ ಮೇಲೆ ಭಾಷಾವಾರು ಪ್ರಾಂತ್ಯ ರಚನೆ ಕಾಯಿದೆ ಜಾರಿಯಾದ ನಂತರದಲ್ಲಿ ನಾಡು ಏಕೀಕರಣಗೊಂಡಿತು. ಈ ಹಿನ್ನೆಲೆಯಲ್ಲಿ ಕನ್ನಡ ಮಾತನಾಡುವ ಬಹಳಷ್ಟು ಪ್ರದೇಶಗಳು ಒಂದುಗೂಡಿ ಮೈಸೂರು ರಾಜ್ಯ ಉದಯವಾಯಿತು. ಇದಕ್ಕೆ ಹಲವಾರು ರಾಜಕೀಯ ನಾಯಕರುಗಳು ಮತ್ತು ನಾಡಿನ ಸಾಹಿತಿಗಳು ಸಾಕಷ್ಟು ಶ್ರಮವಹಿಸಿ ದುಡಿದರು. ಅವರಲ್ಲಿ ಡೆಪ್ಯೂಟಿ ಚೆನ್ನಬಸಪ್ಪ, ಸರ್.ಸಿದ್ದಪ್ಪ ಕಂಬಳಿ, ಅ.ನ. ಕೃಷ್ಣರಾಯರು, ಎಸ್.ನಿಜಲಿಂಗಪ್ಪ, ಕೆಂಗಲ್ ಹನುಮಂತಯ್ಯ, ಅಂದಾನಪ್ಪ ದೊಡ್ಡಮೇಟಿ, ಕುವೆಂಪು, ಆಲೂರ ವೆಂಕಟರಾಯರು, ಕಾರಂತರಂಥ ನಾಯಕರು ಪ್ರಮುಖರು. ಆದರೆ ನಾಡಿನ ಏಕೀಕರಣದ ನಂತರ ಕರ್ನಾಟಕ ರಾಜಕೀಯ ಇತಿಹಾಸವನ್ನು ಅವಲೋಕಿಸಿದಾಗ ಜನರ ಸ್ಮೃತಿಯಲ್ಲಿ ಚಿರಸ್ಥಾಯಿಯಾಗಿ ನಿಲ್ಲುವ ವಿರಳ ನಾಯಕರಲ್ಲಿ ಡಿ. ದೇವರಾಜ ಅರುಸು ಅವರು ಒಬ್ಬರು. ಒಬ್ಬ ವ್ಯಕ್ತಿ ಸ್ಮರಣೆಗೆ ಅರ್ಹನಾಗಲು ಕಾರಣ ಆತನ ಅಪೂರ್ವ ಸತ್ವ ಸಾಧನೆಗಳು ಹಾಗೂ ಕಾಲದ ಮೇಲೆ ಅವು ಬೀರುವ ಗಾಢ ಪ್ರಭಾವ. ಅರಸು ಅವರು ಇತಿಹಾಸ ನಿರ್ಮಿಸಿದ ಪರಂಪರೆಯ ಒಡಲಿನಿಂದ ಮೂಡಿಬಂದು, ತಮ್ಮ ಅವಿರತ ದುಡಿಮೆಯಿಂದ ಇತಿಹಾಸ ನಿರ್ಮಿಸಿದವರು. ಅವರು ನಾಡು-ನುಡಿ ಮತ್ತು ಸಂಸ್ಕೃತಿ ಬಗೆಗೆ ತೋರಿದ ಕಾಳಜಿ, ಪ್ರೀತಿ ಅಪಾರವಾದದು. ಆದ್ದರಿಂದ ಅವರು ತಮ್ಮ ಅಧಿಕಾರದ ಅವಧಿಯಲ್ಲೇ ನಾಡಿನ ನಾಮಕರಣ ಮತ್ತು ಕನ್ನಡ ಭಾಷೆಯನ್ನು ಆಡಳಿತ ಭಾಷೆಯಾಗಿ ಕಡ್ಡಾಯಗೊಳಿಸಿದರು ಮತ್ತು ಕರ್ನಾಟಕ ರಾಜ್ಯವನ್ನು ಸಾಂಸ್ಕೃತಿಕವಾಗಿ ಎತ್ತರಕ್ಕೆ ಏರಿಸಿದರು. ಯಾವುದೇ ಒಂದು ನಾಡು, 'ನಾಡು' ಏನಿಸಿಕೊಳ್ಳಬೇಕಾದರೆ ಅಲ್ಲಿನ ನಡೆ-ನುಡಿ ಪರಸ್ಪರ ಸಂಬಂಧವನ್ನು

ಹೊಂದಿರಬೇಕು. ಅದು ಸಮೃದ್ಧ ಹಾಗೂ ಸುಖಮಯವಾಗಿರಬೇಕು. ನಡೆ-ನುಡಿಗಳು ಸರಿಯಾಗಿ ಹೊಂದಿಕೊಂಡು ಹೋದರೆ ಒಂದು ಬಲಿಷ್ಠ ಶಕ್ತ, ಪ್ರಾಮಾಣಿಕ ನಾಡು ಆಗಲು ಸಾಧ್ಯವಾಗುತ್ತದೆ. ಆದಿಕವಿ ಪಂಪ ಈ ಕುರಿತಂತೆ ತನ್ನ ಕಾವ್ಯದಲ್ಲಿ; ಈ ರೀತಿ ಹೇಳಿದ್ದಾನೆ:

*"ಕ್ರಮಮಂ ಕೆಯ್ಕೊಳ್ಳಲೆಂದು ಪುಟ್ಟಿ ಅಕ್ರಮಂ" ಗೆಯ್ದೊಡೆ ಕ್ರಮಮಾಕ್ಕುಮೆ"*

ಎಂಬುದೆ ಆ ನುಡಿ. ಕ್ರಮ ಮತ್ತು ಅಕ್ರಮಗಳು ಸಾಂಸ್ಕೃತಿಕವಾಗಿ ಬೀಜರೂಪದ ನುಡಿಗಳೇ ಆಗಿವೆ ಎಂಬುದನ್ನು ಅರಸು ಗಮನಿಸಿದಂತೆ ಕಾಣುತ್ತದೆ. ೧೯೫೬ರಲ್ಲಿ ಭೌಗೋಳಿಕವಾಗಿ ನಾಡು ಏಕೀಕರಣಗೊಂಡರೂ ಅದು ಮಾನಸಿಕವಾಗಿ ಪೂರ್ಣಗೊಂಡಿರಲಿಲ್ಲ. ಅರಸು ಅವರು ಅದನ್ನು ನಾಡಿಗೆ 'ಕರ್ನಾಟಕ' ಎಂದು ನಾಮಕರಣ ಮಾಡುವ ಮೂಲಕ ಪೂರ್ಣ ಗೊಳಿಸಿದರು. ಹೀಗಾಗಿ ಅರಸು ಅವರನ್ನು 'ಸಂಸ್ಕೃತಿಯ ಹರಿಕಾರ' ಎಂದು ಕರೆದರೆ ತಪ್ಪಾಗಲಾರದು. ಅರಸು ಅವರು ಯಾವುದೇ ಒಂದು ಪುರೋಗಾಮಿ ಶಾಸನವನ್ನು ಅನುಷ್ಠಾನಕ್ಕೆ ತರಬೇಕಾದರೆ ಆ ಶಾಸನಗಳ ಬಗ್ಗೆ ಬಹಳ ಅಧ್ಯಯನ ಮಾಡಿ, ಸಾಕಷ್ಟು ಓದಿಕೊಂಡು ಜ್ಞಾನ ಸಂಗ್ರಹದಿಂದ ಅದಕ್ಕೆ ಬೇಕಾದಂತ ವೈಚಾರಿಕ ಸಿದ್ಧತೆ ಮಾಡಿಕೊಂಡೇ ಮುಂದಿನ ಕ್ರಮ ತೆಗೆದುಕೊಳ್ಳುತ್ತಿದ್ದರು.

ಕರ್ನಾಟಕ ಎಂಬ ಹೆಸರೇ ಮೂಲತಃ ಚೇತನದ ಶಕ್ತಿ, ಇಲ್ಲಿನ ಸಾಹಸಿಗರು ಇತಿಹಾಸ ಪ್ರಸಿದ್ಧ ಸಾಧನೆಗಳಿಂದ ರಾರಾಜಿಸಿದ ಮರೆಯಲಾಗದ ನಾಡು. ಧರ್ಮ, ಸಂಸ್ಕೃತಿ, ಸಾಹಿತ್ಯ ಭಾಷೆ ಹಾಗೂ ಕಲೆಗಳ ತವರೂರು ಈ ಕರ್ನಾಟ. ಬೆಟ್ಟಗುಡ್ಡಗಳ ನೆಲಸಂಪತ್ತು, ಹಿತಕರ ಹವೆ, ನಿತ್ಯಹರಿದ್ವರ್ಣ ಕಾಡುಗಳು, ಸಂಭ್ರಮದ ಜನ, ಸಡಗರದ ಕಡಲ ತೀರ, ಪ್ರಜ್ಞಾವಂತ ಜನಾಂಗ ಇಲ್ಲಿನ ವೈಶಿಷ್ಟ್ಯ. ಸಾಧನೆಯ ದೃಷ್ಠಿಯಿಂದ ನಾಯಕರು ಬಾಳಿ ಬೆಳಗಿದ ನಾಡು ಕರ್ನಾಟಕ. ಈ ನಾಡಿಗೆ ತನ್ನದೇ ಆದ ಒಂದು ಭವ್ಯವಾದ ಪರಂಪರೆಯಿದೆ, ಉಜ್ವಲವಾದ ಇತಿಹಾಸವಿದೆ. ಸಂಸ್ಕೃತಿ, ಭಾಷೆ, ಸಾಹಿತ್ಯ ಈ ನಾಡಿನ ಇತಿಹಾಸದುದ್ದಕ್ಕೂ ವಿಕಾಸಶೀಲವಾಗಿ ನಡೆದು ಬಂದಿವೆ. ಅದಕ್ಕೆ ಅರಸು ಅವರು ಮತ್ತಷ್ಟು ಮಹತ್ವ ನೀಡಿ ನಾಡನ್ನು ವೈಭವೀಕರಿಸಿದರು. ಅರಸು ಅವರ ನಾಡು-ನುಡಿ ಮತ್ತು ಸಂಸ್ಕೃತಿಯ ನಿಲುವುಗಳು ಇಂದಿಗೂ ಪ್ರಸ್ತುತವಾಗಿವೆ.

ಭಾರತ ಸ್ವಾತಂತ್ರ್ಯ, ಕರ್ನಾಟಕ ಏಕೀಕರಣ ಇವು ಈ ಶತಮಾನದ ಕನ್ನಡಿಗರ ಜೀವನದಲ್ಲಿ ಸಂಭವಿಸಿದ ಎರಡು ಮಹತ್ವದ ಸಂದರ್ಭಗಳು. ಇವುಗಳ ಜೊತೆಗೆ ನಾಡಿನ ಮಾಮಕರಣವೂ ಚಾರಿತ್ರಿಕವಾಗಿ ಅಷ್ಟೇ ಮಹತ್ವದ ಘಟನೆಯಾಗಿದೆ. ೧೯೫೬ರಲ್ಲಿ ಕನ್ನಡ ಪ್ರದೇಶಗಳು ಒಂದುಗೂಡಿ ವಿಶಾಲ ಮೈಸೂರು ರಾಜ್ಯವೆಂದು ಕರೆಸಿಕೊಂಡಾಗ ಎಸ್. ನಿಜಲಿಂಗಪ್ಪ ಅವರು ಮುಖ್ಯಮಂತ್ರಿಗಳಾಗಿದ್ದರು. ಈ ಸಂದರ್ಭದಲ್ಲಿ ಕೆಂಗಲ್ ಹನುಮಂತಯ್ಯನವರೂ ಕರ್ನಾಟಕ ನಾಮಕರಣದ ಬಗೆಗೆ ತುಂಬಾ ಉತ್ಸುಕರಾಗಿದ್ದರು. ಆದರೆ, ಅವರ ಆಡಳಿತದ ಅತ್ಯಲ್ಪ ಅವಧಿಯಲ್ಲಿ ಏನನ್ನೂ ಮಾಡಲಾಗಲಿಲ್ಲ. ಅನಂತರ ಬಂದ ರಾಜ್ಯದ ಮುಖ್ಯಮಂತ್ರಿಗಳಾದ ಕಡಿದಾಳ ಮಂಜಪ್ಪ, ಬಿ.ಡಿ. ಜತ್ತಿ, ಎಸ್.ಆರ್. ಕಂಠಿ ಮತ್ತು ವೀರೇಂದ್ರ ಪಾಟೀಲರಂಥ ನಾಯಕರುಗಳಿಗೆ ಈ ನಾಡಿನ ಹೆಸರನ್ನು ಬದಲಾಯಿಸಲಾಗಿರಲಿಲ್ಲ. ಆದರೆ ಡಿ. ದೇವರಾಜ ಅರಸು ೧೯೭೨ರಲ್ಲಿ ರಾಜ್ಯದ ಮುಖ್ಯಮಂತ್ರಿಯಾಗಿ ಅಧಿಕಾರ ವಹಿಸಿಕೊಂಡಿದ್ದೇ ತಡ, ೧ ನವೆಂಬರ್ ೧೯೭೩ರಂದು ನಾಡಿಗೆ 'ಕರ್ನಾಟಕ' ಎಂದು ನಾಮಕರಣ ಮಾಡಿದರು. ಅಲ್ಲದೇ ನಾಡಿನ ಎಲ್ಲಾ ಮಟ್ಟಗಳಲ್ಲಿಯೂ ಕನ್ನಡವನ್ನೇ ಆಡಳಿತ ಭಾಷೆಯಾಗಿ ಬಳಸಬೇಕೆಂದು ಇದೇ ಸಂದರ್ಭದಲ್ಲಿ ಅರಸು ಅವರು ಘೋಷಣೆ ಮಾಡಿದರು.

## ಅರಸು ಅವರ ಕೊನೆಯ ದಿನಗಳು

ಜೂನ್ ೬, ೧೯೮೨ರ ದಿನ ಕರ್ನಾಟಕದ ಜನತೆಗೆ ಸಹಿಸಲಾರದ ದುಃಖದ ದಿನ. ಏಕೆಂದರೆ ಅಂದು ದೇವರಾಜ ಅರಸು ಅವರು ಮರಣ ಹೊಂದಿದ ದಿನ. ಅಂದು ಅವರು ವಿರೋಧ ಪಕ್ಷಗಳ ಏಕತೆಯನ್ನು ಕುರಿತು ರಾಷ್ಟ್ರನಾಯಕರೊಂದಿಗೆ ಸಾಕಷ್ಟು ಚರ್ಚೆ ನಡೆಸಿದ್ದರು. ಮಧ್ಯಾಹ್ನದ ಸುಖ ಭೋಜನ ಮಾಡಿ ತುಸು ಹೊತ್ತು ವಿರಮಿಸಿದ್ದರು. ಸಂಜೆ ನಾಲ್ಕು ಗಂಟೆಯ ಹೊತ್ತಿಗೆ ಅವರ ಆತ್ಮೀಯ ಸ್ನೇಹಿತ ದ್ವಾರಕನಾಥರು ಬಂದು ಅರಸು ಅವರನ್ನು ತಮ್ಮ ನಿವಾಸಕ್ಕೆ ಕರೆದುಕೊಂಡು ಹೋದರು. ಅಲ್ಲಿಯೇ ಮಲಗಿದ್ದಂತೆಯೇ

ಮರಣ ಹೊಂದಿದ್ದರು. ಎಂತಹ ವಿಪರ್ಯಾಸ! ವಿರೋಧ ಪಕ್ಷಗಳನ್ನು ಒಂದು ಗೂಡಿಸುವ ಬಗೆಗೆ ಚರ್ಚೆ ನಡೆಸಿದ್ದ ನಾಯಕ ಒಂದುಗೂಡಿಸದೆ ಕಾಲನ ಕರೆಗೆ ಓಗೊಡ್ಡು, ಒಂಟಿಯಾಗಿ ಸಾವಿನತ್ತ ನಡೆದದ್ದು ಒಂದು ವಿಪರ್ಯಾಸವೇ ಸರಿ.

ಕರ್ನಾಟಕ ರಾಜಕಾರಣದ ಅಖಾಡದಲ್ಲಿ ಅಪೂರ್ವ ಧೀಮಂತಿಕೆಯನ್ನು ತೋರಿದ್ದ ಅರಸು ಸತ್ತಾಗ ಅರಸರನ್ನು ವಿವಾದಾತ್ಮಕ ವ್ಯಕ್ತಿಯನ್ನಾಗಿ ಕಂಡಿದ್ದ ಅವರ ವಿರೋಧಿಗಳೂ ತಮಗರಿವಿಲ್ಲದಂತೆ ಕಣ್ಣೀರು ಸುರಿಸಿದರು. ಅವರ ಈ ಸಾವು ಸಮಸ್ತ ಜನಕೋಟಿಯನ್ನು ದುಃಖದ ಕಡಲಲ್ಲಿ ಮುಳುಗಿಸಿದ್ದಂತೂ ಸತ್ಯ. ಆದರೆ ರಾಜಕೀಯ ನಾಯಕರ 'ಕಣ್ಣೀರಿ'ಗಿಂತ ಜನಸಾಮಾನ್ಯರು ಸುರಿಸಿದ ಕಣ್ಣೀರು ತುಂಬಿದ' ಕಂಬನಿ'ಯಲ್ಲಿ ಅರಸು ಇನ್ನೂ ಬದುಕಿದ್ದರು.

ಅರಸು ಅವರ ಶವಸಂಸ್ಕಾರಕ್ಕೆ ಅವರ ಅಭಿಮಾನಿಗಳಾದಿಯಾಗಿ ರಾಷ್ಟ್ರಮಟ್ಟದ ರಾಜಕಾರಣಿಗಳೆಲ್ಲಾ ತಮ್ಮ ನೆಚ್ಚಿನ ನಾಯಕನ ಅಂತಿಮ ದರ್ಶನಕ್ಕಾಗಿ ಬೆಂಗಳೂರಿಗೆ ದೌಡಾಯಿಸಿ ಬಂದರು. ಅದರಲ್ಲೂ ಅರಸು ಅವರ ಆತ್ಮೀಯ ಬಂಧುವಾದ ಮಾಜಿಪ್ರಧಾನಿ ಚೌದರಿ ಚರಣ್‌ಸಿಂಗರು ಅಗಲಿದ ಮಿತ್ರನಿಗೆ ಅಶ್ರುತರ್ಪಣ ಮಿಡಿದರು. ಕರ್ನಾಟಕ ರಾಜ್ಯದ ಅಂದಿನ ಮುಖ್ಯಮಂತ್ರಿಯಾದ ಆರ್. ಗುಂಡೂರಾವ್, ಚರಣ್‌ಸಿಂಗ್‌ರಂಥ ರಾಷ್ಟ್ರದ ಹಿರಿಯ ನಾಯಕರು ಶವ ಸಂಸ್ಕಾರಕ್ಕೆ ಆಗಮಿಸಿ ಗೌರವ ಸಲ್ಲಿಸಿದರು. ಆದರೆ ಕೇವಲ ಮೂರು ವರುಷಗಳ ಹಿಂದೆ ಚಿಕ್ಕ ಮಗಳೂರಿನ ಉಪಚುನಾವಣೆಯಲ್ಲಿ ಸ್ಪರ್ಧಿಸಿ ಆರಿಸಿ ಬಂದು ಅರಸರಿಂದ ಮತ್ತೇ ರಾಜಕೀಯ ಪುನರ್ ಜನ್ಮ ಪಡೆದಿದ್ದ ರಾಷ್ಟ್ರೀಯ ನಾಯಕಿ ಇಂದಿರಾಗಾಂಧಿಯವರು ಮಾತ್ರ ಸೌಜನ್ಯದ ನಡವಳಿಕೆಯನ್ನು ತೋರದೆ ಅರಸರ ಅಂತಿಮ ಶವಸಂಸ್ಕಾರಕ್ಕೆ ಬಾರದೆ ಇದದ್ದು ಆಶ್ಚರ್ಯದ ಸಂಗತಿಯೇ ಸರಿ. ಒಟ್ಟಿನಲ್ಲಿ ದೇವರಾಜ ಅರಸು ಅವರ ವ್ಯಕ್ತಿತ್ವ ಈಗಿರುವ ರಾಜಕಾರಣಿಗಳ ವ್ಯಕ್ತಿತ್ವದಂತದ್ದಲ್ಲ. ನಾಡಿನ ಇತಿಹಾಸದಲ್ಲಿ ಅವರು ತೆರೆದಿದ್ದ ಚೇತೋಹಾರಿ ಅಧ್ಯಾಯ ಅವರಿಗರಿವಿಲ್ಲದಂತೆ ನಿಗೂಢವಾಗಿ ಮಡಚಿಕೊಂಡಿತು. ಇದು ದೇವರಾಜ ಅರಸರ ದುರಂತವೆನ್ನುವುದಕ್ಕಿಂತ ಸಮಗ್ರ ನಾಡಿನ ದುರಂತವೆನ್ನುವುದೇ ಸೂಕ್ತ.